# <u>ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್ (ರಿ)</u>

ದಿನಾಂಕ:04–09–2022ರಂದು ಬೆಳಿಗ್ಗೆ 10.00 ಗಂಟೆಗೆ ನಗರದ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ಜರುಗಿದ ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್(ರಿ)ನ 27ನೇ ವಾರ್ಷಿಕ ಮಹಾಸಭೆಯ ನಡಾವಳಿಗಳ ವರದಿ.

***

ಸಭೆಯನ್ನು ಬೆಳಗ್ಗೆ 10.00 ಘಂಟೆಗೆ ಕರೆಯಲಾಗಿದ್ದು, ಅಗತ್ಯವಿರುವ ಕೋರಂ ಅಭಾವದಿಂದಾಗಿ ಪ್ರಭಾರ ಕಾರ್ಯದರ್ಶಿಯವರು ಸಭೆಗೆ ಆಗಮಿಸಿದ್ದ ಸದಸ್ಯರಲ್ಲಿ ಒಂದು ಘಂಟೆ ಮುಂದೂಡಿ ಪ್ರಾರಂಭಿಸಲು ಅನುಮತಿ ಕೋರಿದರು. ಅದರಂತೆ ಹಾಜರಿದ್ದ ಸದಸ್ಯರು ಅನುಮತಿ ನೀಡಿದರು. ಶ್ರೀ ಎಂ ಆರ್ ಕೇಶವಪ್ರಸಾದ್ ಹಾಗೂ ಶ್ರೀ ಚಂದ್ರಶೇಖರ್‌ರವರು ಮಾತನಾಡಿ ಈ ಬಗ್ಗೆ ಬೈಲಾ ಅಥವಾ ಕಾನೂನು ಏನು ಹೇಳುತ್ತದೆ ಎಂದು ಕೇಳಿದರು. ಅದರಂತೆ ಪ್ರಭಾರ ಕಾರ್ಯದರ್ಶಿಯವರು ಸಭೆಗೆ ಓದಿ ತಿಳಿಸಿದರು. ಶ್ರೀ ಡಿ ಎನ್ ಕೃಷ್ಣಮೂರ್ತಿಯವರು ಶ್ರೀ ಕೇಶವಪ್ರಸಾದ್‌ರವರನ್ನು ಕುರಿತು ಮಾತನಾಡಿ ಸಭೆಯನ್ನು ಅದೇ ದಿನಕ್ಕೆ ಯಾವ ಸಮಯಕ್ಕೆ ಬೇಕಾದರೂ ಸಹ ಅಧ್ಯಕ್ಷರಿಗೆ ಮುಂದೂಡಬಹುದಾದ ಅಧಿಕಾರ ಇರುತ್ತದೆ. ಶ್ರೀ ಕೇಶವಪ್ರಸಾದ್‌ರವರು ತಾವೂ ಸಹ ನಿರ್ದೇಶಕ ಮಂಡಲಿಯಲ್ಲಿ ಸದಸ್ಯರಾಗಿದ್ದಿರಿ, ನಿಮಗೂ ಸಹ ಇದು ತಿಳಿದ ವಿಷಯವಾಗಿರುತ್ತದೆ ಎಂದರು. ಈ ಸಮಯದಲ್ಲಿ ಆಗಮಿಸಿದ್ದ ಹಿರಿಯ ಸದಸ್ಯರಾದ ವೆಂಕಟಸುಬ್ಬು ಸದಸ್ಯತ್ವದ ಸಂಖ್ಯೆ 349ರವರು ಮಾತನಾಡಿ ಇಷ್ಟೆಲ್ಲಾ ಖರ್ಚು ಮಾಡಿ ಸರ್ವಸದಸ್ಯರ ಸಭೆ ಕರೆದು ಕೋರಂ ಬರದೆ ಸಭೆ ರದ್ದು ಪಡಿಸುವುದು ಎಂದರೆ ಸರಿ ಇರುವುದಿಲ್ಲ. ಕೆಲವು execptional casesನಲ್ಲಿ ನಿರ್ದಿಷ್ಟ ಕೋರಂ ಇಲ್ಲದಿದ್ದರೂ ಸಭೆ ನಡೆಸಬಹುದಾಗಿ ತಿಳಿಸಿದರು. ಸದಸ್ಯರಾದ ಶ್ರೀ ಕೆ ಎನ್ ಶ್ರೀನಿವಾಸ ಶರ್ಮ ಸದಸ್ಯತ್ವದ ಸಂಖ್ಯೆ 4590 ರವರು ಮಾತನಾಡಿ ಕಾಯಿದೆ ಕಲಂ ಪ್ರಕಾರ ಸಂಘದ ಸದಸ್ಯರ ಶೇ.10 ಅಥವಾ 1000 ಸದಸ್ಯರು ಇದರಲ್ಲಿ ಯಾವುದು ಕಡಿಮೆ ಅದನ್ನು ಪರಿಗಣಿಸಿ ಸಭೆ ಆರಂಭಿಸುವ ಅವಕಾಶವಿರುವ ಬಗ್ಗೆ ಮಾಹಿತಿ ಸಭೆಗೆ ನೀಡಿದರು. ಸದಸ್ಯರಾದ ಶ್ರೀ ಜಯಶೀಲಾ ರಾವ್ (ಸದಸ್ಯತ್ವದ ಸಂಖ್ಯೆ 6941) ರವರು ಮಾತನಾಡಿ ಸಂಸ್ಥೆ ಉಡುಗೊರೆ ನೀಡುವುದರ ಮೂಲಕ ಸದಸ್ಯರನ್ನು ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಮಾಡಬಹುದಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಈ ಸಮಯದಲ್ಲಿ ಸಭೆ ಪ್ರಾರಂಭಿಸಲು ಅಗತ್ಯವಿರುವ ಕೋರಂ ಬಗ್ಗೆ ಪ್ರಭಾರ ಕಾರ್ಯದರ್ಶಿಯವರು ಮಾಹಿತಿ ನೀಡಿ ಅಧ್ಯಕ್ಷರ ಅನುಮತಿ ಪಡೆದು ಸದಸ್ಯರುಗಳ ಅನುಮತಿಯನ್ನು ಕೋರಿ ಸಭೆ ಪ್ರಾರಂಬಿಸಲಾಯಿತು. ಅದರಂತೆ ಬೆಳಿಗ್ಗೆ 11.30 ಘಂಟೆಗೆ ಸಂಘದ ಅಧ್ಯಕ್ಷರಾದ ಶ್ರೀ ಸಿ.ವಿ. ಪಾರ್ಥಸಾರಥಿರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಪ್ರಾರಂಭಿಸಲಾಯಿತು.

**ಕೋರಂಗೆ ಅವಶ್ಯವಿರುವ ಸದಸ್ಯರ ಸಂಖ್ಯೆ: 494**
**ಸಭೆಗೆ ಹಾಜರಾಗಿದ ಸದಸ್ಯರ ಒಟ್ಟು ಸಂಖ್ಯೆ: 1517**

1. **<u>ಪ್ರಾರ್ಥನೆ:</u>** ಸಂಘದ ನಿರ್ದೇಶಕರಾದ ಶ್ರೀಮತಿ ರೇಖಾರವರು ಸುಶ್ರಾವ್ಯವಾಗಿ ಹಾಡಿದ ವಿನಾಯಕನ ಸ್ತುತಿಯೊಂದಿಗೆ ಸರ್ವ ಸದಸ್ಯರ ಸಭೆಯು ಪ್ರಾರಂಭವಾಯಿತು.

2. **<u>ಸಾಮೂಹಿಕ ಶಾಂತಿ ಮಂತ್ರ:</u>** ಸಭೆಯಲ್ಲಿ ಹಾಜರಿದ್ದವರೆಲ್ಲರೂ ಶ್ರದ್ಧಾಪೂರ್ವಕವಾಗಿ ಶಾಂತಿಮಂತ್ರವನ್ನು ಪಠಿಸಿದರು. ಅಗಸ್ತ್ಯ ಮಹಾಮುನಿಗಳಿಗೆ ಪೂಜೆ ಸಲ್ಲಿಸಿದ ನಂತರ ದೀಪ ಬೆಳಗಿಸುವ ಮೂಲಕ ಮಹಾ ಸಭೆಯ ಕಾರ್ಯಕಲಾಪಗಳಿಗೆ ಚಾಲನೆ ನೀಡಲಾಯಿತು.

**<u>3. ಸ್ವಾಗತ ಭಾಷಣ:</u>**

ಸಂಘದ ನಿರ್ದೇಶಕರಾದ ಶ್ರೀ ಎನ್ ಎಸ್ ರಂಗನಾಥ್‌ರವರು ಸ್ವಾಗತ ಭಾಷಣವನ್ನು ಮಾಡುತ್ತಾ, ವೇದಿಕೆ ಮೇಲೆ ಉಪಸ್ಥಿತರಾದ ಸಂಘದ ಅಧ್ಯಕ್ಷರಾದ ಶ್ರೀ ಸಿ ವಿ ಪಾರ್ಥಸಾರಥಿರವರಿಗೆ, ಉಪಾಧ್ಯಕ್ಷರಾದ ಶ್ರೀ ಹೆಚ್ ಎಸ್ ಪ್ರಶಾಂತ್

ತಾತಾಚಾರ್‌ರವರಿಗೆ, ಖಜಾಂಚಿಗಳಾದ ಶ್ರೀ ಎಂ ಡಿ ಗೋಪಿನಾಥ್‌ರವರಿಗೆ ಹಾಗೂ ಸಂಘದ ನಿರ್ದೇಶಕ ಮಂಡಲಿ ಸದಸ್ಯರಾದ ಶ್ರೀಯುತರಾದ ಕೆ ನಾಗರಾಜ್, ಎಂ ಆರ್ ಪ್ರೀತನ್, ಎನ್ ಪಣಿರಾಜ್, ಎಸ್ ಎನ್ ನಾಗಶಂಕರ, ಎಂ ಆರ್ ಬಾಲಕೃಷ್ಣ, ಎನ್ ಎಸ್ ರಂಗನಾಥ್, ಕೆ ಎನ್ ಅರುಣ್, ನಾಗೇಂದ್ರ, ಶ್ರೀಮತಿ ರೇಖಾ, ಶ್ರೀಮತಿ ಎಂ ಎನ್ ಸೌಮ್ಯ ಹಾಗೂ ಶ್ರೀಮತಿ ಎಸ್ ರಾಜಮ್ಮರವರುಗಳಿಗೆ ಹೃತ್ಪೂರ್ವಕವಾದ ಸ್ವಾಗತವನ್ನು ಕೋರಿದರು. ಮುಂದುವರೆದು ಸಂಘದ 2021–22ನೇ ಸಾಲಿನ ಲೆಕ್ಕಪರಿಶೋಧನೆ ಮಾಡಿದ ಸನ್ನದು ಲೆಕ್ಕಿಗರಾದ ಶ್ರೀ ಸದಾಶಿವ ಕೆ ಎಸ್ ಹಾಗೂ ಅವರ ಸಿಬ್ಬಂದಿಯವರಿಗೆ, ಆಂತರಿಕ ಲೆಕ್ಕಪರಿಶೋಧಕರಾದ ಶ್ರೀ ಬಿ ಎಲ್ ವೆಂಕಟನರಸಿಂಹನ್, ಕಾನೂನು ಸಲಹೆಗಾರರಾದ ಶ್ರೀ ಕೆ ಟಿ ಸ್ವಾಮಿ, ಶ್ರೀ ಎಂ ಎನ್ ಶ್ರೀನಿವಾಸ್ ಮತ್ತು ಶ್ರೀ ಡಿ ಬಿ ಜೋಷಿರವರಿಗೆ, ಸಂಘದ ಸ್ಥಿರಾಧಾರ ಸಾಲದ ಕಟ್ಟಡ ಮೌಲ್ಯಮಾಪಕರಾದ ಶ್ರೀ ಕೆ ಶ್ರೀನಿವಾಸ, ಸಂಘದ TDS ಸಲಹೆಗಾರರಾದ ಶ್ರೀ ಎನ್ ಡಿ ಶ್ರೀನಿವಾಸ್ ಮತ್ತು ಸಂಘದ ತೆರಿಗೆ ಸಲಹೆಗಾರರಾದ ಶ್ರೀ ಜಿ ಎನ್ ಅನಂತವರ್ಧನರವರಿಗೆ ಸುಸ್ವಾಗತವನ್ನು ಕೋರಿದರು. ಇಂದಿನ ಕಾರ್ಯಕ್ರಮದ ನಿರ್ವಹಣೆಗೆ ಶ್ರಮಿಸಿರುವ ಪ್ರಭಾರ ಕಾರ್ಯದರ್ಶಿ ಮತ್ತು ಸಿಬ್ಬಂದಿ ವರ್ಗದವರಿಗೆ ಹಾಗೂ ಹೆಚ್ಚುವರಿ ಕಾರ್ಯದ ನಿಮಿತ್ತ ಹೊಯ್ಸಳ ಕರ್ನಾಟಕ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳು ಆಗಮಿಸಿದ್ದು, ಅವರನ್ನು ಸಭೆಗೆ ಸ್ವಾಗತಿಸಿದರು. ಎಲ್ಲರಿಗೂ ಸ್ವಾಗತಿಸಿದ ನಿರ್ದೇಶಕರಾದ ಶ್ರೀ ಎನ್ ಎಸ್ ರಂಗನಾಥ್‌ರವರನ್ನು ಸಂಘದ ಅಧ್ಯಕ್ಷರು ಸ್ವಾಗತಿಸಿದರು.

**4. 27ನೇ ವಾರ್ಷಿಕ ಮಹಾಸಭೆಯ ಸೂಚನಾ ಪತ್ರವನ್ನು ಓದಿ ದಾಖಲಿಸುವುದು ಮತ್ತು ಮುದ್ರಣ ದೋಷದ ಬಗ್ಗೆ:**

27ನೇ ವಾರ್ಷಿಕ ಮಹಾಸಭೆಯ ಸೂಚನಾ ಪತ್ರವನ್ನು ಪ್ರಭಾರ ಕಾರ್ಯದರ್ಶಿಯವರಾದ ಶ್ರೀಮತಿ ಎನ್ ವೀಣಾರವರು ಸಭೆಗೆ ಓದಿ ದಾಖಲಿಸಿದರು.

ನಂತರ ಮಹಾಸಭೆಯ ವರದಿಪುಸ್ತಕದಲ್ಲಿನ ಮುದ್ರಣದೋಷವನ್ನು ತಿದ್ದುಪಡಿ ಮಾಡಿಕೊಳ್ಳಲು ಕೇಳಿಕೊಂಡರು.

**ವಿವರ:** ಮುಖಪುಟದ ಹಿಂಭಾಗ (2ನೇ ಪುಟ) :– ವರದಿ ಸಾಲಿನಲ್ಲಿ ಠೇವಣಿಗಳ ಮೇಲಿನ ಬಡ್ಡಿ– ನಿಶ್ಚಿತ ಠೇವಣಿ: 181 ದಿನಗಳಿಂದ 1 ವರ್ಷದವರೆಗೆ ಶೇ.5.0 ಹಾಗೂ 13 ತಿಂಗಳಿಂದ 24 ತಿಂಗಳವರೆಗೆ ಶೇ.5.5 ಎಂದು ತಿದ್ದುಪಡಿ ಮಾಡಿಕೊಳ್ಳಲು ಸದಸ್ಯರಲ್ಲಿ ಮನವಿ ಮಾಡಲಾಗಿದೆ.

ಸದಸ್ಯರಾದ ಶ್ರೀ ಕೆ ಎನ್ ಶ್ರೀನಿವಾಸಶರ್ಮರವರು(ಸ.ಸಂಖ್ಯೆ 4590) ಮಾತನಾಡಿ ಪ್ರಭಾರ ಕಾರ್ಯದರ್ಶಿಯವರು ಸೂಚನಾ ಪ್ರಕಟಣೆ ಓದಿದ ನಂತರ ಮುಂದುವರೆದ ಪುಟ ಸಂಖ್ಯೆ 02ರ ಕಾರ್ಯಸೂಚಿ ಓದಿ ಅನುಮೋದನೆ ಪಡೆದು ಮುದ್ರಣ ದೋಷದ ಬಗ್ಗೆ ಮಾಹಿತಿ ನೀಡಬೇಕು ಎಂದು ತಿಳಿಸಿದರು. ಅಧ್ಯಕ್ಷರು ಪ್ರಭಾರ ಕಾರ್ಯದರ್ಶಿಯವರಿಗೆ ವಿಷಯ ಸೂಚಿ ಓದುವಂತೆ ತಿಳಿಸಿದರು. ಅದರಂತೆ ಪ್ರಭಾರ ಕಾರ್ಯದರ್ಶಿಯವರು ಓದಿ ಸದಸ್ಯರು ಸೂಚಿಸಿ ಅನುಮೋದನೆ ನೀಡಲು ಮನವಿ ಮಾಡಿದರು. ವಿಷಯ ಸೂಚಿ ಸಂಖ್ಯೆ:14ಕ್ಕೆ ಶ್ರೀ ಕೆ ಎನ್ ಶ್ರೀನಿವಾಸ ಶರ್ಮರವರು (ಸ.ಸಂಖ್ಯೆ 4590), ಶ್ರೀ ಎಂ ಆರ್ ಕೇಶವ ಪ್ರಸಾದ್ ಸದಸ್ಯತ್ವದ ಸಂಖ್ಯೆ:802 ಹಾಗೂ ಶ್ರೀ ಚಂದ್ರಶೇಖರ್ ಸದಸ್ಯತ್ವದ ಸಂಖ್ಯೆ:3385 ಅಸಮ್ಮತಿ ಸೂಚಿಸಿದರು. ಅಧ್ಯಕ್ಷರು ಮಾತನಾಡಿ ಕಾರ್ಯಕ್ರಮ ಪಟ್ಟಿಯಂತೆ ಚರ್ಚಿಸಿ ಆಯಾಯ ವಿಷಯಗಳಿಗೆ ಅಲ್ಲೇ ಉತ್ತರಿಸುವುದಾಗಿ ತಿಳಿಸಿದರು. ಇದಕ್ಕೆ (ಸದಸ್ಯತ್ವದ ಸಂಖ್ಯೆ:3573) ಶ್ರೀ ರಮೇಶ್ ಕುಮಾರ್‌ರವರು ಮಾತನಾಡಿ ಇಂದಿನ ಕಾರ್ಯಕ್ರಮ ಕಾನೂನು ರೀತಿಯಾಗಿ ನಡೆಸುವಂತೆ ಅಧ್ಯಕ್ಷರು ಸಭೆಗೆ ತಿಳಿಸಬೇಕಾಗಿ ಹೇಳಿದರು. ಅಧ್ಯಕ್ಷರು ಮಾತನಾಡಿ ಕಾನೂನು ಪ್ರಕಾರ ಕಾರ್ಯಕ್ರಮಗಳು ನಡೆಯುವುದಾಗಿ ತಿಳಿಸಿದರು. ಮುಂದುವರೆದು ಮಾತನಾಡಿ ವಿಷಯಸೂಚಿ ಪ್ರಕಾರ ಆಯಾ ವಿಷಯಗಳು ಚರ್ಚೆಗೆ ಬಂದಾಗ ತಮ್ಮ ಅಭಿಪ್ರಾಯ ಹಾಗೂ ಅಸಮ್ಮತಿ ಸೂಚಿಸಿ ಕಾರ್ಯಸೂಚಿಯಂತೆ ಕಾರ್ಯಕ್ರಮ ಮುಂದುವರೆಸಲು ಸದಸ್ಯರಿಗೆ ತಿಳಿಸಿದರು.

ಸೂಚಕರು: (ಸದಸ್ಯತ್ವದ ಸಂಖ್ಯೆ:1451) ಕೇಶವ ರಾವ್ ಎಂ ಎಸ್

ಅನುಮೋದಕರು: (ಸದಸ್ಯತ್ವದ ಸಂಖ್ಯೆ:3247) ಆಂಡಾಳ್ ಗೋಪಾಲಸ್ವಾಮಿ ಎಸ್

**5. ಮೃತರಾದ ಸದಸ್ಯರುಗಳಿಗೆ ಶ್ರದ್ಧಾಂಜಲಿ:**

2021–22ನೇ ಸಾಲಿನಲ್ಲಿ ಮೃತರಾದ ಸದಸ್ಯರುಗಳ ಈ ಕೆಳಗಿನ ಪಟ್ಟಿಯನ್ನು ನಿರ್ದೇಶಕರಾದ ಶ್ರೀ ನಾಗೇಂದ್ರರವರು ಓದಿದರು. ಮೃತರಾದ ಎಲ್ಲ ಸದಸ್ಯರುಗಳನ್ನು ಸ್ಮರಿಸುತ್ತಾ ವಸುದೇವ ಸುತಂ ದೇವಂ ಕಂಸ ಚಾಣೂರ

ಮರ್ದನಮ್ ದೇವಕಿ ಪರಮಾನಂದಂ ಕೃಷ್ಣಂ ವಂದೇ ಜಗದ್ಗುರುಮ್ ಎಂಬ ಕೃಷ್ಣಾಷ್ಟಕವನ್ನು ಪಠಿಸುತ್ತಾ ಮೃತರ ಆತ್ಮಕ್ಕೆ ಶಾಂತಿ ಕೋರುವ ಸಂಕೇತವಾಗಿ ಒಂದು ನಿಮಿಷ ಮೌನ ಆಚರಿಸುವ ಮೂಲಕ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು. ಸಂಸ್ಥೆಯ ಗಮನಕ್ಕೆ ಬಾರದೇ ಇರುವ ಮೃತ ಸದಸ್ಯರಿಗೂ ಶ್ರದ್ಧಾಂಜಲಿ ಸಲ್ಲಿಸಲಾಯಿತು.

| ಕ್ರ. ಸಂ. | ಸದಸ್ಯತ್ವದ ಸಂಖ್ಯೆ | ಮೃತ ಸದಸ್ಯರ ಹೆಸರು | ಕ್ರ. ಸಂ. | ಸದಸ್ಯತ್ವದ ಸಂಖ್ಯೆ | ಮೃತ ಸದಸ್ಯರ ಹೆಸರು |
|---|---|---|---|---|---|
| 1 | 5708 | ನಾಗಲಕ್ಷ್ಮಿ ಎಸ್ | 34 | 4393 | ಶಾರದಮ್ಮ |
| 2 | 50519 | ಸಿ ವಿ ಗಂಗಾಧರ್ | 35 | 72 | ಸುಬ್ರಹ್ಮಣ್ಯ ಎನ್ |
| 3 | 5275 | ಎನ್ ವಿ ಪ್ರಭಾಕರ್ | 36 | 1481 | ಅನಂತಮೂರ್ತಿ ಜಿ |
| 4 | 4579 | ಚೈತನ್ಯ ಆರ್ | 37 | 2261 | ಕುಮಾರಗುರು ಎಂ ಎಸ್ |
| 5 | 709 | ಜಯಶ್ರೀ ನಾಗರಾಜನ್ | 38 | 1324 | ಚಿಂತಾಮಣಿ ಜೆ ಕೆ ಎಸ್ |
| 6 | 2658 | ವೆಂಕಟಚಾರಿ ಕೆ ಎಸ್ | 39 | 4752 | ರುಕ್ಮಿಣಿ |
| 7 | 4359 | ನಿತ್ಯಾನಂದ ಕಶ್ಯಪ್ ಸಿ ಎಸ್ | 40 | 5825 | ರಂಗರಾಜನ್ ಎಸ್ ವಿ |
| 8 | 3949 | ನಾಗರತ್ನ ಆರ್ | 41 | 4001 | ನಾಗರಾಜು ಕೆ |
| 9 | 7588 | ಲಕ್ಷ್ಮೀದೇವಮ್ಮ ಬಿ ವಿ | 42 | 6146 | ಸಾವಿತ್ರಮ್ಮ |
| 10 | 4520 | ಹೆಚ್ ವಿ ಕೃಷ್ಣಮೂರ್ತಿ | 43 | 2192 | ಸುಶೀಲ ಬಾಯಿ ಎನ್ |
| 11 | 2073 | ವೆಂಕಟಾಚಲಯ್ಯ ಎಂ | 44 | 5533 | ಗೋಪಾಲ ರಾವ್ ಸಿ ಎನ್ |
| 12 | 5836 | ರಮೇಶ ಟಿ ಎಂ | 45 | 5913 | ಶಾಂತ ಟಿ ಆರ್ |
| 13 | 3933 | ಗರುಡಪ್ರಕಾಶ್ | 46 | 6244 | ರಾಧಕೃಷ್ಣ ರಾವ್ ಎ |
| 14 | 3295 | ಪದ್ಮಾವತಿ ಕೆ ಎಸ್ | 47 | 50234 | ನವೀನ್ ಬಿ |
| 15 | 627 | ಬಾಲಸುಬ್ರಹ್ಮಣ್ಯಂ ಎಸ್ ಎಸ್ | 48 | 6636 | ನಾಗಭೂಷಣ ಟಿ ಕೆ |
| 16 | 1696 | ಸತ್ಯಸಂತುಷ್ಟ ಟಿ ವಿ | 49 | 1167 | ನರಸಿಂಹಮೂರ್ತಿ ಕೆ |
| 17 | 50282 | ಶ್ರೀರಾಮ ರಾಜೇ ಅರಸ್ | 50 | 5956 | ಪ್ರಭಾಕರ್ ಕೆ |
| 18 | 411 | ಗೋಪಾಲಕೃಷ್ಣ ಕೆ ಆರ್ | 51 | 5158 | ಬಾಲಾಜಿ ಬಿ ಎನ್ |
| 19 | 2883 | ಜಯಪ್ರಸಾದ್ ಕೆ ಎಸ್ | 52 | 3816 | ಜರ್ನಾಧನ ಜಿ ಕುರ್ತುಕೋಟಿ |
| 20 | 1641 | ರಂಗರಾಮಯ್ಯ ಕೆ ಪಿ | 53 | 3282 | ಗುರುರಾಜ್ ಪಿ ಆರ್ |
| 21 | 6680 | ಕೃಷ್ಣಮೂರ್ತಿ ಎನ್ | 54 | 1068 | ರಾಮರಾವ್ ಎಂ ವಿ |
| 22 | 521 | ವಿಶ್ವನಾಥ್ ರಾವ್ ಬಿ ಎಸ್ | 55 | 4075 | ಸುಶೀಲಮ್ಮ ಎನ್ |
| 23 | 3327 | ಶ್ರೀನಿವಾಸನ್ ಎಸ್ | 56 | 4714 | ಗುರುರಾಜ್ ಡಿ ಬಿ |
| 24 | 4764 | ಅನುಸೂಯ | 57 | 1100 | ವೆಂಕಟರಾಮು ವಿ ಕೆ |
| 25 | 6461 | ಸುಶೀಲ ಎಂ ಎಸ್ | 58 | 2652 | ಚಂದ್ರಮೋಹನ್ ಡಿ |
| 26 | 341 | ಶ್ರೀಪಾದ ರಾವ್ ಎಂ ಎಸ್ | 59 | 50314 | ಶಿವಕುಮಾರ್ ಎಂ |
| 27 | 50005 | ರಾಮಸ್ವಾಮಿ ಬಿ ಎಸ್ | 60 | 4749 | ರವಿಕುಮಾರ್ ಹೆಚ್ ಸಿ |
| 28 | 2110 | ಶ್ರೀಧರನ್ | 61 | 2913 | ರಾಮ್‌ಕುಮಾರ್ ಎಂ ಎಸ್ |
| 29 | 4550 | ಶ್ರೀನಿವಾಸನ್ ಕೆ ಆರ್ | 62 | 5056 | ಲಕ್ಷ್ಮಿನಾರಾಯಣ ರಾವ್ ಎಂ |
| 30 | 3927 | ಗೌರಮ್ಮ | 63 | 5389 | ನಾಗರತ್ನಮ್ಮ |
| 31 | 470 | ನಿರುಪಮ ಕೇಶವ್ | 64 | 6716 | ಲಕ್ಷ್ಮಿಕಾಂತ |

| | | | | | |
|---|---|---|---|---|---|
| 32 | 3517 | ನಾಗೇಶ್ ಕಾಮತ್ | 65 | 50392 | ಭುವನೇಶ್ವರಿ |
| 33 | 4310 | ಅನಂತಪದ್ಮನಾಭ ಎಸ್ | | | |

**6. 26ನೇ ವಾರ್ಷಿಕ ಮಹಾಸಭೆಯ ನಡಾವಳಿಗಳನ್ನು ಓದಿ ದಾಖಲಿಸುವುದು:**

ನಿರ್ದೇಶಕರಾದ ಶ್ರೀ ಎಂ ಆರ್ ಬಾಲಕೃಷ್ಣರವರು, ಸಂಘದ 26ನೇ ವಾರ್ಷಿಕ ಮಹಾಸಭೆಯ ನಡಾವಳಿಯನ್ನು ಸಭೆಗೆ ಮಂಡಿಸಿದರು. ಶ್ರೀ ಎಂ ಆರ್ ಕೇಶವಪ್ರಸಾದ್‌ರವರು ಮಾತನಾಡಿ ಹಿಂದಿನ ಸಭೆಯ ಅನುಸರಣಾ ವರದಿಯ ಬಗ್ಗೆ ಕೇಳುತ್ತಿದ್ದೇನೆ, ಅದರಂತೆ ಹಿಂದಿನ ಸಭೆಯಲ್ಲಿ ಸಿಬ್ಬಂದಿವರ್ಗದವರಿಗೆ ವಿತರಿಸುವ ಎಕ್ಸ್-ಗ್ರೇಷಿಯಾವನ್ನು ಲಾಭಾಂಶ ಹಂಚಿಕೆ ಯಿಂದ ವಿತರಿಸಬೇಕು ಎಂದು ತೀರ್ಮಾನವಾಗಿತ್ತು, ಅದರಂತೆ ಕ್ರಮ ಕೈಗೊಳ್ಳಲಾಗಿದೆಯಾ ಎಂದು ಕೇಳಿದರು. ಅಧ್ಯಕ್ಷರು ಮಾತನಾಡಿ ಹಿಂದೆ ಮಾಡುತ್ತಿದ್ದಂತೆ ಮಾಡಲಾಗಿದೆ, ಮುಂದೆ ಸರಿಪಡಿಸಿಕೊಳ್ಳೋಣ ಎಂದರು. ಸದಸ್ಯತ್ವದ ಸಂಖೆ:3385 ಚಂದ್ರಶೇಖರ್‌ರವರು ಮಾತನಾಡಿ ಕಳೆದ ಸರ್ವಸದಸ್ಯರ ಸಭೆಯಲ್ಲಿ ಆಂತರಿಕ ಲೆಕ್ಕಪರಿಶೋಧಕರ ಹಾಗೂ ಸನ್ನದು ಲೆಕ್ಕಿಗರ ಜೊತೆಯಲ್ಲಿ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ತಿಳಿಸಿದ್ದರಿಂದ, ಸದಸ್ಯರು ಚರ್ಚಿಸಿದ ವಿಷಯಗಳ ಅನುಸರಣಾ ವರದಿಯ ಮಾಹಿತಿ ತಿಳಿಸುವಂತೆ ಕೇಳಿದರು. ಅಧ್ಯಕ್ಷರು ಉತ್ತರಿಸಿ ಮುಂದಿನ ದಿನಗಳಲ್ಲಿ ಸರಿಪಡಿಸಿಕೊಳ್ಳಲಾಗುವುದು ಎಂದು ತಿಳಿಸಿದರು. ಶ್ರೀ ಶ್ರೀನಿವಾಶರ್ಮರವರು ಮಾತನಾಡಿ ಹಿಂದಿನ ಸರ್ವಸದಸ್ಯರ ಸಭೆಯಲ್ಲಿ ನಾನು ನಿರ್ದೇಶಕನಾಗಿ ಲಾಭ ವಿತರಣೆಯಲ್ಲೇ ಎಕ್ಸ್-ಗ್ರೇಷಿಯಾ ತೆಗೆದಿಡಲಾಗುವುದು ಎಂದು ತಿಳಿಸಲಾಗಿತ್ತು. ಹಿಂದೆ ತಪ್ಪು ಮಾಡಲಾಗಿದೆ ಎಂದು ಅದನ್ನೇ ಮುಂದುವರೆಸಿಕೊಂಡು ಹೋಗುವುದು ಸರಿಯಲ್ಲ ಎಂದರು. ಅಧ್ಯಕ್ಷರು ಮುಂದಿನ ದಿನಗಳಲ್ಲಿ ಸರಿಪಡಿಸಿಕೊಳ್ಳಲಾಗುವುದು ಎಂದರು.

ಶ್ರೀ ಶ್ರೀನಿವಾಸ ದೇಶಿಕಾಚಾರ್ ಕೆ ಎಸ್ (ಸದಸ್ಯತ್ವದ ಸಂಖ್ಯೆ:203) ರವರು ಮಾತನಾಡಿ ಕಳೆದ ಸಭೆಯ ನಡಾವಳಿಗಳನ್ನು ಓದಿ ದಾಖಲಿಸುವುದು ಎಂದು ಮಾತ್ರ ಇರುವುದು, ಅದರ ಬಗ್ಗೆ ಚರ್ಚೆ ಅಲ್ಲ, ಚರ್ಚೆಯನ್ನು ಈ ಸಂದರ್ಭದಲ್ಲಿ ತೆಗೆದುಕೊಳ್ಳುವುದು ಸೂಕ್ತವಲ್ಲ ಎಂದರು.

ಶ್ರೀ ಕೃಷ್ಣಮೂರ್ತಿ ಡಿ ಎನ್‌ರವರು ಮಾತನಾಡಿ ಕಳೆದ ವರ್ಷ ಸರ್ವಸದಸ್ಯರ ಸಭೆಯಲ್ಲಿ ಸದಸ್ಯರು ನೀಡಿದ್ದ ಸಲಹೆ ಸೂಚನೆಗಳು ಎಷ್ಟರ ಮಟ್ಟಿಗೆ ಅನುಷ್ಟಾನಗೊಂಡಿದೆ ಎಂದು ತಿಳಿದುಕೊಳ್ಳುವುದೂ ಸಹ ಸದಸ್ಯರ ಕರ್ತವ್ಯ ಎಂದರು. ಇಲ್ಲವಾದಲ್ಲಿ ನ್ಯೂನ್ಯತೆಗಳನ್ನು ಸರಿಪಡಿಸುವವರು ಯಾರು ಎಂದರು. ಮುಂದಿನ ದಿನಗಳಲ್ಲಿ ಸರಿಪಡಿಸಿಕೊಳ್ಳಲಾಗುವುದು ಎಂದು ನಿರ್ದೇಶಕ ಮಂಡಲಿ ಆಶ್ವಾಸನೆ ನೀಡಬೇಕು. ನಾವು ಒಬ್ಬರೇ ಮಾತನಾಡಿದರೂ ಸಹ ಸಾವಿರಾರು ಸದಸ್ಯರನ್ನು ನಾವು ಪ್ರತಿನಿಧಿಸಿ ಮಾತನಾಡುತ್ತಿದ್ದೇವೆ ಎಂದರು. ಇತರೆ ಸದಸ್ಯರೂ ಇದನ್ನು ಅನುಮೋದಿಸಿದರು. ಶ್ರೀ ಸಿ ಎಸ್ ಚಂದ್ರಶೇಖರ್ (ಸದಸ್ಯತ್ವದ ಸಂಖ್ಯೆ:3385) ರವರು ಹಿಂದಿನ ಸಭಾ ನಡಾವಳಿ ಪುಟ ಸಂಖ್ಯೆ:10ರಲ್ಲಿ ಕರಡು ಸಂಶಯಾಸ್ಪದ ನಿಧಿಯಿಂದ 15 ಸಾಲದ ಖಾತೆಗೆ ವರ್ಗಾವಣೆ ಮಾಡಿಕೊಳ್ಳಲು ಸಭೆಯಲ್ಲಿ ಅನುಮತಿಸಿರುವ ಸಂಬಂಧ ದಿನಾಂಕ:05/10/2021ರಲ್ಲಿ ಪತ್ರವನ್ನು ನೀಡಲಾಗಿದ್ದು, ಅದಕ್ಕೆ ಇದುವರೆಗೂ ಯಾವುದೇ ಉತ್ತರ ಬಂದಿರುವುದಿಲ್ಲವೆಂದು ತಿಳಿಸಿದರು. ಅಧ್ಯಕ್ಷರು ಉತ್ತರಿಸಿ ಕಛೇರಿಗೆ ಬಂದು ಉತ್ತರವನ್ನು ಪಡೆಯಲು ಸೂಚಿಸಿದರು. ಸದಸ್ಯರಾದ ಶ್ರೀ ಚಂದ್ರಶೇಖರ್ ಸಿ ಎಸ್ ಸದಸ್ಯತ್ವದ ಸಂಖ್ಯೆ 3385 ಮತ್ತು ಶ್ರೀ ಕೃಷ್ಣಮೂರ್ತಿ ಡಿ ಎನ್ (ಸದಸ್ಯತ್ವದ ಸಂಖ್ಯೆ:4083)ರವರು ಮಾತನಾಡಿ ಹಿಂದಿನ ಮಹಾಸಭೆಯಲ್ಲಿ ಕೆಲವೊಂದು ವಿಷಯಗಳಲ್ಲಿ ತಿದ್ದುಪಡಿ ಮಾಡಲು ತಿಳಿಸಿದ್ದು ಆ ಎಲ್ಲಾ ತಿದ್ದುಪಡಿ ಮಾಡಿಕೊಂಡಿದರೆ ಒಳ್ಳೆಯದು ಅಥವಾ ಅನುಷ್ಠಾನಕ್ಕೆ ಬಾರದಿದ್ದರೆ ಆದಷ್ಟು ಬೇಗ ಜಾರಿಗೆ ತರುವಂತೆ ಸಭೆಯ ಅಧ್ಯಕ್ಷರಿಗೆ ತಮ್ಮ ಸಲಹೆ ನೀಡಿದರು. ಇದಕ್ಕೆ ಅಧ್ಯಕ್ಷರು ಕೆಲವೊಂದು ತಿದ್ದುಪಡಿ ಮಾಡಿಕೊಂಡಿರುವುದಾಗಿ ಸ್ಪಷ್ಟೀಕರಣವನ್ನು ಅಧ್ಯಕ್ಷರ ಭಾಷಣದಲ್ಲಿ ಸಭೆಗೆ ನೀಡುವುದಾಗಿ ತಿಳಿಸಿದರು. ಶ್ರೀ ವಿಜಯಕುಮಾರ್ (ಸ.ಸಂಖ್ಯೆ:7196), ಶ್ರೀ ವಾಸುಕಿಶಯನ (ಸ.ಸಂಖ್ಯೆ:267) ಶ್ರೀ ಮಂಜುನಾಥ್‌ರವರು, ಶ್ರೀ ವೆಂಕಟೇಶ್ವರ ಕೌಶಿಕ್, ಶ್ರೀ ವಿ ಎನ್ ಕೃಷ್ಣರವರು ಅಧ್ಯಕ್ಷರಿಗೆ ಸಂಬಂಧಪಟ್ಟ ಉತ್ತರಗಳನ್ನು ಆಯಾಯ ಸಮಯದಲ್ಲಿಯೇ ನೀಡುವಂತೆ ಒಟ್ಟಾರೆ ಅಭಿಪ್ರಾಯವನ್ನು ಸೂಚಿಸಿದರು. ಅಧ್ಯಕ್ಷರು ಉತ್ತರಿಸಿ ನಾನು ಅಧ್ಯಕ್ಷರ ಭಾಷಣದಲ್ಲಿ ಉತ್ತರಿಸಲು ತಯಾರಿಸಿಕೊಂಡಿರುವುದರಿಂದ ಅದಕ್ಕೆ ಅಲ್ಲಿಯೇ ಉತ್ತರವನ್ನು ನೀಡಲಾಗುವುದು ಎಂದು ತಿಳಿಸಿದರು. ಶ್ರೀ ಡಿ ಎನ್ ಕೃಷ್ಣಮೂರ್ತಿಯವರು ಮಾತನಾಡಿ ಅಧ್ಯಕ್ಷರು ಉದ್ವೇಗಗೊಳ್ಳದೆ ಸದಸ್ಯರಿಗೆ ಉತ್ತರಿಸುವಂತೆ ಹಾಗೂ ಸದಸ್ಯರು ಶಾಂತಚಿತ್ತರಾಗಿ ಪ್ರಶ್ನೆಗಳನ್ನು ಕೇಳಲು ಮನವಿ

ಮಾಡಿದರು. 26ನೇ ವಾರ್ಷಿಕ ಮಹಾಸಭೆಯ ನಡಾವಳಿಗಳನ್ನು (ಸದಸ್ಯತ್ವದ ಸಂಖ್ಯೆ: 3385) ಚಂದ್ರಶೇಖರ್ ಸಿ ಎಸ್ (ಸದಸ್ಯತ್ವದ ಸಂಖ್ಯೆ:349) ಶ್ರೀ ವೆಂಕಟಸುಬ್ಬುರವರು ಸೂಚಿಸಿ, ಶ್ರೀ ಶ್ರೀನಿವಾಸ ದೇಶಿಕಾಚಾರ್ ಕೆ ಎಸ್ (ಸದಸ್ಯತ್ವದ ಸಂಖ್ಯೆ:203)ರವರು ಶ್ರೀ ವಿದ್ಯಾಶಂಕರ್ ಅನುಮೋದಿಸಿದರು.

**7. <u>2021–22ನೇ ಸಾಲಿನ ಆಡಳಿತ ಮಂಡಲಿಯ ವರದಿ:</u>**

ಅಧ್ಯಕ್ಷರಾದ ಶ್ರೀ ಸಿ ವಿ ಪಾರ್ಥಸಾರಥಿಯವರು 2021–22ನೇ ಸಾಲಿನ ಆಡಳಿತ ಮಂಡಲಿಯ ವರದಿಯನ್ನು ವರದಿಪುಸ್ತಕದಲ್ಲಿನ ಪುಟ ಸಂಖ್ಯೆ 4ರಿಂದ 11ರವರೆಗೆ ಮುದ್ರಿಸಲಾಗಿರುವುದನ್ನು ಸಭೆಗೆ ತಿಳಿಸಿದರು. ಸ.ಸಂಖ್ಯೆ:3385 ಶ್ರೀ ಚಂದ್ರಶೇಖರ್‌ರವರು ಮಾತನಾಡಿ ಸಂಘವು ಪ್ರತಿ ವರ್ಷ ಲೆಕ್ಕಪರಿಶೋಧನಾ ವರದಿಯಲ್ಲಿ "ಎ" ವರ್ಗೀಕರಣದಲ್ಲಿ ಮುಂದುವರೆಯುತ್ತಿದ್ದು, ಈ ಬಾರಿ "ಬಿ" ವರ್ಗೀಕರಣ ನೀಡಿರಲು ಕಾರಣವೇನು ಸಾಲ ವಸೂಲಾತಿ ಕ್ರಮವಾಗಿ ಆಗಿರುವುದಿಲ್ಲವೇ? ಇದರ ಬಗ್ಗೆ ಸಂಘದ ಆಂತರಿಕ ಲೆಕ್ಕ ಪರಿಶೋಧಕರು ಯಾವುದೇ ಸಲಹೆ ಸೂಚನೆ ನೀಡಿರುವುದಿಲ್ಲವೇ ಪ್ರತಿ ತ್ರೈಮಾಸಿಕ ವರದಿಯಲ್ಲಿ ಸೂಚಿಸಿರುವುದಿಲ್ಲವೇ, ತಮ್ಮ ವರದಿಯಲ್ಲಿ ಡಿಸಿಬಿ ನೀಡಿರುವುದಿಲ್ಲವೇ? ಅವರು ಸಲಹೆ ಸೂಚನೆ ನೀಡಿದ್ದರೆ ಅದರ ಪಾಲನೆ ಆಗಿರುವುದಿಲ್ಲವೇ? ಆಡಳಿತ ಮಂಡಲಿ ವರದಿಯಲ್ಲಿ ಆಂತರಿಕ ಲೆಕ್ಕಪರಿಶೋಧಕರ ಬಗ್ಗೆ ಏಕೆ ಪ್ರಸ್ತಾಪ ಮಾಡಿರುವುದಿಲ್ಲ, ಇದಕ್ಕೆ ವಿವರಣೆ ನೀಡಿ ಎಂದು ಕೇಳಿದರು. ಅಧ್ಯಕ್ಷರು ಉತ್ತರಿಸಿ ವಸೂಲಾತಿಗೆ ಸಂಘದಿಂದ ಹೆಚ್ಚು ಒತ್ತು ನೀಡಲಾಗುತ್ತಿದ್ದು, ಕರೋನಾ ಸಾಂಕ್ರಮಿಕ ರೋಗ ವೇಗವಾಗಿ ಹರಡುತ್ತಿದ್ದ ಸಂಧರ್ಭದಲ್ಲಿಯೂ ಸಾಲ ವಿತರಣೆಯಲ್ಲಿ ಹಾಗೂ ವಸೂಲಾತಿಯನ್ನು ಹೆಚ್ಚು ಮಾಡಿರುವ ಸಂಘ ಸಂಸ್ಥೆಯಲ್ಲಿ ನಮ್ಮ ಸಂಸ್ಥೆಯೂ ಒಂದು. ಆ ವರ್ಷದಲ್ಲಿ ಅತೀ ಹೆಚ್ಚು ಲಾಭವನ್ನು ಸಹ ಮಾಡಿರುವುದನ್ನು ತಮ್ಮಗಳ ಗಮನಕ್ಕೆ ಬಂದಿರುತ್ತದೆ ಎಂದು ಉತ್ತರಿಸಿದರು. ಮುಂದುವರೆದು ಅಧ್ಯಕ್ಷರು ವಸೂಲಾತಿಗೆ ಸಂಭಂಧಿಸಿದಂತೆ ಎಲ್ಲಾ ಯೋಜನೆಗಳನ್ನು ಮಾಡಿಕೊಳ್ಳಲಾಗಿದ್ದು, ಮುಂದಿನ ದಿನಗಳಲ್ಲಿ ವಸೂಲಾತಿ ಮಾಡಲಾಗುವುದು. ಆಂತರಿಕ ಲೆಕ್ಕಪರಿಶೋಧಕರು ತ್ರೈಮಾಸಿಕ ವರದಿಯನ್ನು ಹಾಗೂ ಸಲಹೆಗಳನ್ನು ನೀಡುತ್ತಿದ್ದಾರೆ ಎಂದು ತಿಳಿಸಿದರು. (ಸ.ಸಂಖ್ಯೆ:4083) ಶ್ರೀ ಡಿ ಎನ್ ಕೃಷ್ಣಮೂರ್ತಿಯವರು ಮಾತನಾಡಿ ಜಾಗತಿಕ ಕಾರಣಗಳು ಎಲ್ಲಾ ಸದಸ್ಯರಿಗೂ ಗೊತ್ತಿರುವ ವಿಷಯವಾಗಿದ್ದು, ಮುಂದಿನ ದಿನಗಳಲ್ಲಿ ಸಂಘವು "ಎ" ವರ್ಗೀಕರಣದಲ್ಲಿ ಮುಂದುವರೆಯಲು ಬೇಕಾದ ಯೋಜನೆಗಳನ್ನು ಮಾಡಿಕೊಂಡು ಸಂಘದ ವಸೂಲಾತಿಯ ಅಭಿವೃದ್ಧಿಯನ್ನು ಮಾಡುವಂತೆ ಸೂಚಿಸಿದರು. ಅಧ್ಯಕ್ಷರು ಇದಕ್ಕೆ ಒಪ್ಪಿಗೆ ಸೂಚಿಸಿದರು.

ಸ.ಸಂಖ್ಯೆ:3385 ಶ್ರೀ ಚಂದ್ರಶೇಖರ್, (ಸ.ಸಂಖ್ಯೆ:4083) ಶ್ರೀ ಡಿ ಎನ್ ಕೃಷ್ಣಮೂರ್ತಿಯವರು ಮಾತನಾಡಿ ಸದಸ್ಯರ ಮರಣ ನಿಧಿಯನ್ನು ಹೆಚ್ಚು ಮಾಡಲು ಹಿಂದಿನ ಸಭೆಯಲ್ಲಿ ತಿಳಿಸಲಾಗಿತ್ತು, ಮುಂದಿನ ವರ್ಷ ಮಾಡುವುದಾಗಿ ಕಳೆದ ಸಭೆಯಲ್ಲಿ ತಿಳಿಸಲಾಗಿತ್ತು ಈ ಬಾರಿ ಅದರ ಪ್ರಸ್ತಾಪವನ್ನು ಮಾಡಿರುವುದಿಲ್ಲ ಎಂದು ಪ್ರಶ್ನಿಸಿದರು. ಅಧ್ಯಕ್ಷರು ಉತ್ತರಿಸಿ ನಮ್ಮ ಗಮನದಲ್ಲಿದೆ. ನಾವು ಮುಂದಿನ ನಿರ್ದೇಶಕ ಮಂಡಲಿ ಸಭೆಯಲ್ಲಿ ಇದರ ಬಗ್ಗೆ ನಿರ್ಧಾರವನ್ನು ತೆಗೆದುಕೊಂಡು ಮೊತ್ತವನ್ನು ಹೆಚ್ಚುವರಿ ಮಾಡಲಾಗುವುದು ಎಂದು ಸಭೆಗೆ ತಿಳಿಸಿ ಅನುಮತಿ ಪಡೆಯಲಾಯಿತು. (ಸ.ಸಂಖ್ಯೆ:3573) ಶ್ರೀ ರಮೇಶ್‌ಕುಮಾರ್‌ರವರು ಮಾತನಾಡಿ ಧರ್ಮದ ನಿಧಿಯನ್ನು ಸಂಘದ ವತಿಯಿಂದ ನೀಡಿರುವುದು ಸರಿ ನೀಡಿರುವವರ ಹೆಸರು ಸಂಘ ಸಂಸ್ಥೆಯ ಹೆಸರು ಅವಶ್ಯಕತೆ ಇರುವುದಿಲ್ಲ ಎಂದು ತಿಳಿಸಿದರು. (ಸ.ಸಂಖ್ಯೆ:802) ಶ್ರೀ ಎಂ ಆರ್ ಕೇಶವಪ್ರಸಾದ್‌ರವರು ಮಾತನಾಡಿ ಸಾಲ ವಸೂಲಾತಿ ಕಷ್ಟಕರವಾಗಿದ್ದು, ಸದಸ್ಯರು ತಿಳಿದವರ ಬಗ್ಗೆ ಮಾಹಿತಿ ನೀಡಲು ಸೂಚಿಸಿದ್ದು, ಸಂಘದ ನಾಮಫಲಕದಲ್ಲಿ ಇದರ ಬಗ್ಗೆ ವಿವರ ಇರುವುದರ ಬಗ್ಗೆ ತಿಳಿಸಬಹುದು, ಶಿಫಾರಸ್ಸು ಮಾಡಿರುವ ನಿರ್ದೇಶಕರ ಸಹಾಯವನ್ನು ಪಡೆದು ವಸೂಲಾತಿಯನ್ನು ವೃದ್ಧಿ ಮಾಡಿಕೊಳ್ಳಬಹುದು. ಮುಂದುವರೆದಂತೆ ಮಾತನಾಡಿ ಮಾಜಿ ನಿರ್ದೇಶಕನಾಗಿ ಕಾರ್ಯನಿರ್ವಹಣೆ ಮಾಡಿದ್ದು, ನನ್ನ ಕಡೆಯ ಸದಸ್ಯರಿಂದ ಸಾಲ ಬರಲು ಬಾಕಿ ಇದ್ದಲ್ಲಿ ನನಗೂ ಮಾಹಿತಿ ನೀಡಿದರೇ ವಸೂಲಾತಿ ಮಾಡಲಾಗುವುದು ಎಂದು ತಿಳಿಸಿದರು. ಅಧ್ಯಕ್ಷರು ಇದಕ್ಕೆ ಒಪ್ಪಿಗೆ ಸೂಚಿಸಿ ಈ ಹಿಂದೆ ಸರ್ವ ಸದಸ್ಯರ ಸಭೆ ಪುಸ್ತಕದಲ್ಲಿ ಮುದ್ರಿಸಲಾಗಿರುತ್ತದೆ. ಸಂಘದ ನೋಟೀಸ್ ಬೋರ್ಡ್‌ನಲ್ಲಿ ಹಾಕಲಾಗಿರುತ್ತದೆ. ಮುಂದಿನ ದಿನಗಳಲ್ಲಿ ತಮ್ಮ ಗಮನಕ್ಕೆ ತರಲಾಗುವುದು ಎಂದು ತಿಳಿಸಿದರು. ಶ್ರೀ ಡಿ ಎನ್ ಕೃಷ್ಣಮೂರ್ತಿಯವರು ಮಾತನಾಡಿ ಕಳೆದ ಬಾರಿಗಿಂತ ಹೆಚ್ಚಿನ ಸಾಲವನ್ನು ವಿತರಣೆ ಮಾಡಿದ್ದರು ಸಹ ಈ ಬಾರಿ 20 ಲಕ್ಷ ಲಾಭ ಕಡಿಮೆಯಾಗಲು

ಕಾರಣವೇನು ಎಂದು ಕೇಳಿದರು. ಮುಂದುವರೆದು ಮಾತನಾಡಿ ಕರೋನಾ ಸಮಯದಲ್ಲಿ ಸದಸ್ಯರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ವಿತರಿಸಿರುವ ಬಗ್ಗೆ ಮಾಹಿತಿ ನೀಡಿದ್ದು, ಸಂಘದ ಸದಸ್ಯರಿಗೆ ಅನುಕೂಲವಾಗಿರುತ್ತದೆ. ಆದಾಗ್ಯೂ ಕಳೆದ ಬಾರಿಗಿಂತ ಈ ಬಾರಿ ಲಾಭ ಕಡಿಮೆಯಾಗಲು ಕಾರಣವೇನು ವಸೂಲಾತಿ ಆಗುತ್ತಿಲ್ಲವೇ ಎಂದು ಪ್ರಶ್ನಿಸಿದರು. ಅಧ್ಯಕ್ಷರು ಉತ್ತರಿಸಿ ವಾಹನ ಸಾಲ, ಸ್ಥಿರಾಧಾರ ಸಾಲ ಮತ್ತು ಚಿನ್ನಾಭರಣ ಸಾಲಗಳ ಮೇಲೆ ಬಡ್ಡಿಯನ್ನು ಕಡಿಮೆ ಮಾಡಲಾಗಿರುತ್ತದೆ. ಈಗಾಗಲೇ ವರದಿಯಲ್ಲಿ ತಿಳಿಸಿರುವಂತೆ ನಿಶ್ಚಿತ ಠೇವಣಿಗಳ ಮೇಲೆ ಹೆಚ್ಚಾಗಿ ಬಡ್ಡಿಯನ್ನು ನೀಡುರುವುದು ಸಹ ಕಾರಣವಾಗಿರುತ್ತದೆ ಎಂದು ಉತ್ತರಿಸಿದರು.

ಸಂಘದ ಪ್ರವರ್ತಕರು, ಮಾಜಿ ಅಧ್ಯಕ್ಷರು ಹಾಗೂ ನಿರ್ದೇಶಕರು ಆಗಿ ಸೇವೆ ಸಲ್ಲಿಸಿದ ಶ್ರೀ ಹೆಚ್ ಆರ್ ರಾಮಚಂದ್ರ ರಾವ್‌ರವರ ಮಗನಾದ ಶ್ರೀ ಹೆಚ್ ಆರ್ ರಾಘವೇಂದ್ರ ರಾವ್ (ಸ.ಸಂಖ್ಯೆ:301) ರವರು ಮಾತನಾಡಿ ಸಭೆಯಲ್ಲಿ ಹಾಜರಿರುವ ಸದಸ್ಯರು ಸಂಘದ ಲಾಭದ ವೃದ್ಧಿಸುವ ಬಗ್ಗೆಯೇ ಮಾತನಾಡುತ್ತಿದ್ದರೆ ಸಂಸ್ಥೆಯ ಉದ್ದೇಶವೇ ತಪ್ಪಾಗುತ್ತದೆ ಎಂದೆನಿಸುತ್ತದೆ. ಸದಸ್ಯರನ್ನು ಒಗ್ಗೂಡಿಸಿ ಅವರ ಕ್ಷೇಮಾಭಿವೃದ್ಧಿಗೆ ಸಂಘವನ್ನು ಸ್ಥಾಪನೆ ಮಾಡುವಲ್ಲಿ ಮುಖ್ಯವಾಗಿ ಪ್ರವರ್ತಕರುಗಳ ಪಾತ್ರ ಹೆಚ್ಚಾಗಿದ್ದು ಇದರಲ್ಲಿ ಈಗಿನ ಅಧ್ಯಕ್ಷರಾದ ಶ್ರೀ ಸಿ ವಿ ಪಾರ್ಥಸಾರಥಿಯವರು ಇದ್ದು, ಅವರು ಹೆಚ್ಚಿನ ಶ್ರಮ ಶ್ಲಾಘನೀಯವಾಗಿರುತ್ತದೆ. ಒಂದು ಸಂಘವು ಸದಸ್ಯರಿಗೆ ಅನುಕೂಲಕರವಾದ ಯೋಜನೆಗಳನ್ನು ಜಾರಿಗೆ ತರಲು ಹಾಗೂ ಸಾಲದ ಬಡ್ಡಿ ದರವನ್ನು ಆಗಿದ್ದಾಂಗೆ ಫ್ಲೋಟಿಂಗ್ ದರದಲ್ಲಿ ಪರಿಷ್ಕರಿಸಿ ಸದಸ್ಯರ ಆರ್ಥಿಕ ಸ್ಥಿತಿಗತಿಗೆ ಹೊಂದುವಂತೆ ಅನುಕೂಲ ಮಾಡಬಹುದು ಎಂದು ಸಲಹೆಯನ್ನು ಸೂಚಿಸಿದರು. ಅಧ್ಯಕ್ಷರು ಉತ್ತರಿಸಿ ಇದನ್ನು ಗಮದಲ್ಲಿಟ್ಟುಕೊಂಡು ಕಾರ್ಯಗತ ಮಾಡಲಾಗುವುದು ಎಂದು ತಿಳಿಸಿದರು. ಶ್ರೀ ವಿ ಎನ್ ಕೃಷ್ಣರವರು ಮಾತನಾಡಿ ನಾನು ನೀಡಿರುವ ಪತ್ರಕ್ಕೆ ಉತ್ತರ ನೀಡಿರುವುದಿಲ್ಲ, ಸಾಲ ವಸೂಲಾತಿ ಬಗ್ಗೆ ಪ್ರಶ್ನೆ ಕೇಳಿದ್ದೆ, ಒಂದು ಸ್ಥಿರಾಧಾರ ಸಾಲವನ್ನು ಕೆ ಆರ್ ಬ್ಯಾಂಕ್‌ನಿಂದ ಟೇಕ್ ಓವರ್ ಮಾಡಲಾಗಿರುತ್ತದೆ. ಇದಕ್ಕೆ ಉಪನಿಯಮದಲ್ಲಿ ಅವಕಾಶವಿರುವುದಿಲ್ಲ, ಅವರು ಕೆ ಆರ್ ಬ್ಯಾಂಕ್‌ನಲ್ಲಿ ಸುಸ್ತಿದಾರಾಗಿರುವ ಬಗ್ಗೆ ಮಾಹಿತಿ ಬಂದಿರುತ್ತದೆ. ಈ ರೀತಿಯ ಸಾಲ ವಿತರಣೆಯಿಂದ ಸಂಘಕ್ಕೆ ಹಾನಿಯಾಗುವುದಿಲ್ಲವೇ ಎಂದು ಪ್ರಶ್ನಿಸಿದರು. ಅಧ್ಯಕ್ಷರು ಉತ್ತರಿಸಿ ತಮ್ಮ ಪ್ರತ್ರಕ್ಕೆ ಉತ್ತರ ನೀಡಿಲ್ಲದಿದ್ದರು ಇಷ್ಟು ಮಾಹಿತಿ ನಿಮಗೆ ಯಾರು ನೀಡಿರುತ್ತಾರೆ ಎಂದು ತಿಳಿಸಿ ಎಂದರು. ಶ್ರೀ ವಿ ಎನ್ ಕೃಷ್ಣರವರು ಮಾತನಾಡಿ ಹೊರಗೆ ಎಲ್ಲರು ಮಾತನಾಡುತ್ತಿದ್ದಾರೆ. ನಿಜವೋ ಇಲ್ಲವೋ ತಿಳಿಸಿ ಎಂದರು, ಶ್ರೀ ಡಿ ಎನ್ ಕೃಷ್ಣಮೂರ್ತಿಯವರು ಮಾತನಾಡಿ ಗಾಳಿ ಸುದ್ದಿಯೆಲ್ಲ ನಂಬುವುದು ಬೇಡ ಅಧ್ಯಕ್ಷರು ಇದಕ್ಕೆ ಉತ್ತರ ನೀಡಲಿ ಎಂದರು. ಅಧ್ಯಕ್ಷರು ಉತ್ತರಿಸಿ ಯಾರೋ ಹೇಳುವುದು ಎಂದು ಎಲ್ಲರು ಸೇರಿ ಯಾವ ಯಾವುದೋ ವಿಷಯಗಳಿಗೆ ಚರ್ಚೆ ಮಾಡುವುದು ಸರಿಯಲ್ಲ ಎಂದರು. ಶ್ರೀ ವಿ ಎನ್ ಕೃಷ್ಣರವರು ಮಾತನಾಡಿ ಟೇಕ್ ಓವರ್ ಮಾಡಿರುವ ವಿಷಯದ ಬಗ್ಗೆ ಮಾಹಿತಿ ಕೇಳಿದರು. ಅಧ್ಯಕ್ಷರು ಉತ್ತರಿಸಿ ವರದಿ ಸಾಲಿನಲ್ಲಿ ಇಂತಹ ಯಾವುದು ಸಾಲ ನೀಡಿರುವುದಿಲ್ಲ, ನಿಮ್ಮ ಪತ್ರಕ್ಕೆ ಉತ್ತರ ನೀಡಲಾಗುವುದು ಎಂದು ತಿಳಿಸಿದರು. ಶ್ರೀ ಕೆ ಎನ್ ಶ್ರೀನಿವಾಸ್ ಶರ್ಮರವರು ಮಾತನಾಡಿ ಸದಸ್ಯರು ಕೇಳಿದ ಪ್ರಶ್ನೆಗೆ ಯಾರು ತಮಗೆ ಮಾಹಿತಿ ನೀಡಿದ್ದು ಎಂದು ಕೇಳಿದ್ದಿರಿ, ಯಾರೂ ಮಾಹಿತಿ ನೀಡುವ ಅವಶ್ಯಕತೆ ಇಲ್ಲ, ಸಂಘದ ಸೂಚನಾಫಲಕದಲ್ಲಿ ಪ್ರಕಟಿಸಿರುವುದನ್ನು ನೋಡಿದರೆ ತಿಳಿಯುತ್ತದೆ ಎಂದು ತಿಳಿಸಿದರು. ಅಧ್ಯಕ್ಷರು ಮಾತನಾಡಿ ಅವರು ಸುಸ್ತಿಸಾಲದ ಬಗ್ಗೆ ಮಾತನಾಡುತ್ತಿಲ್ಲ, ಟೇಕ್‌ಓವರ್ ಬಗ್ಗೆ ಮಾತನಾಡುತ್ತಿರುವುದು ಎಂದರು. ಶ್ರೀ ವೆಂಕಟೇಶ್ವರ ಕೌಶಿಕ್‌ರವರು ಮಾತನಾಡಿ ನೀವು ಮಹಾಸಭೆಗೆ ಅಪೂರ್ಣ ಮಾಹಿತಿ ನೀಡಿದರೆ ನೀವು ಮತ್ತು ಆಡಳಿತ ಮಂಡಲಿಯವರು ಸಂಪೂರ್ಣ ಜವಾಬ್ದಾರಿಯಾಗುತ್ತೀರ ಎಂದು ತಿಳಿಸಿದರು. ಶ್ರೀ ಕೆ ಎನ್ ಶ್ರೀನಿವಾಸ್ ಶರ್ಮರವರು ಮಾತನಾಡಿ ಪುಟ ಸಂಖ್ಯೆ: 9 ರಲ್ಲಿ ಟಿ ಡಿ ಎಸ್ ಬರಬೇಕಾದದ್ದು ಇದರಲ್ಲಿ ಆದಾಯ ತೆರಿಗೆ ಕಾಯ್ದೆ 1961, ಕಲಂ 80ಪಿ ಉಪಯೋಗವನ್ನು ಪಡೆಯಬಹುದಾಗಿರುತ್ತದೆ. ಪದಗಳ ಜೋಡಣೆಗೆ ಹೊಂದಾಣಿಕೆ ಇರುವುದಿಲ್ಲ ಎಂಬ ಪದವು ಸೂಕ್ತವಾಗಿರುವುದಿಲ್ಲ ಅದನ್ನು ತೆಗೆಯಲು ಸೂಚಿಸಿದರು. ಅಧ್ಯಕ್ಷರು ಒಪ್ಪಿಗೆ ಸೂಚಿಸಿದರು.

ಶ್ರೀ ಚಂದ್ರಶೇಖರ್‌ರವರು ಮಾತನಾಡಿ ಮಾಜಿ ಅಧ್ಯಕ್ಷರಾದ ಶ್ರೀ ಎಸ್ ರಾಮಕೃಷ್ಣರವರು 02/10/2019ರಲ್ಲಿ ಮರಣ ಹೊಂದಿದ್ದು ಇಲ್ಲಿಯವರೆಗೂ ಆ ಸ್ಥಾನವನ್ನು ಖಾಲಿ ಇಟ್ಟುಕೊಂಡಿದ್ದು, ಈಗ ಕೋ–ಆಪ್ಟ್ ಮಾಡಿಕೊಳ್ಳಲಾಗಿರುತ್ತದೆ. ಕಾನೂನು ಕ್ರಮದಂತೆ ಚುನಾವಣಾ ಪ್ರಾಧಿಕಾರಕ್ಕೆ ಮಾಹಿತಿ ನೀಡರಲಿಲ್ಲವೇ, ಶ್ರೀ ಕೆ ಎನ್ ಶ್ರೀನಿವಾಸ ಶರ್ಮರವರು ರಾಜೀನಾಮೆ ನೀಡಿದ್ದು, ಶ್ರೀ ಜಿ ಎನ್ ಸತೀಶ್‌ರವರನ್ನು ಯಾರ ಸ್ಥಾನಕ್ಕೆ ಕೋ–ಆಪ್ಟ್ ಮಾಡಿಕೊಳ್ಳಲಾಗಿದೆ. ಆಡಳಿತ

ಮಂಡಲಿ ವರದಿಯಲ್ಲಿ ಇದನ್ನು ಯಾಕೆ ಪ್ರಸ್ತಾಪಿಸಿರುವುದಿಲ್ಲ ಎಂದು ಪ್ರಶ್ನಿಸಿದರು. ಅಧ್ಯಕ್ಷರು ಉತ್ತರಿಸಿ ಕಾನೂನು ರೀತಿಯ ಕ್ರಮವನ್ನು ಮಾಡಲಾಗಿದ್ದು, ಕರೋನಾದಿಂದ ಯಾವುದೇ ಪ್ರಕ್ರಿಯೆ ನಡೆಸಿರುವುದಿಲ್ಲ. ಇಲಾಖೆಯ ಮಾರ್ಗದರ್ಶನದಂತೆ ಕೋ–ಆಪ್ಟ್ ಮಾಡಲಾಗಿದೆ. ಶ್ರೀ ಶ್ರೀನಿವಾಸ ಶರ್ಮರವರ ರಾಜೀನಾಮೆ ಏಪ್ರಿಲ್ ಮಾಹೆಯಲ್ಲಿ ಅಂಗೀಕಾರವಾಗಿರುವುದರಿಂದ ವರದಿ ಸಾಲಿನ ಆಡಳಿತ ಮಂಡಲಿ ವರದಿಯಲ್ಲಿ ನೀಡಿರುವುದಿಲ್ಲ ಎಂದು ತಿಳಿಸಿದರು. ಶ್ರೀ ರಮೇಶ್‌ಕುಮಾರ್‌ರವರು ಮಾತನಾಡಿ ವರದಿ ಸಾಲಿನಲ್ಲಿ ಅವರು ಇದ್ದಾಗ ಶ್ರೀ ಶ್ರೀನಿವಾಸ ಶರ್ಮರವರ ಭಾವಚಿತ್ರವನ್ನು ಮತ್ತು ಹೆಸರನ್ನು ಹಾಕಬೇಕಿತ್ತು ಎಂದು ತಿಳಿಸಿದರು. ವರದಿ ಪುಸ್ತಕ ಪೋಸ್ಟ್ ಮಾಡುವ ದಿನಾಂಕಕ್ಕೆ ಹಾಲಿ ಇರುವ ನಿರ್ದೇಶಕ ಮಂಡಲಿಯ ಭಾವಚಿತ್ರವನ್ನು ಪ್ರಸ್ತುತ ಪಡಿಸಿರುವುದರಿಂದ ಹಾಕಿರುವುದಿಲ್ಲವೆಂದು ತಿಳಿಸಿದರು.

ಸದಸ್ಯರಾದ ಶ್ರೀ ರಾಘವೇಂದ್ರರಾವ್ ಹೆಚ್ ಆರ್ ರವರು ಮಾತನಾಡಿ ನನ್ನ ತಂದೆಯವರಾದ ಶ್ರೀ ಹೆಚ್ ಆರ್ ರಾಮಚಂದ್ರರಾವ್‌ರವರು ಇಲ್ಲಿ ಅಧ್ಯಕ್ಷರಾಗಿ ನಿಷ್ಠೆಯಿಂದ ಸೇವೆ ಸಲ್ಲಿಸಿರುವುದನ್ನು ಸ್ಮರಿಸಬಹುದು, ಒಂದು ಸಂಸ್ಥೆ ಎಂದ ಮೇಲೆ ಸಣ್ಣ ಪುಟ್ಟ ತಪ್ಪುಗಳು/ ದೋಷಗಳು ಆಗುವುದು ಸಹಜ, ಅದನ್ನೇ ದೊಡ್ಡದು ಮಾಡಿ ಸಂಘದ ಏಳಿಗೆಗೆ ಸದಸ್ಯರು ಭಂಗ ತರುವುದು ಬೇಡ. ಇಲ್ಲಿ ಎಲ್ಲಾ ನಿರ್ದೇಶಕ ಮಂಡಲಿ ಸದಸ್ಯರು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದ ಸೇವೆ ಸಲ್ಲಿಸುತ್ತಿದಾರೆ ಎಂದರು. ಅಧ್ಯಕ್ಷರಾದ ಶ್ರೀ ಸಿ ವಿ ಪಾರ್ಥಸಾರಥಿರವರು ನಮ್ಮ ತಂದೆಯವರ ಜೊತೆ ಸೇರಿ ಸಂಸ್ಥೆ ಕಟ್ಟುವ ನಿಟ್ಟಿನಲ್ಲಿ ಮನೆ ಮನೆಗೆ ಸ್ವಂತ ಖರ್ಚಿನಲ್ಲಿ ತೆರಳಿ ಸದಸ್ಯತ್ವದ ಮೊತ್ತವನ್ನು ಸಂಗ್ರಹಿಸಿರುತ್ತಾರೆ. ನಿರ್ವಂಚನೆಯಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸದಸ್ಯರು ಯಾರೂ ಅವರಿಗೆ ನೋವಾಗುವಂತೆ ವರ್ತಿಸಬೇಡಿ. ಒಂದು ಸಂಸ್ಥೆ ಕಾರ್ಯ ನಿರ್ವಹಿಸುವಾಗ Proceedure Lapsation ಆಗುವುದು ಸಹಜ, ಅದನ್ನೇ ದೊಡ್ಡದು ಮಾಡಿ ಅವರಿಗೆ ನೋವುಂಟು ಮಾಡುವುದು ಬೇಡ, ಬಹಳ ಕಷ್ಟಪಟ್ಟು ಸಂಸ್ಥೆಯ ಏಳಿಗೆಗೆ ಎಲ್ಲಾ ನಿರ್ದೇಶಕರು ಶ್ರಮಿಸುತ್ತಿದ್ದಾರೆ. ಯಾವುದೇ ನಿರ್ದೇಶಕರಿಗೂ ವಂಚನೆ ಮಾಡುವ ಮನಸ್ಥಿತಿ ಇಲ್ಲ. ವೈಯಕ್ತಿಕ ಮನಸ್ಥಿತಿಯನ್ನು ಇಲ್ಲಿಗೆ ತರುವುದು ಬೇಡ. ಬೆಂಗಳೂರಿನಲ್ಲಿ ಚೆನ್ನಾಗಿ ನಡೆಯುತ್ತಿದ್ದ ಸಂಸ್ಥೆಗಳೆಲ್ಲವೂ ಮುಚ್ಚಿ ಹೋಗಿದೆ, ನಮ್ಮ ಸಂಸ್ಥೆ ಅಂತಹ ಹಗರಣಗಳಿಗೆ ಹೊರತಾಗಿದೆ, ದಯವಿಟ್ಟು ಸದಸ್ಯರು ಧನಾತ್ಮಕವಾಗಿರಿ, ವಂದನೆಗಳು ಎಂದರು. ಅಧ್ಯಕ್ಷರು ಶ್ರೀ ಹೆಚ್ ಆರ್ ರಾಘವೇಂದ್ರ ರಾವ್‌ರವರಿಗೆ ವಂದನೆಗಳನ್ನು ಸಲ್ಲಿಸಿದರು.

ಎಲ್ಲಾ ಚರ್ಚೆಗಳ ನಂತರ ಆಡಳಿತ ಮಂಡಲಿಯ ವರದಿಯನ್ನು ಸದಸ್ಯರಾದ ಶ್ರೀ ಯೋಗನರಸಿಂಹ (ಸದಸ್ಯತ್ವದ ಸಂಖ್ಯೆ:5974) ಶ್ರೀ ರಂಗರಾಜನ್ (ಸ.ಸಂಖ್ಯೆ:3938) ಸೂಚಿಸಿ ಶ್ರೀ ಜಗದೀಶ್ (ಸದಸ್ಯತ್ವದ ಸಂಖ್ಯೆ:1929) ಶ್ರೀ ರವಿ ಕುಮಾರ್ ಸದಸ್ಯತ್ವದ (ಸಂಖ್ಯೆ:1761)ರವರು, ಅನುಮೋದನೆ ನೀಡಿದರು.

**8. <u>2021–22ನೇ ಸಾಲಿನ ಲೆಕ್ಕ ಪರಿಶೋಧನೆಗೆ ಒಳಪಟ್ಟ ಲೆಕ್ಕಪತ್ರಗಳ ಅನುಮೋದನೆ:</u>**

2020–21ನೇ ಸಾಲಿನ ಲೆಕ್ಕಪರಿಶೋಧನೆಗೆ ಒಳಪಟ್ಟ ಲೆಕ್ಕಪತ್ರಗಳ ಪರಿಶೀಲನೆ ಮತ್ತು ಅನುಮೋದನೆಗಾಗಿ ಖಜಾಂಚಿಯವರಾದ ಶ್ರೀ ಎಂ ಡಿ ಗೋಪಿನಾಥ್‌ರವರು ಸಭೆಗೆ ಮಂಡಿಸಿದರು. ಎಲ್ಲಾ ಸದಸ್ಯರಿಗೂ ನಮಸ್ಕಾರವನ್ನು ತಿಳಿಸುತ್ತಾ ಮಹಾ ಸಭೆಯ ವರದಿ ಪುಸ್ತಕಪುಟ ಸಂಖ್ಯೆ 14 ರಿಂದ 22ರವರೆಗೆ ಕ್ರಮವಾಗಿ ಲಾಭ ನಷ್ಟದ ತ:ಖ್ತೆ ಹಾಗೂ ಆಸ್ತಿ–ಜವಾಬ್ದಾರಿ ತ:ಖ್ತೆಗಳ ವಿವರಗಳಿರುತ್ತದೆ ಎಂದು ತಿಳಿಸಿದರು. ಇದರಲ್ಲಿ ಸ್ಪಷ್ಟೀಕರಣವಿದ್ದಲ್ಲಿ ಸದಸ್ಯರು ಕೇಳಬಹದು, ಅದಕ್ಕೆ ಉತ್ತರಿಸಲಾಗುವುದು ಎಂದು ತಿಳಿಸಿದರು. ಶ್ರೀ ಚಂದ್ರಶೇಖರ್‌ರವರು ಮಾತನಾಡಿ ಜಮಾ–ಖರ್ಚು ತ:ಖ್ತೆಯ ಬಗ್ಗೆ ಚರ್ಚೆ ಮಾಡಬೇಕು ಎಂದರು. ಖಜಾಂಚಿಯವರು ಉತ್ತರಿಸಿ, ಲಾಭ–ನಷ್ಟ ತ:ಖ್ತೆ ಮತ್ತು ಆಸ್ತಿ–ಜವಾಬ್ದಾರಿ ತ:ಖ್ತೆ ಹಾಗೂ ಅವುಗಳಿಗೆ ಸಂಬಂಧಪಟ್ಟ ವಿವರಗಳನ್ನು ವರದಿಪುಸ್ತಕದಲ್ಲಿ ಮುದ್ರಿಸಿದ್ದು, ಅವುಗಳಿಗೆ ಸಂಬಂಧಪಟ್ಟಂತೆ ಸ್ಪಷ್ಟೀಕರಣ ನೀಡಲಾಗುವುದು, ಜಮಾ–ಖರ್ಚು ತ:ಖ್ತೆ ಬೇಕಾದಲ್ಲಿ ಕಛೇರಿಗೆ ಬಂದು ಪರಿಶೀಲನೆ ಮಾಡಬಹುದು ಎಂದು ತಿಳಿಸಿದರು. ಶ್ರೀ ಕೆ ಎನ್ ಶ್ರೀನಿವಾಸ ಶರ್ಮರವರು ಈ ಹಿಂದೆ ನೀಡುತ್ತಿದ್ದಂತೆ ಲೆಕ್ಕಪರಿಶೋಧನಾ ವರದಿ ಇರುವುದಿಲ್ಲ ಎಂದರು, ಇದಕ್ಕೆ ಖಜಾಂಚಿಯವರು ಉತ್ತರಿಸಿ ಎಲ್ಲಾ ಸನ್ನದು ಲೆಕ್ಕಿಗರು ಅವರದೇ ರೀತಿ ವರದಿಯನ್ನು ತಯಾರಿಸುತ್ತಾರೆ, ಅವರನ್ನು ಪ್ರಶ್ನೆ ಮಾಡುವುದು ಸರಿಯಲ್ಲ ಎಂದರು. ಶ್ರೀ ಶ್ರೀನಿವಾಸ ಶರ್ಮರವರು ಇದಕ್ಕೆ ಪ್ರತಿಕ್ರಿಯಿಸಿ ಸನ್ನದು ಲೆಕ್ಕಿಗರನ್ನು ನೇಮಕ ಮಾಡುವುದು ಸರ್ವಸದಸ್ಯರ ಸಭೆ ಎಂದಾದ ಮೇಲೆ ಅವಶ್ಯಕತೆ ಇದ್ದರೆ ಅವರು ಸರ್ವಸದಸ್ಯರ ಸಭೆಯಲ್ಲಿ ಉತ್ತರ ನೀಡಬೇಕಾಗುತ್ತದೆ ಎಂದರು. ಖಜಾಂಚಿಯವರು ಉತ್ತರಿಸಿ ಕಾಯ್ದೆ

ಕಾನೂನಿನ ರೀತ್ಯ ಸನ್ನದು ಲೆಕ್ಕಿಗರು ಸರ್ವಸದಸ್ಯರ ಸಭೆಯಲ್ಲಿ ಭಾಗವಹಿಸಿ ಆಲಿಸಬಹುದೇ ಹೊರತು ಉತ್ತರ ನೀಡಲು ಸಾಧ್ಯವಿಲ್ಲ ಎಂದರು. ಮುಂದುವರೆದು ಶ್ರೀ ಚಂದ್ರಶೇಖರ್‌ರವರು ಕೇಳಿರುವ ಆಡಳಿತ ನಿರ್ವಹಣಾ ವೆಚ್ಚದ ವಿವರಗಳನ್ನು ತಿಳಿಸಿದರು. ಶ್ರೀ ರಮೇಶ್ ಕುಮಾರ್ (ಸದಸ್ಯತ್ವದ ಸಂಖ್ಯೆ:3573)ರವರು ಮಾತನಾಡಿ ಸಿಬ್ಬಂದಿಗೆ ಎಕ್ಸ್‌ಗ್ರೇಷಿಯಾ 90,000/- ಪಾವತಿ ಮಾಡಿರುವುದು ಕಾನೂನು ರೀತಿಯಿಂದ ಸರಿಯಾದ ಕ್ರಮವೇ? ಲಾಭ ನಷ್ಟಕ್ಕೆ ನೇರವಾಗಿ ಖರ್ಚು ಹಾಕಿದ್ದಿರಿ ಇದರಿಂದ ಲಾಭಾಂಶ ಕಡಿಮೆ ಆಗಿದೆ ಇದನ್ನು ಒಪ್ಪಿ ಕೊಳ್ಳುತ್ತೀರ ಎಂದು ಪ್ರಶ್ನಿಸಿದರು. ಕಳೆದ ಬಾರಿಯು ಇದೇ ಪ್ರಶ್ನೆಗೆ ಈ ಬಾರಿ ಸರಿಪಡಿಸಲಾಗುವಂತೆ ಉತ್ತರಿಸಲಾಗಿರುತ್ತದೆ, ಇದರ ಕಾರಣದಿಂದ ಲಾಭ ರೂ.90,000/- ಕಡಿಮೆಯಾಗಲಿಲ್ಲವೇ, ಇದರಿಂದ ಸದಸ್ಯರಿಗೆ ಲಾಭಾಂಶವು ಕಡಿಮೆಯಾಗುವುದಿಲ್ಲವೇ ಎಂದು ಪ್ರಶ್ನಿಸಿದರು. ಶ್ರೀ ಎಂ ಡಿ ಗೋಪಿನಾಥ್ ರವರು ಉತ್ತರಿಸಿ ಇದರಿಂದ ಲಾಭದಲ್ಲಿ ಕಡಿಮೆಯಾಗುವುದಿಲ್ಲ, ಕಳೆದ ಅನೇಕ ವರ್ಷಗಳಿಂದ ಇದೇ ಕ್ರಮವನ್ನು ಅನುಸರಿಸಲಾಗಿದೆ, ನೀಡುವ ಎಕ್ಸ್-ಗ್ರೇಷೀಯಾ ಮೊತ್ತವನ್ನು ಅಂದಾಜು ಆಯ-ವ್ಯಯ ಮಂಜೂರಾತಿಯಲ್ಲಿ ಪಡೆದಿರುವ ಆಧಾರದಂತೆ ನೀಡಲಾಗುವುದು ಎಂದು ತಿಳಿಸಿದರು. ಅಧ್ಯಕ್ಷರು ಮಾತನಾಡಿ ಇದರಲ್ಲಿ ಯಾವುದೇ ಮೋಸ ಆಗಿರುವುದಿಲ್ಲ ಎಂದರು, ಶ್ರೀ ರಮೇಶ್ ಕುಮಾರ್‌ರವರು ಮಾತನಾಡಿ ಮೋಸ ಆಗಿರುವ ಬಗ್ಗೆ ಮಾತನಾಡುತ್ತಿಲ್ಲ ಸಿಬ್ಬಂದಿಯವರಿಗೆ ತೊಂಬತ್ತು ಸಾವಿರ ನೀಡಿರುವುದು ಉಪನಿಯಮದ ಪ್ರಕಾರ ನೀಡಬೇಕು ಎಂದು ತಿಳಿಸಿದರು. ಮುಂದುವರೆದು ಮಾತನಾಡಿ ನೀವು ತೊಂಬತ್ತು ಸಾವಿರಕ್ಕೆ ಪ್ರಾವಿಷನ್ ಮಾಡಬೇಕಲ್ಲವೇ ಎಂದು ಕೇಳಿದರು. ಅಧ್ಯಕ್ಷರು ಮಾತನಾಡಿ ಸಿಬ್ಬಂದಿಗೆ ಬೋನಸ್ ನೀಡಲು ಅವಕಾಶವಿರುವುದಿಲ್ಲ ಎಂದು ತಿಳಿಸಿದರು. ಶ್ರೀ ರಮೇಶ್ ಕುಮಾರ್‌ರವರು ಮಾತನಾಡಿ ಮಾನ್ಯ ಅಧ್ಯಕ್ಷರೇ ಬೋನಸ್ಸ್ ನೀಡಬಾರದೆಂದು ಎಲ್ಲೂ ಇರುವುದಿಲ್ಲ, ಸಂಘದ ಉಪನಿಯಮದಲ್ಲಿ ಬೋನಸ್ ನೀಡಲು ಅವಕಾಶವಿದೆ, ಅದರಂತೆ ಲಾಭ ವಿತರಣೆಯಲ್ಲಿ ಬೋನಸ್ ಪ್ರಾವಿಷನ್ ಮಾಡಿ ಪ್ರೊಸೀಜರ್ ಲ್ಯಾಪ್ಸೇಷನ್ ಎಂದು ತಿಳಿಸಿದರು. ಸದಸ್ಯರಿಗೆ ಅವಮಾನ ಮಾಡಬೇಡಿ ಎಂದರು. ಶ್ರೀ ಎಂ ಡಿ ಗೋಪಿನಾಥ್‌ರವರು ಮಾತನಾಡಿ expenditure book as per act ಇದೆ ಎಂದು ತಿಳಿಸಿದರು. ಶ್ರೀ ಡಿ ಎನ್ ಕೃಷ್ಣಮೂರ್ತಿಯವರು ಮಾತನಾಡಿ ವಾದ ಮಾಡುವುದು ತಪ್ಪು, ನಿಮ್ಮ ಉಪನಿಯಮದ ರೀತಿ ಕಾರ್ಯಗತ ಮಾಡಿ ಇಲ್ಲದ್ದಿದ್ದಲ್ಲಿ ಉಪನಿಯಮವನ್ನು ತಿದ್ದುಪಡಿಮಾಡಿಕೊಳ್ಳಿ ಎಂದು ತಿಳಿಸಿದರು. ಶ್ರೀನಿವಾಸ ಶರ್ಮರವರು ಮಾತನಾಡಿ ಕಳೆದ ಬಾರಿ ನಾನು ನಿರ್ದೇಶಕರಾಗಿದ್ದಾಗ ಉಪನಿಯಮ ಹಾಗೂ ಕಾಯಿದೆ ಕಾನೂನಿನಂತೆ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಲಾಗಿದೆ ಎಂದು ತಿಳಿಸಿದರು. ಶ್ರೀ ಎಂ ಡಿ ಗೋಪಿನಾಥ್ ರವರು ಮಾತನಾಡಿ ಮುಂದಿನ ದಿನಗಳಲ್ಲಿ ಉಪನಿಯಮದ ತಿದ್ದುಪಡಿ ಮಾಡಲಾಗುವುದು ಎಂದು ತಿಳಿಸಿದರು. ಶ್ರೀ ರಮೇಶ್ ಕುಮಾರ್‌ರವರು ಮಾತನಾಡಿ ಉಪನಿಯಮದನುಸಾರವಾಗಿ ಲಾಭಾಂಶದಲ್ಲಿ ತೋರಿಸಬೇಕು ಮಹಾಸಭೆಯ ಅನುಮೋದನೆ ಪಡೆಯಬೇಕು ಎಂದು ತಿಳಿಸಿದರು. ಅಧ್ಯಕ್ಷರ ಅನುಮತಿಯ ಮೇರೆಗೆ ಶ್ರೀ ಪ್ರೀತನ್‌ರವರು ಮಾತನಾಡಿ ಕಾಯಿದೆ ಪ್ರಕಾರ ಎಕ್ಸ್‌ಗ್ರೇಷಿಯಾ ಪಾವತಿ ಮಾಡಲಾಗಿರುತ್ತದೆ ಎಂದು ತಿಳಿಸಿದರು. ಇಲ್ಲಿ ಪಾವತಿಸಲೇ ಬೇಕು ಎಂದಿರುವುದಿಲ್ಲ, ಪಾವತಿಸಬಹುದು ಎಂದು ದಾಖಲಾಗಿರುತ್ತದೆ ಎಂದರು. ಶ್ರೀ ಶ್ರೀನಿವಾಸ್ ಶರ್ಮರವರು ಕಾಯಿದೆ ಕಲಂ 57ಎ(ಎಫ್) ಉಪನಿಯಮದ ಪ್ರಕಾರ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು. ಎಕ್ಸ್‌ಗ್ರೇಷಿಯಾ ನೇರವಾಗಿ ವೆಚ್ಚ ಮಾಡಿ ಲಾಭವನ್ನು ತೋರಿಸಲಾಗಿದೆ, ಉಪನಿಯಮದ ಪ್ರಕಾರ ಲಾಭದಲ್ಲಿ ಈ ಮೊತ್ತವನ್ನು ತೆಗದಿಡಬೇಕು ಎಂದು ತಿಳಿಸಿದರು. ಶ್ರೀ ಎಂ ಡಿ ಗೋಪಿನಾಥ್‌ರವರು ಮಾತನಾಡಿ ಸಿಬ್ಬಂದಿ ವರ್ಗದವರ ಕಾರ್ಯಕ್ಷಮತೆಯನ್ನು ಪರಿಗಣಿಸಿ ಅವರಿಗೆ ಹೆಚ್ಚು ಮೊತ್ತವನ್ನು ನಿಗದಿಪಡಿಸಿ ಪಾವತಿ ಮಾಡಲು ನಿರ್ದೇಶಕ ಮಂಡಲಿ ಸಭೆಯಲ್ಲಿ ನಿರ್ಧರಿಸಿ ನೀಡುವ ಉದ್ದೇಶದಿಂದ ಎಂದು ತಿಳಿಸಿದರು. ಶ್ರೀ ಶ್ರೀನಿವಾಸ ಶರ್ಮರವರು ಮಾತನಾಡಿ ಪ್ರಾವಿಷನ್ ಮಾಡಿ ಪಾವತಿಸುವುದು ಹೆಚ್ಚುವರಿ ಮೊತ್ತವನ್ನು ಕಾಯ್ದಿರಿಸಿದ ನಿಧಿಗೆ ವರ್ಗಾವಣೆ ಮಾಡಬಹುದು ಎಂದು ತಿಳಿಸಿದರು. ಶ್ರೀ ರಮೇಶ್ ಕುಮಾರ್‌ರವರು ಉಪನಿಯಮದಲ್ಲಿ ಇರುವಂತೆ ಪಾವತಿಸುವುದು ಕ್ರಮ, ನಿಮ್ಮ ಉಪನಿಯಮದಲ್ಲಿ ಎರಡು ತಿಂಗಳ ಸಂಬಳಕ್ಕೆ ಮೀರತಕ್ಕದ್ದಲ್ಲ ಎಂದು ತಿಳಿಸಿದರು. ಅಧ್ಯಕ್ಷರ ಅನುಮತಿಯ ಮೇರೆಗೆ ಶ್ರೀ ಪ್ರೀತನ್‌ರವರು ಮಾತನಾಡಿ ಕಾಯಿದೆಯಲ್ಲಿ ಇಷ್ಟೇ ಕೊಡಬೇಕು ಎಂದು ಎಲ್ಲೂ ಇರುವುದಿಲ್ಲ ಆಡಳಿತ ಮಂಡಲಿಯ ನಿರ್ಧಾರದಂತೆ ನೀಡಲಾಗುವುದು ಎಂದು ತಿಳಿಸಿದರು. ಶ್ರೀ ರಮೇಶ್‌ಕುಮಾರ್‌ರವರು ಸಿಬ್ಬಂದಿಗೆ ಅವರು ಕರ್ತವ್ಯ ನಿರ್ವಹಣೆ ಮಾಡುವುದು ಕಾಯಿದೆಯಲ್ಲಿ ಕೊಡಬಹುದು ಎಂದು ಇರುವುದನ್ನು ಉಪನಿಯಮದಲ್ಲಿ ಕೊಡಬೇಕು ಎಂದು ತಿದ್ದುಪಡಿ ಮಾಡಿಕೊಂಡು ಕೊಡಬೇಕು ಎಂದು ತಿಳಿಸಿದರು. ಶ್ರೀ ಟಿ ವಿ ಬಾಲಕೃಷ್ಣರವರು ಮಾತನಾಡಿ ಸಿಬ್ಬಂದಿಗೆ ಬೋನಸ್‌ನ್ನು ಕಾನೂನು ಕಾಯಿದೆ ರೀತ್ಯ ಕನಿಷ್ಟ

8.33% ಪಾವತಿ ಮಾಡಲೇಬೇಕು, ಹೆಚ್ಚುವರಿ ಮೊತ್ತ ಎಕ್ಸ್‌ಗ್ರೇಷಿಯಾ ಖಾತೆಯಿಂದ ಪಾವತಿ ಮಾಡಬಹುದಾಗಿರುತ್ತದೆ ಎಂದು ತಿಳಿಸಿದರು. ಶ್ರೀ ಡಿ ಎನ್ ಕೃಷ್ಣಮೂರ್ತಿಯವರು ಮಾತನಾಡಿ ಕಳೆದ 5–6 ವರ್ಷಗಳಿಂದಲೂ ಈ ವಿಷಯ ಚರ್ಚೆಗೆ ಬರುತ್ತಲೇ ಇದೆ. ನಿರ್ದೇಶಕ ಮಂಡಲಿ ನಿರ್ಧರಿಸಿದಂತೆ ಎಂದು ನಿರ್ದೇಶಕ ಮಂಡಲಿ ಸದಸ್ಯರು ಸಿಬ್ಬಂದಿವರ್ಗದವರಿಗೆ ಅವರ ಮನೆಯಿಂದ ತಂದು ಕೊಡುವುದೇನೂ ಬೇಡ. ಶ್ರೀ ರಮೇಶ್‌ಕುಮಾರ್‌ರವರು ಹೇಳಿದಂತೆ ಲಾಭ ವಿತರಣೆಯಲ್ಲಿ ನೀಡಿ, ಹೀಗೇ ಕೊಡುತ್ತೇವೆ ಎಂದು ವಾದ ಮಾಡುವುದು ಬೇಡ, ಕಾಯ್ದೆ ಹೇಳಿದಂತೆ ಕೇಳಿ, ಪ್ರತಿವರ್ಷ ಇದೇ ಚರ್ಚೆ ಆಗುವುದು ಬೇಡ. ಬದಲಾವಣೆ ಬೇಕಾದರೆ ಬೈಲಾ ತಿದ್ದುಪಡಿ ಮಾಡಿ ಎಂದರು. ಖಜಾಂಚಿಯವರು ಮಾತನಾಡಿ ಕಾಯ್ದೆಗೆ ಅನುಗುಣವಾಗಿ ಬೈಲಾ ಇರಬೇಕು ಎಂದರು. ಶ್ರೀ ಕೆ ಎನ್ ಶ್ರೀನಿವಾಸ ಶರ್ಮರವರು ಮಾತನಾಡಿ ನಿರ್ದೇಶಕ ಮಂಡಲಿ ನಿರ್ಧಾರದಂತೆ ಲಾಭ ವಿತರಣೆಯಲ್ಲಿ ಮೊತ್ತವನ್ನು ನಿಗದಿಪಡಿಸಿ ತೆಗೆದಿಡುವಂತೆ ತಿಳಿಸಿದರು. ಶ್ರೀ ರಮೇಶ್‌ಕುಮಾರ್‌ರವರು ಮಾತನಾಡಿ ಕಾಯ್ದೆಯ ಪ್ರಕಾರ ಲಾಭ ವಿತರಣೆಯಲ್ಲೇ ಬೋನಸ್ ಕೊಡಬಹುದು ಎಂದು ಇರುವುದರಿಂದ ಇನ್ನು ಮುಂದಿನ ದಿನಗಳಲ್ಲಿ ಅಲ್ಲಿಯೇ ವಿಂಗಡಣೆ ಮಾಡಿ ಮಹಾಸಭೆಗೆ ಶಿಫಾರಸ್ಸು ಮಾಡಬೇಕು ಎಂದು ಒತ್ತಾಯಪೂರ್ವಕವಾಗಿ ಪ್ರತಿಪಾದಿಸಿದರು. ಶ್ರೀ ಪ್ರೀತನ್‌ರವರು ಮಾತನಾಡಿ ಬೋನಸ್ ಹಾಗೂ ಎಕ್ಸ್‌ಗ್ರೇಷಿಯಾ ಪದ ಬೇರೆ ಅರ್ಥ ಸೂಚಿಸುತ್ತದೆ ಎಂದರು. ಶ್ರೀ ರಮೇಶ್‌ಕುಮಾರ್ ಪ್ರತಿಕ್ರಿಯಿಸಿ ಏನೇ ಅರ್ಥ ಸೂಚಿಸಿದರೂ ಸಿಬ್ಬಂದಿವರ್ಗದವರು ತಮ್ಮ ಕರ್ತವ್ಯ ನಿಷ್ಠೆಯಿಂದ ನಿರ್ವಹಿಸುತ್ತಿರುವುದಕ್ಕೆ ನೀಡಿ ಎಂದರು. ನಿರ್ದೇಶಕ ಮಂಡಲಿ ಇದಕ್ಕೆ ಒಪ್ಪಿಗೆ ಸೂಚಿಸಿತು.

ಶ್ರೀ ಶ್ರೀನಿವಾಸ್ ಶರ್ಮರವರು ಮಾತನಾಡಿ ಹೊರ ಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಯನ್ನು ತೆಗೆದುಕೊಂಡಿರುವುದಕ್ಕೆ ಕರಾರು ಮಾಡಲಾಗಿದೆಯೇ ಎಂದು ಪ್ರಶ್ನಿಸಿದರು. ಶ್ರೀ ಎಂ ಡಿ ಗೋಪಿನಾಥ್‌ರವರು ಮಾತನಾಡಿ ನಿಯಮಾನುಸಾರ ಒಪ್ಪಂದದ ಕರಾರು ಮಾಡಲಾಗಿದೆ ಎಂದು ತಿಳಿಸಿದರು. ಶ್ರೀ ಶ್ರೀನಿವಾಸ್ ಶರ್ಮರವರು ಮಾತನಾಡಿ ಕರಾರು ನೋಡಲು ಅವಕಾಶ ನೀಡಲು ಕೇಳಿದರು, ಶ್ರೀ ಎಂ ಡಿ ಗೋಪಿನಾಥ್‌ರವರು ಕಚೇರಿ ವ್ಯವಹಾರದ ವೇಳೆಯಲ್ಲಿ ಬಂದು ಪರಿಶೀಲಿಸಬಹುದು ಎಂದು ತಿಳಿಸಿದರು. ಲಾಭ ನಷ್ಟದ ತ:ಖ್ತೆಗೆ ಶ್ರೀ ಶ್ರೀನಿವಾಸ್ ಶರ್ಮರವರು ಮತ್ತು ಶ್ರೀ ಕೇಶವ ಪ್ರಸಾದ್‌ರವರು ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಿದರು. ಶ್ರೀ ರಾಮಕೃಷ್ಣರವರು ಮಾತನಾಡಿ ನಾನು ಸಂಘದ ಪ್ರಾರಂಭದಿಂದಲೂ ಸದಸ್ಯನಾಗಿದ್ದು, ನಮ್ಮ ಸಂಸ್ಥೆಯು ಅಭಿವೃದ್ಧಿಗೆ ದಕ್ಷ ಆಡಳಿತ ಹಾಗೂ ಸಿಬ್ಬಂದಿಗಳ ಪ್ರಾಮಾಣಿಕ ಕರ್ತವ್ಯ ಕಾರಣವಾಗಿರುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು ಯಾವುದೇ ಭಿನ್ನಾಭಿಪ್ರಾಯಗಳಿಗೂ ಅವಕಾಶ ಕೊಡದೆ ಸಮಧಾನವಾಗಿ ಸದಸ್ಯರು ಸಭೆಯಲ್ಲಿ ನಡೆದು ಕೊಳ್ಳುವಂತೆ ತಿಳಿಸಿದರು. ಸಂಘವು ಒಂದು ಒಳ್ಳೆ ಸಂಸ್ಥೆ ಅಗ್ರ ಸ್ಥಾನದಲ್ಲಿ ಇರುವ ಸಂಸ್ಥೆ ಸದಸ್ಯರಿಗೆ ಸಕಾಲದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಲಾಭ ನಷ್ಟದ ಬಗ್ಗೆ ಹೆಚ್ಚಿನ ಚರ್ಚೆ ಅವಶ್ಯಕತೆ ಇರುವುದಿಲ್ಲ ಚಾಮುಂಡೇಶ್ವರಿಯ ಕೃಪೆ ಇದೆ ಸಂಘ ಅಭಿವೃದ್ಧಿ ಹೊಂದುತ್ತದೆ ಎಂದು ತಿಳಿಸಿದರು. ಶ್ರೀ ಡಿ ಎನ್ ಕೃಷ್ಣಮೂರ್ತಿ ಯವರು ಮಾತನಾಡಿ ಹಿರಿಯರು ತಪ್ಪಾಗಿ ತಿಳಿಯಬಾರದು, ಚರ್ಚೆ ಇಲ್ಲದೆ ಯಾವುದೇ ಸಭೆ ನಡೆಯುವುದಿಲ್ಲ, ಕೆಲವು ವಿಚಾರಗಳ ವಿನಿಮಯಗಳು ಪ್ರಶ್ನೆಗಳು ಇದ್ದೇ ಇರುತ್ತದೆ ಎಂದು ತಿಳಿಸಿದರು. ಮುಂದುವರೆದಂತೆ ಶ್ರೀ ವಿ ಎನ್ ಕೃಷ್ಣರವರು ಮಾತನಾಡಿ ರಿಪೇರಿ ಮತ್ತು ನವೀಕರಣ ಖಾತೆಯಲ್ಲಿ ಸಂಘದ ಪ್ರಧಾನ ಕಛೇರಿಯ ಮುಖ್ಯದ್ವಾರವನ್ನು ಬದಲಾವಣೆ ಮಾಡುವ ಉದ್ದೇಶವೇನು ಇದರಿಂದ ವಿನಾಕಾರಣ ಖರ್ಚು, ಮಹಡಿಯ ಮೆಟ್ಟಲುಗಳನ್ನು ಹತ್ತುವಾಗ ಮೇಲ್ಭಾಗದಲ್ಲಿ ವಸ್ತಿ ಬಂದು ಪುಡಿ ಉದುರುತ್ತಿದೆ ಅದನ್ನು ಮೊದಲು ಸರಿಮಾಡಿಸುವಂತೆ ತಿಳಿಸಿದರು. ಶ್ರೀ ಎಂ ಡಿ ಗೋಪಿನಾಥ್‌ರವರು ಆಗಬಹುದು ಎಂದು ತಿಳಿಸಿದರು. ಶ್ರೀ ಶ್ರೀನಿವಾಸ್‌ಶರ್ಮರವರು ಪುಟ ಸಂಖ್ಯೆ:15 ರಲ್ಲಿ ಆಪದ್ಧನ ನಿಧಿಯ ಮೊತ್ತವನ್ನು ಈ ವರ್ಷದಲ್ಲಿ ಪಡೆದಿರುವುದಿಲ್ಲ ಅಷ್ಟೇ ಮೊತ್ತ ಕೂಡಿದ್ದು, ಕಳೆದಿದ್ದು ಅವಶ್ಯಕತೆ ಇರುವುದೇ ಸಂಘದ ಪ್ರಧಾನ ಕಛೇರಿಯ ಕಟ್ಟಡ ನಿರ್ಮಾಣಕ್ಕೆ ತೆಗೆದುಕೊಂಡ ಬಾಬ್ತು ಈ ವರ್ಷ ಸಂಪೂರ್ಣವಾಗಿ ಜಮಾ ಮಾಡಿರುವುದನ್ನು ಆಡಳಿತ ವರದಿಯಲ್ಲಿ ತೋರಿಸಿದ ಮೇಲೆ ಇಲ್ಲಿ ತೋರಿಸುವ ಅವಶ್ಯಕತೆ ಇರಲಿಲ್ಲವೆಂದು ತಿಳಿಸಿದರು. ಶ್ರೀ ಎಂ ಡಿ ಗೋಪಿನಾಥ್‌ರವರು ಉತ್ತರಿಸಿ ಇದು ಸದಸ್ಯರ ಮಾಹಿತಿಗಾಗಿ ಹಾಕಲಾಗಿದೆ ಎಂದು ತಿಳಿಸಿದರು.

ಶ್ರೀ ಶ್ರೀನಿವಾಸ್ ಶರ್ಮರವರು ಮಾತನಾಡಿ Depriciation Schedule ನಲ್ಲಿ ಅಳಿಸುವಿಕೆ ಎಂಬ ಪದ ಬಳಕೆ ಸರಿ ಇರುವುದಿಲ್ಲ. ಸರಿಯಾದ ಪದಗಳ ಬಳಕೆ ಮಾಡಿರುವುದಿಲ್ಲ. 620/– ರೂ.ಗಳು ವ್ಯತ್ಯಾಸವಿದ್ದು, ಅದನ್ನು ಈ ವರ್ಷಕ್ಕೆ ಸರಿಪಡಿಸಿಕೊಳ್ಳಿ ಎಂದು ತಿಳಿಸಿದರು. ಶ್ರೀ ಎಂ ಡಿ ಗೋಪಿನಾಥ್‌ರವರು ಮಾತನಾಡಿ ಕನ್ನಡ ತರ್ಜುಮೆ ಮಾಡಿದಾಗ ಪದಗಳ

ಜೋಡಣೆ ಸರಿಯಾಗಿ ಹೊಂದಿಲ್ಲದಿರುವುದನ್ನು ಸರಿಪಡಿಸಲಾಗುವುದು ಎಂದು ತಿಳಿಸಿದರು. ವ್ಯತ್ಯಾಸವನ್ನು ಆರ್ಥಿಕ ವರ್ಷಕ್ಕೆ ಸರಿಪಡಿಸಿಕೊಳ್ಳಲಾಗುವುದು ಎಂದು ತಿಳಿಸಿದರು. ಶ್ರೀ ಶ್ರೀನಿವಾಸ ಶರ್ಮರವರು ಮಾತನಾಡಿ ಈ ವ್ಯತ್ಯಾಸಗಳನ್ನು ಕಛೇರಿಯಲ್ಲಿ ಸಿದ್ಧಪಡಿಸಿ, ಅದನ್ನು ಆಂತರಿಕ ಲೆಕ್ಕ ಪರಿಶೋಧಕರು ಪರಿಶೀಲಿಸಿ, ನಂತರ ಸನ್ನದು ಲೆಕ್ಕಿಗರು ಪರಿಶೀಲಿಸಬೇಕು. ನಾನು ಯಾವಾಗಲೂ ಇದನ್ನೇ ಹೇಳುತ್ತಿದ್ದೇನೆ. ಆದರೆ ಈ ವ್ಯವಸ್ಥೆ ಕಾರ್ಯಗತವಾಗುತ್ತಿಲ್ಲ , ಸರಿಯಾಗಿ ಗಮನಿಸದೆ ಇದನ್ನೇ ಸನ್ನದು ಲೆಕ್ಕಿಗರು ಒಪ್ಪಿಕೊಂಡಿರುವುದು ಸರಿಯಲ್ಲ ಎಂದು ತಿಳಿಸಿದರು. ಶ್ರೀ ಕೇಶವ ಪ್ರಸಾದ್ ರವರು ಮಾತನಾಡಿ ಸಂಘದ ಆಂತರಿಕ ಲೆಕ್ಕ ಪರಿಶೋಧಕರು ಇದನ್ನು ಗಮನಿಸಿರುವುದಿಲ್ಲವೇ, ಅವರು ತಮ್ಮ ವರದಿಯನ್ನು ನೀಡಿಲ್ಲವೇ, ಸನ್ನದು ಲೆಕ್ಕಿಗರು ಪರಿಶೀಲಿಸಿರುವುದು ಏನನ್ನು ಎಂದು ಪ್ರಶ್ನಿಸಿದರು. ಶ್ರೀ ಎಂ ಡಿ ಗೋಪಿನಾಥ್‌ರವರು ಉತ್ತರಿಸಿ ಕೈತಪ್ಪಿ ಆಗಿರುವ ತಪ್ಪನ್ನು ವರದಿ ಸಾಲಿಗೆ ಸರಿಪಡಿಸಿಕೊಳ್ಳುವ ಅವಕಾಶವಿದೆ ಇದಕ್ಕೆ ತಾವು ನೇರವಾಗಿ ಸನ್ನದು ಲೆಕ್ಕಿಗರನ್ನು ಅವರ ಕರ್ತವ್ಯವನ್ನು ಪ್ರಶ್ನಿಸುವ ಹಕ್ಕು ಇರುವುದಿಲ್ಲ ಎಂದು ತಿಳಿಸಿದರು.

ಶ್ರೀ ಡಿ ಎನ್ ಕೃಷ್ಣಮೂರ್ತಿಯವರು ಮಾತನಾಡಿ ಪುಟ ಸಂಖ್ಯೆ:17 Contingency ವೆಚ್ಚಗಳನ್ನು ಕಡಿಮೆ ಮಾಡಬೇಕು ಎಂದು ತಿಳಿಸಿದರು. ಶ್ರೀ ಚಂದ್ರಶೇಖರ್‌ರವರು ಮಾತನಾಡಿ ರೂ. 4199/– ಯಾವ ಚರ ಆಸ್ತಿಯ ನಷ್ಟವೆಂದು ಕೇಳಿದರು. ಶ್ರೀ ಎಂ ಡಿ ಗೋಪಿನಾಥ್‌ರವರು ಮಾತನಾಡಿ ಚಿನ್ನಾಭರಣ ಮೌಲ್ಯಮಾಪನದ ಯಂತ್ರವನ್ನು ಹಳೆಯ ಯಂತ್ರವನ್ನು ಮಾರಿ ಹೊಸ ಯಂತ್ರ ಖರೀದಿಸಿದ ನಷ್ಟದ ಮೊತ್ತವಾಗಿರುತ್ತದೆ ಎಂದು ತಿಳಿಸಿದರು. ಶ್ರೀ ಬಾಲಕೃಷ್ಣ ಟಿ ವಿಯವರು ಮಾತನಾಡಿ ಪುಟ ಸಂಖ್ಯೆ:19 ರಲ್ಲಿ ಕರಡು ಸಂಶಯಾಸ್ಪದ ನಿಧಿ ಎಂದರೆ ಇದು ಅನುಮಾನಸ್ಪದ ನಿಧಿಯ ಮೊತ್ತವೇ ಎಂದು ಕೇಳಿದರು. ಅಧ್ಯಕ್ಷರು ಮಾತನಾಡಿ ಸಾಲತೆಗೆದುಕೊಂಡು ಮರಣ ಹೊಂದಿದ ಸದಸ್ಯರ / ವಸೂಲಾಗದ ಸಾಲಗಳ ಮೊತ್ತವನ್ನು ಹೊಂದಾಣಿಕೆ ಮಾಡಿಕೊಳ್ಳುವ ಸಲುವಾಗಿ ತೆಗೆದಿರಿಸುವ ಮೊತ್ತ ಎಂದು ಸ್ಪಷ್ಟೀಕರಣ ನೀಡಿದರು. ಇದು ಪ್ರತಿವರ್ಷ ಲಾಭಾಂಶದಿಂದ ತೆಗೆದಿಟ್ಟಿರುವ ಮೊತ್ತ ಒಟ್ಟು ಸಂಗ್ರಹವಾಗಿರುವುದು ಎಂದು ತಿಳಿಸಿದರು. ಶ್ರೀ ಶ್ರೀನಿವಾಸ್ ಶರ್ಮರವರು ಮಾತನಾಡಿ ಪುಟ ಸಂಖ್ಯೆ:20ರಲ್ಲಿ ರಜತ ಸಿರಿ ಆರ್ ಡಿ ಠೇವಣಿ ಖಾತೆಯ ಮೇಲಿನ ಬಡ್ಡಿ ಕಾಯ್ದಿರಿಸಿದ್ದು, ರೂ.25,384/– ವ್ಯತ್ಯಾಸದ ಬಗ್ಗೆ ವಿವರ ನೀಡಲು ಕೇಳಿದರು. ಶ್ರೀ ಎಂ ಡಿ ಗೋಪಿನಾಥ್ ರವರು ಮಾತನಾಡಿ ಅವಧಿಗೆ ಮುನ್ನ ಮುಕ್ತಾಯಗೊಳಿಸಿದ ಖಾತೆಯ ಕಾಯ್ದಿರಿಸಿದ ಮೊತ್ತವನ್ನು Reverse Entry ಹಾಕಲಾಗಿರುತ್ತದೆ. ಸಂಘದ ಕಟ್ಟಡ ಮತ್ತು ನಿವೇಶನದ ಮೊತ್ತವನ್ನು ಬೇರ್ಪಡಿಸಿ ತೋರಿಸಬೇಕಾಗಿತ್ತು ಅಲ್ಲವೇ ಎಂದು ಶ್ರೀ ಶ್ರೀನಿವಾಸ ಶರ್ಮರವರು ಕೇಳಿದರು. ಆದಾಯ ತೆರಿಗೆ ರೂ.1,37,000/– Refund ಆಗಲು ಬಾಕಿ ಇರುವುದನ್ನು ಖಾತೆಗೆ ಜಮಾ ಮಾಡುವ ವ್ಯವಸ್ಥೆಯನ್ನು ಮಾಡಿಕೊಳ್ಳಲು ತಿಳಿಸಿದರು. ಶ್ರೀ ಧರ್ಮೇಂದ್ರ ಸ.ಸಂಖ್ಯೆ:5216 ಟಿಡಿಎಸ್ ಬಾಬ್ತು ಬರುವುದೇ ಅಥವಾ ಇಲ್ಲವೋ ಎಂದು ಕೇಳಿದರು. ಶ್ರೀ ಎಂ ಡಿ ಗೋಪಿನಾಥ್‌ರವರು ಮಾತನಾಡಿ ಬರುತ್ತದೆ ಸಂಘದ ಆದಾಯ ತೆರಿಗೆ ಸನ್ನದು ಲೆಕ್ಕಿಗರು ಇದರ ಜಮಾ ಪಡೆಯಲು ಆದಾಯ ತೆರಿಗೆ ಇಲಾಖೆಯೊಂದಿಗೆ ಪತ್ರ ವ್ಯವಹಾರ ಮಾಡಿರುತ್ತಾರೆ ಎಂದು ಉತ್ತರಿಸಿದರು. ಈ ಎಲ್ಲಾ ಚರ್ಚೆಗಳ ನಂತರ ಶ್ರೀ ಜಗದೀಶ್, ಶ್ರೀ ಮಂಜುನಾಥ್ (ಸ.ಸಂಖ್ಯೆ:5157) ರವರು ಸೂಚಿಸಿ ಶ್ರೀ ವೆಂಕಟಸುಬ್ಬಯ್ಯ, ಶ್ರೀಮತಿ ತನುಜ (ಸ.ಸಂಖ್ಯೆ:7953) ರವರುಗಳು ಅನುಮೋದಿಸಿದರು.

**<u>9. 2021–22ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿಯ ಪರಿಶೀಲನೆ ಮತ್ತು ಅನುಮೋದನೆ:</u>**

2021–22ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗೆ ಅನುಪಾಲನಾ ವರದಿಯ ಅನುಮೋದನೆಗಾಗಿ ಉಪಾಧ್ಯಕ್ಷರಾದ ಶ್ರೀ ಹೆಚ್ ಎಸ್ ಪ್ರಶಾಂತ್ ತಾತಾಚಾರ್‌ರವರು ಸದಸ್ಯರಿಗೆ ನಮಸ್ಕಾರವನ್ನು ತಿಳಿಸುತ್ತಾ ಸಭೆಗೆ ಮಂಡಿಸಿದರು. ವರದಿ ಪುಸ್ತಕದ ಪುಟ ಸಂಖ್ಯೆ:24 ರಿಂದ 27ರವರೆಗೆ ವಿವರಗಳನ್ನು ನೀಡಲಾಗಿದೆ ಸದಸ್ಯರು ಪರಿಶೀಲಿಸಿ ಏನಾದರೂ ಸ್ಪಷ್ಟೀಕರಣ ಬೇಕಾದಲ್ಲಿ ಕೇಳಲು ತಿಳಿಸಿದರು. ಶ್ರೀ ಶ್ರೀನಿವಾಸ್ ಶರ್ಮರವರು ಮಾತನಾಡಿ ಸ್ವತ್ರಂತ್ರ ಲೆಕ್ಕಪರಿಶೋಧನಾ ವರದಿಯಲ್ಲಿ ಸನ್ನದು ಲೆಕ್ಕಿಗರು ನೀಡಿರುವ ವರದಿಯಲ್ಲಿ ಅನೇಕ ತಿದ್ದುಪಡಿಗಳಿವೆ, ಹಿಂದಿನ ಲೆಕ್ಕಪರಿಶೋಧನಾ ವರದಿಯಲ್ಲಿ ಬೇರೆ ರೀತಿ ಇದೆ ಈ ವರದಿಯಲ್ಲಿ ಬೇರೆ ರೀತಿ ಇದೆ ಇದಕ್ಕೆ ಸ್ಪಷ್ಟೀಕರಣ ನೀಡಿ ಎಂದರು. ಉಪಾಧ್ಯಕ್ಷರು ಮಾತನಾಡಿ ಅವರು ನೀಡಿರುವ ಸ್ವತಂತ್ರ ಲೆಕ್ಕಪರಿಶೋಧನಾ ವರದಿ ಸರಿಯಾಗಿರುತ್ತದೆ. ಈ ಬಗ್ಗೆ ಅವರೊಂದಿಗೆ ಚರ್ಚೆ ಮಾಡಿ ಸ್ಪಷ್ಟೀಕರಣ

ಪಡೆಯಲಾಗಿರುತ್ತದೆ. ಒಬ್ಬರು ಸನ್ನದು ಲೆಕ್ಕಿಗರು ನೀಡಿದಂತೆಯೇ ಇನ್ನೊಬ್ಬರು ಸನ್ನದು ಲೆಕ್ಕಿಗರು ವರದಿ ನೀಡಬೇಕು ಎಂದು ನಿಯಮವೇನೂ ಇರುವುದಿಲ್ಲ ಎಂದು ತಿಳಿಸಿದರು. ಶ್ರೀ ಶ್ರೀನಿವಾಸಶರ್ಮರವರು ಮಾತನಾಡಿ ಸರ್ವಸದಸ್ಯರ ಸಭೆಯಲ್ಲಿಯೇ ಸನ್ನದುಲೆಕ್ಕಿಗರನ್ನು ನೇಮಕ ಮಾಡುವುದರಿಂದ ತಮಗೆ ಸನ್ನದು ಲೆಕ್ಕಿಗರಿಂದಲೇ ಲೆಕ್ಕಪತ್ರಗಳಿಗೆ ಸಂಬಂಧಪಟ್ಟಂತೆ ಸರ್ವಸದಸ್ಯರ ಸಭೆಯಲ್ಲಿಯೇ ಕೆಲವೊಂದು ಸ್ಪಷ್ಟೀಕರಣಗಳು ಬೇಕು, ಅವರು ನೀಡಲಿ ಎಂದರು. ಹಾಗಾದರೆ ತಾವು ಆಂತರಿಕ ಲೆಕ್ಕಪರಿಶೋಧಕರನ್ನು ಸ್ಪಷ್ಟೀಕರಣ ಕೇಳುವುದಿಲ್ಲವೇ? ಹಾಗೇ ಅವರು ಉತ್ತರ ನೀಡಬೇಕು ಎಂದರು. ಅಧ್ಯಕ್ಷರು ಮಾತನಾಡಿ ಕಾಯ್ದೆ ಕಾನೂನಿನ ಅನ್ವಯ ಅವರು ಸರ್ವಸದಸ್ಯರ ಸಭೆಯಲ್ಲಿ ಆಲಿಸಲ್ಪಡಬಹುದೇ ವಿನ: ಉತ್ತರಿಸಲು ಬರುವುದಿಲ್ಲ. ಅವರನ್ನು ಕೇಳಿ ನಾವೇ ಉತ್ತರ ನೀಡುತ್ತೇವೆ ಎಂದರು. ಶ್ರೀ ಶ್ರೀನಿವಾಸ ಶರ್ಮರವರು ಮಾತನಾಡಿ ಆಡಿಟ್ ವರದಿ ತಿದ್ದುಪಡಿ ಸಂಬಂಧ ಮುಂದುವರೆಯುವ ಸಂದರ್ಭ ಎದುರಾದಲ್ಲಿ ನಾನು ಸ್ವತಂತ್ರನಾಗಿದ್ದೇನೆ ಎಂದರು. ಶ್ರೀ ರಮೇಶ್‌ಕುಮಾರ್‌ರವರು ಮಾತನಾಡಿ ನಿರ್ದೇಶಕ ಮಂಡಲಿ ಸದಸ್ಯರ ಮೇಲೆ ವೈಯಕ್ತಿಕ ದ್ವೇಷ ಇಲ್ಲ, ಈಗ ತಪ್ಪಾಗಿದೆ, ಮುಂದಿನ ವರ್ಷಕ್ಕೆ ತಪ್ಪುಗಳಾಗ ಬಾರದು. ಇಲ್ಲಿ ಅಧ್ಯಕ್ಷರು ನಾವು ಯಾರೂ ಮೋಸ ಮಾಡಿಲ್ಲ ಎಂದು ಹೇಳುತ್ತಿದ್ದಾರೆ. ನಮ್ಮ ನಿರ್ದೇಶಕ ಮಂಡಲಿ ಸದಸ್ಯರು ಮೋಸ ಮಾಡಿದ್ದಾರೆ ಎಂದು ಯಾರೂ ಹೇಳುತ್ತಿಲ್ಲ, ಯಾರ ಮನಸ್ಸಿನಲ್ಲೂ ಆ ಮನೋಭಾವನೆ ಇಲ್ಲ, ದಯವಿಟ್ಟು ಮೋಸ ಎಂಬ ಪದವನ್ನು ಬಳಸಬೇಡಿ ಎಂದರು. ಉಪಾಧ್ಯಕ್ಷರು ಮಾತನಾಡಿ ನಿರ್ದೇಶಕ ಮಂಡಲಿ ಸಭೆಯ ಚರ್ಚೆಗಳು ಹಾಗೂ ಈಗ ನಡೆಯುತ್ತಿರುವ ಚರ್ಚೆಗಳನ್ನು ಅವಲೋಕಿಸಿ ಅಧ್ಯಕ್ಷರು ಈ ರೀತಿ ಹೇಳುತ್ತಿದ್ದಾರೆ ಎಂದರು.

ಶ್ರೀ ಶ್ರೀನಿವಾಸಶರ್ಮರವರು ಮಾತನಾಡಿ ಸುಸ್ತಿಸಾಲಗಳನ್ನು ಲೆಕ್ಕ ಹಾಕುವಾಗ ಎಲ್ಲಾ ತರಹದ ಸಾಲಗಳನ್ನು ಲೆಕ್ಕ ಹಾಕಿ 'ಬಿ' ವರ್ಗೀಕರಣ ನೀಡಿದ್ದಾರೆ ಎಂದರು. ಉಪಾಧ್ಯಕ್ಷರು ಮಾತನಾಡಿ ಇಲ್ಲದಿದ್ದರೂ ಶೇಕಡ 5ಕ್ಕಿಂತ ಜಾಸ್ತಿ ಇದ್ದುದರಿಂದ 'ಬಿ' ವರ್ಗೀಕರಣ ನೀಡಲಾಗಿದೆ ಎಂದರು.

ಶ್ರೀ ಚಂದ್ರಶೇಖರ್‌ರವರು ಮಾತನಾಡಿ ಆರು ವಾಹನ ಸಾಲದ ಶೇ.100/- ಕರಡು ಅನುಮಾನಸ್ಪದದಲ್ಲಿ ಕಾಯ್ದಿರಿಸಲು ತಿಳಿಸಿರುವುದು ಸರಿಯಲ್ಲವೆಂದು ತಿಳಿಸಿದರು. ಇದು ಭದ್ರತಾ ಸಾಲವಾಗಿದ್ದು, ವಾಹನವನ್ನು ಮುಟ್ಟುಗೋಲು ಹಾಕಿ ವಸೂಲಾತಿ ಕ್ರಮಕೈಗೊಳ್ಳಬೇಕು ಎಂದು ತಿಳಿಸಿದರು. ಸುಸ್ತಿ ಸಾಲಗಳ ಮೇಲು ಶೇ.100 ರಷ್ಟು ಕಾಯ್ದಿರಿಸಲು ತಿಳಿಸಿದ್ದು, ಅನುಪಾಲನ ವರದಿಯಲ್ಲಿ ನಿರ್ದೇಶಕ ಮಂಡಲಿ ಸಭೆಯಲ್ಲಿ ಚರ್ಚಿಸಿ ಮಹಾಸಭೆಗೆ ಅನುಮೋದನೆಗೆ ಸಲ್ಲಿಸಲಾಗುವುದು ಎಂದು ತಿಳಿಸಿರುವುದು ಏನು ಕ್ರಮ ಕೈಗೊಂಡಿದ್ದೀರ, ವಾಹನವನ್ನು ಸೀಜ್ ಮಾಡಿ ಎಂದು ಸಲಹೆ ನೀಡಿದರು. ಅಧ್ಯಕ್ಷರು ಮಾತನಾಡಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಡಿಕ್ರಿ ಸಾಲಗಳಿಗೆ ತ್ವರಿತವಾದ ಕಾನೂನು ಕ್ರಮ ಕೈಗೊಳ್ಳಬೇಕು, ಜಂಟಿದಾರರ ಮೇಲೆ ಕ್ರಮ ಕೈಗೊಳ್ಳಬೇಕು, ಎಕ್ಸಿಕ್ಯುಷನ್ ಮಾಡಬೇಕು ಎಂದು ತಿಳಿಸಿದರು.

ಶ್ರೀ ಡಿ ಎನ್ ಕೃಷ್ಣಮೂರ್ತಿಯವರು ಮಾತನಾಡಿ ಮಹಾಸಭೆಯಲ್ಲಿ ಹೇಗೆ ಇದಕ್ಕೆ ಅನುಮೋದನೆ ನೀಡುವುದು. ಅಧ್ಯಕ್ಷರು ಮಾತನಾಡಿ ಸಾಲಗಳಿಗೆ ವರ್ಗಾವಣೆ ಮಾಡುತ್ತಿಲ್ಲ, ಆದರೆ ಕರಡು ಸಂಶಯಾಸ್ಪದ ನಿಧಿಗೆ ತೆಗೆದಿಡಲು ಸೂಚಿಸಿದ್ದಾರೆ ಎಂದರು.

ಶ್ರೀ ಎಂ ಆರ್ ಕೇಶವ ಪ್ರಸಾದ್ ಮಾತನಾಡಿ ಸ್ಥಿರಾಧಾರ ಸಾಲದ ವಿತರಣೆಯಲ್ಲಿ ಇಸಿ ಪಡೆಯದೆ ಸಾಲ ನೀಡಿರುವುದು ತಪ್ಪಲ್ಲವೇ ಎಂದು ಕೇಳಿದರು. ಶ್ರೀ ಪ್ರೀತನ್‌ರವರು ಮಾತನಾಡಿ ಎಂ ಡಿ ಟಿ ಡಿ ನೋಂದಣಿಯಾದ ಮೇಲೆ ಇ ಸಿ ಬರಲು ಈಗ 2 ತಿಂಗಳುಗಳು ಆಗುತ್ತದೆ, ಅದನ್ನು ಅವರು ಬರೆದಿರುವುದು ಆದರೆ ಸಂಘದಿಂದ ಫಾಲೋ ಆಫ್ ಮಾಡಿ ತರಿಸಿಕೊಳ್ಳಲಾಗುವುದು ಈಗ ಎಲ್ಲ ಬಂದಿರುತ್ತದೆ ಎಂದು ತಿಳಿಸಿದರು. ಶ್ರೀ ಶ್ರೀನಿವಾಸ ಶರ್ಮರವರು ಮಾತನಾಡಿ ಅವರು ಸಾಲಕ್ಕೆ ಸಹಿ ಹಾಕಿದ ದಿನಾಂಕಕ್ಕೆ ಅದು ಬಂದಿರುವುದಿಲ್ಲ ಅಲ್ಲವೇ ಎಂದು ಪ್ರಶ್ನಿಸಿದರು. ಪ್ರಶಾಂತ್ ತಾತಾಚಾರ್‌ರವರು ಸಾಲ ಬಿಡುಗಡೆ ಮಾಡಿ 2 ತಿಂಗಳ ಕಾಲಾವಕಾಶದಲ್ಲಿ ಬಂದಿರುತ್ತದೆ ಎಂದು ಉತ್ತರಿಸಿದರು. ಶ್ರೀ ಕೇಶವಪ್ರಸಾದ್ ರವರು ತಾವು ಅನುಪಾಲನ ವರದಿಯಲ್ಲಿ ಬಂದಿರುವ ದಿನಾಂಕ ನಮೂದಿಸಿ ಬಂದಿರುತ್ತದೆ ಎಂದು ವರದಿ ಮಾಡಿದ್ದರೆ ಪ್ರಶ್ನೆ ಉದ್ಭವವಾಗುತ್ತಿರಲಿಲ್ಲ ಎಂದು ತಿಳಿಸಿದರು.

ಸದಸ್ಯರಾದ ಶ್ರೀಮತಿ ಆಂಡಾಳ್ ಗೋಪಾಲಸ್ವಾಮಿ, ಶ್ರೀ ಚಂದ್ರಶೇಖರ್‌ರವರು ಇದನ್ನು ಸೂಚಿಸಿ ಶ್ರೀ ವಾಸುದೇವ ರಾವ್ (ಸ.ಸಂಖ್ಯೆ:1575), ಹರೀಶ್, ಸುರೇಶ್ (ಸ.ಸಂಖ್ಯೆ:1152)ರವರುಗಳು ಅನುಮೋದಿಸಿದರು.

**10. 2021–22ನೇ ಸಾಲಿನ ನಿವ್ವಳ ಲಾಭ ಮತ್ತು ಅದರ ವಿನಿಯೋಗಗಳು:**

2021–22ನೇ ಸಾಲಿನ ನಿವ್ವಳ ಲಾಭ ಮತ್ತು ಅದರ ವಿನಿಯೋಗಗಳ ಬಗ್ಗೆ, ನಿರ್ದೇಶಕರಾದ ಶ್ರೀಮತಿ ಎಂ ಎನ್ ಸೌಮ್ಯರವರು ಸಭೆಯ ಅನುಮೋದನೆಗೆ ಮಂಡಿಸಿದರು. ಲಾಭಾಂಶ ಶೇಕಡ 10ರಂತೆ ಪ್ರಸ್ತಾವನೆ ಇಟ್ಟಿರುವುದಾಗಿ ತಿಳಿಸಿದರು. ನಂತರ ಸದಸ್ಯರ ಕೋರಿಕೆಯನ್ನು ಗೌರವಿಸಿ ಶೇಕಡ 11ರಂತೆ ಲಾಭಾಂಶ ನೀಡಲು ನಿರ್ಧರಿಸಲಾಯಿತು. ಲೆಕ್ಕಾಚಾರದ ವಿವರ ಕೆಳಕಂಡಂತೆ:

| **ಸಂಘದ ಉಪನಿಯಮದ ಸಂಖ್ಯೆ 89.3ರನ್ವಯ ಲಾಭ ಹಂಚಿಕೆಯನ್ನು ನಿರ್ದೇಶಕ ಮಂಡಲಿ ಸದಸ್ಯರ ಸಭೆಯಲ್ಲಿ ಈ ಕೆಳಕಂಡಂತೆ ಶಿಫಾರಸ್ಸು ಮಾಡಲಾಗಿರುತ್ತದೆ.** | | |
|---|---|---|
| **ಕ್ರ ಸಂ** | **ಲಾಭ ವಿಲೇವಾರಿ** | **ಹಂಚಿಕೆಯ ಮೊಬಲಗು ರೂ.** |
| | ನಿವ್ವಳ ಲಾಭ 31/03/2022ಕ್ಕೆ ಇದ್ದಂತೆ | **67,68,646.38** |
| 1 | ಆಪದ್ಧನ ನಿಧಿ (ಶೇಕಡ 25%) | 16,92,162.38 |
| 2 | ಸಹಕಾರ ಶಿಕ್ಷಣ ನಿಧಿ (ಶೇಕಡ 2%) | 1,01,530.00 |
| | | **49,74,954.00** |
| 3 | ಲಾಭಾಂಶ (ಶೇಕಡ 11ರಂತೆ) | 31,05,232.00 |
| 4 | ಕರಡು ಸಾಲದ ನಿಧಿ | 8,00,000.00 |
| 5 | ಸದಸ್ಯರ ಮರಣೋತ್ತರ ನಿಧಿ | 4,00,000.00 |
| 6 | ವಿದ್ಯಾ ನಿಧಿ | 50,000.00 |
| 7 | ಕಟ್ಟಡ ನಿಧಿ | 1,50,000.00 |
| 8 | ಸಿಬ್ಬಂದಿ ಕ್ಷೇಮನಿಧಿ | 1,50,000.00 |
| 9 | ಧರ್ಮದ ನಿಧಿ | 50,000.00 |
| 10 | ಲಾಭಾಂಶ ಸಮೀಕರಣ ನಿಧಿ | 1,39,722.00 |
| 11 | ಶತಮಾನೋತ್ಸವ ನಿಧಿ | 50,000.00 |
| 12 | ಸಿಬ್ಬಂದಿ ವಿದ್ಯಾನಿಧಿ | 50,000.00 |
| 13 | ಜಾಹೀರಾತು ನಿಧಿ | 30,000.00 |
| | **ಒಟ್ಟು ಮೊತ್ತ** | **49,74,954.00** |

ಸದಸ್ಯರಾದ ಚಂದ್ರಶೇಖರ್ ಸದಸ್ಯತ್ವದ ಸಂಖ್ಯೆ:3385 ಪುಟ ಸಂಖ್ಯೆ:30ರಲ್ಲಿ ವಿಂಗಡಣೆಗಳನ್ನು ಶೇಕಡವಾರುಗಳೊಂದಿಗೆ ಮುದ್ರಿಸಿದರೆ ಸದಸ್ಯರಿಗೆ ತಿಳಿಯಲು ಅನುಕೂಲವಾಗುವುದಾಗಿ ಸಲಹೆ ನೀಡಿದರು. ಮುಂದುವರೆದು ಮಾತನಾಡಿ ಶತಮಾನೋತ್ಸವ ನಿಧಿ ಇದ್ದು, ಈಗ ರಜತಮಹೋತ್ಸವ ಆಚರಣೆ ನಂತರ ಸುವರ್ಣ ಮಹೋತ್ಸವ ನಂತರ ಶತಮಾನೋತ್ಸವ ಬರುತ್ತದೆ ಆದುದರಿಂದ ಸುವರ್ಣ ಮಹೋತ್ಸವ ನಿಧಿಗೆ ತೆಗೆದಿಡಲು ತಿಳಿಸಿದರು.

ಅಧ್ಯಕ್ಷರು ಮಾತನಾಡಿ ಸುವರ್ಣ ಮಹೋತ್ಸವದ ನಂತರ ಶತಮಾನೋತ್ಸವ ನಿಧಿಗೆ ತೆಗೆದಿಡುವುದಾಗಿ ತಿಳಿಸಿದರು. ಸದಸ್ಯರಾದ ಎಂ ಆರ್ ಕೇಶವಪ್ರಸಾದ್ ಸ.ಸಂಖ್ಯೆ 802 ಹಾಗೂ ಸದಸ್ಯರಾದ ಕೃಷ್ಣಮೂರ್ತಿ ಡಿ ಎನ್ ರವರು ಲಾಭ ವಿಲೇವಾರಿಯ ಕ್ರಮ ಸಂಖ್ಯೆ 11ರ ನಿಧಿಯ ಹೆಸರು ಬದಲಾವಣೆ ಮಾಡುವ ಬದಲು ಇದರ ಜೊತೆಗೆ ಸುವರ್ಣಮಹೋತ್ಸವ ನಿಧಿಗೆ ಶೇ.50ರಷ್ಟು ಮೊತ್ತವನ್ನು ವರ್ಗಾವಣೆ ಮಾಡಿ ಈ ಎರಡು ನಿಧಿಗಳನ್ನು ಉಳಿಸಿಕೊಳ್ಳಲು ಸಲಹೆ ನೀಡಿದರು ಸಭೆಯಲ್ಲಿ ಇದನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಿದರು. ಶತಮಾನೋತ್ಸವ ನಿಧಿ ಮತ್ತು ಸುವರ್ಣಮಹೋತ್ಸವ ನಿಧಿ ಎಂಬುದಾಗಿ ವಿಂಗಡಣೆ ಮಾಡಿಕೊಳ್ಳುವ್ಯದಾಗಿ ಅಧ್ಯಕ್ಷರು ತಿಳಿಸಿದರು. ಸದಸ್ಯರಾದ ಶ್ರೀ ಕೆ ಎನ್ ಶ್ರೀನಿವಾಸ ಶರ್ಮಾ (ಸದಸ್ಯತ್ವದ ಸಂಖ್ಯೆ 4590)ರವರು ಕರಡು ಸಾಲದ ನಿಧಿಗೆ ಆರು ವರ್ಷದ ಮೇಲ್ಪಟ್ಟು ಸಾಲಗಳನ್ನು ಗಮನಿಸಿ ಕಾಯ್ದಿರಿಸಬೇಕು. ಹಿಂದಿನ ಸಾಲಿಗೂ ಪ್ರಸ್ತುತ ಸಾಲಿಗೂ ಮಾಡಿರುವ ವಿಂಗಡಣೆಯಲ್ಲಿ ಕಡಿಮೆ ಮಾಡಿರುವುದಕ್ಕೆ ಕಾರಣವನ್ನು ವಿಚಾರಿಸಿದರು. ಶ್ರೀ ಎಂ ಡಿ ಗೋಪಿನಾಥ್ ಸಾಲದ ವಸೂಲಾತಿ ಹೆಚ್ಚಿನ ಒತ್ತು ನೀಡುತ್ತಿದ್ದು, ಹಂತಹಂತವಾಗಿ ಎಲ್ಲವನ್ನು ಗಮನಿಸಿ ಶಿಫಾರಸ್ಸು ಮಾಡಲಾಗಿದೆ ಮತ್ತು ಕಟ್ಟಡ ನಿಧಿ-ವಿಜಯನಗರ ಶಾಖೆಯಲ್ಲಿರುವ ನಿವೇಶನಕ್ಕೆ ಇನ್ನು 6 ರಿಂದ 7 ವರ್ಷಗಳಿಗೆ ಗುತ್ತಿಗೆ ಮುಕ್ತಾಯವಾಗಿ ಮುಂದುವರೆಸಿದ್ದಲ್ಲಿ ಮರು ನಿಗದಿಪಡಿಸುವ ವ್ಯವಸ್ಥೆಗೆ ಅನೂಕೂಲವಾಗಿ ಪ್ರತಿ ವರ್ಷ ರೂ.1,12,000/- ಈ ಮೊತ್ತ ಸರಿದೂಗಿಸುತ್ತಿರುವುದು ಸಾಕಾಗುವುದೇ ಇದರ ಬಗ್ಗೆ ಗಮನಹರಿಸಬೇಕು ಎಂದು ತಿಳಿಸಿದರು. ಶ್ರೀ ಎಂ ಡಿ ಗೋಪಿನಾಥ್ ಮಾತನಾಡಿ ಗುತ್ತಿಗೆ ಆಧಾರವನ್ನು ಗಮನದಲ್ಲಿಟ್ಟುಕೊಂಡು ಈ ಮೊತ್ತವನ್ನು ನಿಗದಿಪಡಿಸಲಾಗಿದೆ. ಸಂಸ್ಥೆಯು ಗಳಿಸಿರುವ ಲಾಭವನ್ನು ಯಾವ್ಯಾವುದಕ್ಕೆ ಎಷ್ಟು ತೆಗೆದಿಡಬೇಕು, ಲಾಭಾಂಶ ಎಷ್ಟು ನೀಡಬೇಕು ಎಂಬುದನ್ನು ಗಮನದಲ್ಲಿರಿಸಿಕೊಂಡು ಎಲ್ಲದರ ಹಿತವನ್ನು ಗಮನಿಸಿ ಲಾಭಾಂಶ ವಿತರಣೆ ಮಾಡಲಾಗಿದೆ ಎಂದು ತಿಳಿಸಿದರು. ಶ್ರೀ ಕೆ ಎನ್ ಶ್ರೀನಿವಾಸ ಶರ್ಮಾ ಮುಂದುವರೆದು ಮಾತನಾಡಿ ವಿಜಯನಗರ ಸ್ಕೇಟಿಂಗ್ ವಿಂಕ್‌ನ ಬಾಡಿಗೆ ಮೊತ್ತವನ್ನಾದರೂ ವಿಜಯನಗರ ಭೋಗ್ಯದ ಮೊತ್ತಕ್ಕೆ ತೆಗೆದಿರಸ ಬಹುದಾಗಿತ್ತು, ಇದು ನನ್ನ ಸಲಹೆ, ಮುಂದಿನ ವರ್ಷಕ್ಕಾದರೂ ಇದನ್ನು ಪರಿಗಣಿಸಿ ಎಂದರು. ಶ್ರೀ ಡಿ ಎನ್ ಕೃಷ್ಣಮೂರ್ತಿಯವರು ಮಾತನಾಡಿ ಶಾಖೆಯು ನಷ್ಟದಲ್ಲಿರುವುದರಿಂದ ಅದನ್ನು ಮುಂದುವರೆಸಬೇಕೇ, ಇಲ್ಲದಿದ್ದಲ್ಲಿ ಅದನ್ನು ಲಾಭದಲ್ಲಿ ನಡೆಸಲು ಬೇರೆ ಚಟುವಟಿಕೆ ನಡೆಸಲು ನಿರ್ದೇಶಕ ಮಂಡಲಿ ಸದಸ್ಯರು ಪ್ರಯತ್ನಿಸಬೇಕು ಎಂದು ತಿಳಿಸಿದರು. ಅಧ್ಯಕ್ಷರು ಪ್ರಯತ್ನ ಪಡಲಾಗುತ್ತಿದೆ ಎಂದು ತಿಳಿಸಿದರು.

ಸದಸ್ಯರು ಲಾಭಾಂಶವನ್ನು ಹೆಚ್ಚು ಮಾಡಲು ತಿಳಿಸಿದರು. ಅಧ್ಯಕ್ಷರು ಉತ್ತರಿಸಿ ಶೇಕಡ 11ರಷ್ಟು ಮಾಡುವುದಾಗಿ ತಿಳಿಸಿದರು. ಇತರೇ ನಿಧಿಗಳನ್ನು ಮುಂದಿನ ನಿರ್ದೇಶಕ ಮಂಡಲಿ ಸಭೆಯಲ್ಲಿ ನಿಗದಿಪಡಿಸಿ ಶೇ.11 ಲಾಭಾಂಶವನ್ನು ನೀಡಲಾಗುವುದು ಎಂದು ತಿಳಿಸಿದರು. ಸದಸ್ಯರು ಇದಕ್ಕೆ ಒಪ್ಪಿ ಸರ್ವಾನುಮತದಿಂದ ಅನುಮೋದಿಸಿದರು.

**11. <u>2021-22ನೇ ಸಾಲಿನಲ್ಲಿ ಅಂದಾಜಿಗಿಂತ ಹೆಚ್ಚಾಗಿ ಖರ್ಚಾಗಿರುವ ಮೊತ್ತಕ್ಕೆ ಅನುಮೋದನೆ ನೀಡುವುದು ಮತ್ತು 2022-23ನೇ ಸಾಲಿನ ಆಯ-ವ್ಯಯದ ಅಂದಾಜು ಮಂಜೂರಾತಿ:</u>**

2021-22ನೇ ಸಾಲಿನ ಅಂದಾಜು ಮಂಜೂರಾತಿಗಿಂತ ಹೆಚ್ಚಾಗಿ ಖರ್ಚಾಗಿರುವ ಬಗ್ಗೆ ವಿವರಗಳನ್ನು, ನಿರ್ದೇಶಕರಾದ ಶ್ರೀ ಕೆ ಎನ್ ಅರುಣ್‌ರವರು, ವರದಿ ಪುಸ್ತಕದಲ್ಲಿನ ಪುಟ ಸಂಖ್ಯೆ: 31 ಮತ್ತು 32ರಲ್ಲಿ ನಮೂದಾಗಿರುವ ವಿಷಯವನ್ನು ಮಂಡಿಸಿದರು. 2021-22ನೇ ಸಾಲಿನಲ್ಲಿ ನಿಗದಿಪಡಿಸಿರುವುದಕ್ಕಿಂತ, ಹೆಚ್ಚುವರಿಯಾಗಿ ಖರ್ಚಾಗಿರುವ ಮೊತ್ತಕ್ಕೆ, ಹಾಗೂ 2022-23ನೇ ಸಾಲಿನ ಆಯ-ವ್ಯಯದ ಅಂದಾಜು ಮಂಜೂರಾತಿ ಅನುಮೋದನೆ ನೀಡುವಂತೆ ಕೋರಿ ಸಭೆಗೆ ತಿಳಿಸಿದರು.

ಕೆಳಕಂಡ ವೆಚ್ಚಗಳು ನಿಗದಿಪಡಿಸಿರುವುದಕ್ಕಿಂತ ಹೆಚ್ಚಾಗಿ ಖರ್ಚಾಗಿದ್ದು, ಸರ್ವಸದಸ್ಯರ ಸಭೆಯಲ್ಲಿ ಅನುಮೋದನೆಗೆ ಮಂಡಿಸಿದರು.

| ಕ್ರ ಸಂ | ವಿವರ | ಅಂದಾಜು ಮಂಜೂರಾಗಿದ್ದ ಮೊತ್ತ | ವಾಸ್ತವವಾಗಿ ಖರ್ಚಾಗಿರುವ ಮೊತ್ತ | ಮಂಜೂರಾಗಿರುವುದಕ್ಕಿಂತ ಹೆಚ್ಚಾಗಿ ಖರ್ಚಾಗಿರುವ ಮೊತ್ತ |
|---|---|---|---|---|
| 1 | ನೀರಿನ ಕಂದಾಯ | 10,000-00 | 15,123-00 | 5,123-00 |

| | | | | |
|---|---|---|---|---|
| 2 | ಬ್ಯಾಂಕ್ ಛಾರ್ಜಸ್ | – | 5,715–00 | 5,715–00 |
| 3 | ಚಿನ್ನಾಭರಣ ಮೌಲ್ಯಮಾಪನದ ಯಂತ್ರದ ವಿಲೇವಾರಿ | – | 4,199–00 | 4,199–00 |

1 **ನೀರಿನ ಕಂದಾಯ:**ಸರ್ಕಾರವು ನಿಗದಿಪಡಿಸಿರುವ ನೀರಿನ ಕಂದಾಯದ ಶುಲ್ಕ ಹೆಚ್ಚುವರಿಯಾಗಿ ಖರ್ಚಾಗಿದ್ದು, ಮಹಾಸಭೆಯ ಅನುಮೋದನೆಗೆ.

2 **ಬ್ಯಾಂಕ್ ಛಾರ್ಜಸ್:**ಬ್ಯಾಂಕ್ ಛಾರ್ಜಸ್ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಸಂಘವು ಮಾಡುತ್ತಿರುವ ನಗದು ವ್ಯವಹಾರ ಮತ್ತು ಆರ್ ಟಿ ಜಿ ಎಸ್ ಮಾಡುವ ವ್ಯವಸ್ಥೆಯನ್ನು ಹೊಂದಿದ್ದು, ಇದಕ್ಕೆ ತಗಲುವ ಸೇವಾ ಶುಲ್ಕಗಳು.

3 **ಚಿನ್ನಾಭರಣ ಮೌಲ್ಯಮಾಪನದ ಯಂತ್ರದ ವಿಲೇವಾರಿ:** ಚಿನ್ನಾಭರಣ ಮೌಲ್ಯಮಾಪನದ ಹಳೇ ಯಂತ್ರವನ್ನು ಮಾರಾಟ ಮಾಡಿ ಹೊಸ ಯಂತ್ರವನ್ನು ಖರೀದಿಸಿದಾಗ ಸವಕಳಿ ತೆಗೆದು ವಿಲೇವಾರಿಯಿಂದ ಆದ ನಷ್ಟದ ಬಾಬ್ತು.

ಸದಸ್ಯರಾದ ಶ್ರೀ ಶ್ರೀನಿವಾಸ ಶರ್ಮಾ ಕೆ ಎನ್‌ರವರು ಮಾತನಾಡಿ ಚಿನ್ನಾಭರಣ ಮೌಲ್ಯ ಮಾಪನ ಯಂತ್ರದ ವಿಲೇವಾರಿಗೆ ರೂ.4,199/– ಮೊತ್ತವನ್ನು ಆಯ–ವ್ಯಯ ಪಟ್ಟಿಗೆ ಸೇರಿಸಿರುವ ಅವಶ್ಯಕತೆ ಇಲ್ಲ ಎಂಬುದಾಗಿ ಸಲಹೆ ನೀಡಿದರು.

ಸೂಚನೆ: (ಸದಸ್ಯತ್ವದ ಸಂಖ್ಯೆ:1929) ಜಗದೀಶ, ಮಂಜುನಾಥ (ಸದಸ್ಯತ್ವದ ಸಂಖ್ಯೆ: 5157).

ಅನುಮೋದಕರು: (ಸದಸ್ಯತ್ವದ ಸಂಖ್ಯೆ:3385) ಚಂದ್ರಶೇಖರ್ (ಸದಸ್ಯತ್ವದ ಸಂಖ್ಯೆ:3247) ಆಂಡಾಳ್ ಗೋಪಾಲಸ್ವಾಮಿ, ಡಿ ಎನ್ ಕೃಷ್ಣಮೂರ್ತಿ.

**12. ಸಹಕಾರ ಸಂಘಗಳ ಕಾಯಿದೆ ಕಲಂ 63(2)ರ ರೀತ್ಯ 2021–22ನೇ ಸಾಲಿಗೆ ಸನ್ನದು ಲೆಕ್ಕ ಪರಿಶೋಧಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ಹಾಗೂ ಸಂಭಾವನೆಯನ್ನು ನಿಗದಿಪಡಿಸುವ ಬಗ್ಗೆ:**

ನಿರ್ದೇಶಕರಾದ ಶ್ರೀಮತಿ ಎಸ್ ರಾಜಮ್ಮರವರು ನಮಸ್ಕಾರಗಳನ್ನು ತಿಳಿಸುತ್ತಾ, ಸಹಕಾರ ಸಂಘಗಳ ಕಾಯಿದೆ ಕಲಂ 63(2)ರ ರೀತ್ಯ2021–22ನೇ ಸಾಲಿಗೆ ಲೆಕ್ಕಪರಿಶೋಧನೆ ಮಾಡಿಸಲು ಲೆಕ್ಕಪರಿಶೋಧಕರನ್ನು ನೇಮಿಸಿಕೊಳ್ಳುವ ಬಗ್ಗೆ ಸಭೆಯ ಗಮನಕ್ಕೆ ತಂದರು. ಶ್ರೀ ಡಿ ಎನ್ ಕೃಷ್ಣಮೂರ್ತಿಯವರು ಮಾತನಾಡಿ ಒಬ್ಬರು ಸನ್ನದು ಲೆಕ್ಕಿಗರು ನಿರಂತರವಾಗಿ ಎರಡು ವರ್ಷ ಲೆಕ್ಕಪರಿಶೋಧನೆ ಮಾಡಬಹುದು ಆದುದರಿಂದ ಶ್ರೀ ಕೆ ಎಸ್ ಸದಾಶಿವರರವರೇ ಈ ವರ್ಷ ಮುಂದುವರೆಯಲಿ ಎಂದು ತಿಳಿಸಿದರು. ಸದಸ್ಯರಾದ ಶ್ರೀ ಕೆ ಎನ್ ಶ್ರೀನಿವಾಸ ಶರ್ಮಾರವರು ಸದಸ್ಯತ್ವ ಸಂಖ್ಯೆ 4590 ರವರು ಮಾತನಾಡಿ ಕಾನೂನು ಪ್ರಕಾರ ಏನು ಹೇಳುತ್ತದೆ ಆದರಂತೆ ಅವರು ವರದಿ ನೀಡಲಿ, ಸನ್ನದು ಲೆಕ್ಕಿಗರಿಗೆ ಪಾವತಿ ಮಾಡುವ ಸಂಭಾವನೆಯನ್ನು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿಯಮದ ಮಾರ್ಗಸೂಚಿಯಂತೆ ಪಾವತಿಸಲಾಗುವುದಿಲ್ಲ, ಹಾಗಾಗಿ ಅದರ ಬಗ್ಗೆ ಗಮನಿಸುವಂತೆ ಖಜಾಂಚಿಗಳಿಗೆ ತಿಳಿಸಿದರು. ಖಜಾಂಚಿಯವರು ಅವರ ಮಾತಿಗೆ ಹೌದು ಎಂಬುದಾಗಿ ಸಮ್ಮತಿಯನ್ನು ಸೂಚಿಸಿದರು. ನಂತರ ಶ್ರೀಮತಿ ರಾಜಮ್ಮರವರು ಸನ್ನದು ಲೆಕ್ಕಿಗರಾದ ಶ್ರೀ ಕೆ ಎಸ್ ಸದಾಶಿವ ಅಂಡ್ ಕೋರವರನ್ನು ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಿಕೊಳ್ಳಲು ಹಾಗೂ ಸಂಭಾವನೆಯನ್ನು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿಯಮದ ಮಾರ್ಗಸೂಚಿಯಂತೆ ಪಾವತಿಸಲು ಸರ್ವಸದಸ್ಯರ ಸಭೆಯ ಅನುಮತಿಯನ್ನು ಕೇಳಿದರು.

ಸೂಚಕರು:(ಸದಸ್ಯತ್ವದ ಸಂಖ್ಯೆ: 4590) ಶ್ರೀ ಕೆ ಎನ್ ಶ್ರೀನಿವಾಸ ಶರ್ಮಾ, ರಮೇಶ್ ಕುಮಾರ್ (ಸದಸ್ಯತ್ವದ ಸಂಖ್ಯೆ: 3573)

ಅನುಮೋದಕರು: (ಸದಸ್ಯತ್ವದ ಸಂಖ್ಯೆ: 5629) ಎಂ ಕೆ ಶ್ರೀಕಾಂತ, ಜಗದೀಶ (ಸದಸ್ಯತ್ವದ ಸಂಖ್ಯೆ: 1929)

13. **<u>ಸಹಕಾರ ಸಂಘಗಳ ಕಾಯಿದೆ ಕಲಂ 58(ಇ)ರ ರೀತ್ಯ ರಾಷ್ಟ್ರೀಕೃತ ಹಾಗೂ ಇತರೇ ಬ್ಯಾಂಕುಗಳಲ್ಲಿ ಖಾತೆ ತೆರೆದು ವ್ಯವಹರಿಸಲು ಮತ್ತು ಸಂಘದ ಠೇವಣಾತಿಗಳನ್ನು ಹೂಡಿಕೆ ಮಾಡಲು ಅನುಮೋದನೆ ನೀಡುವುದು:</u>**

ನಿರ್ದೇಶಕರಾದ ಶ್ರೀಎನ್ ಫಣಿರಾಜ್‌ರವರು ಎಲ್ಲರಿಗೂ ನಮಸ್ಕಾರವನ್ನು ತಿಳಿಸುತ್ತಾ ವಿಷಯವನ್ನು ಸಭೆಯಲ್ಲಿ ಮಂಡಿಸಿದರು. ಸಹಕಾರ ಸಂಘಗಳ ಕಾಯಿದೆ ಕಲಂ 58(ಇ)ರ ರೀತ್ಯ ರಾಷ್ಟ್ರೀಕೃತ ಹಾಗೂ ಇತರೇ ಬ್ಯಾಂಕುಗಳಲ್ಲಿ ಖಾತೆ ತೆರೆದು ವ್ಯವಹರಿಸಲು ಮತ್ತು ಸಂಘದ ಹೂಡಿಕೆಯ ವಿವರಗಳನ್ನು ಸಭೆಯ ಗಮನಕ್ಕೆ ತಂದು, ಇದಕ್ಕೆ ಅನುಮೋದನೆ ನೀಡುವಂತೆ ಕೋರಿದರು.

ಸಂಘದ ದಿನನಿತ್ಯದ ವ್ಯವಹಾರದಲ್ಲಿ ಹಣದ ಒಳಹರಿವನ್ನು ಗಮನಿಸಿ ಗುಣಮಟ್ಟದ ಸಾಲದ ವಿತರಣೆ ಮಾಡಿದ ನಂತರ ಹೆಚ್ಚುವರಿ ಹಣವನ್ನು ಸಹಕಾರಿ ಬ್ಯಾಂಕ್‌ಗಳಲ್ಲಿ ಹಾಗೂ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಹೂಡಿಕೆಯಲ್ಲಿ ತೊಡಗಿಸಲು ಅನುಮತಿ ಕೋರಲಾಗಿದೆ.

ಹಾಲಿ ಅನುಮೋದನೆಯಂತೆ ಸಂಘವು ಸಹಕಾರ ಬ್ಯಾಂಕ್ ಮತ್ತು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಚಾಲ್ತಿ ಖಾತೆ ಮತ್ತು ಉಳಿತಾಯ ಖಾತೆ ತೆರೆದು ವ್ಯವಹರಿಸಲಾಗುತ್ತಿದೆ. ಸಂಘದ ಹೆಚ್ಚುವರಿ ಹಣವನ್ನು ನಿಯಮಾನುಸಾರ ಆಗಿಂದ್ದಾಗೆ ಠೇವಣಿಗಳಲ್ಲಿ ತೊಡಗಿಸಲಾಗಿದೆ. ವಿವರ ಈ ಕೆಳಗಿನಂತೆ:

**ದಿನಾಂಕ 31/03/2022ಕ್ಕೆ ಇದ್ದಂತೆ ಬ್ಯಾಂಕ್ ಶಿಲ್ಕು:**

| ಬ್ಯಾಂಕ್ ವಿವರ | ಮೊತ್ತ |
|---|---|
| ಯುಕೋ ಬ್ಯಾಂಕ್ ಚಾಲ್ತಿ ಖಾತ್ತೆ | 17,68,878.34 |
| ಬ್ಯಾಂಕ್ ಆಫ್ ಇಂಡಿಯಾ ಚಾಲ್ತಿ ಖಾತೆ | 7,12,971.03 |
| ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಚಾಲ್ತಿ ಖಾತೆ | 10,30,718.49 |
| ಎಸ್ ಬಿ ಐ ವಿಜಯನಗರ ಶಾಖೆ ಉಳಿತಾಯ ಖಾತೆ | 2,69,949.51 |
| ಜಿ ಸಿ ಬ್ಯಾಂಕ್ ಉಳಿತಾಯ ಖಾತೆ | 88,075.85 |
| **ಒಟ್ಟು ಮೊತ್ತ** | **38,70,593.22** |

**ದಿನಾಂಕ 31/03/2022ಕ್ಕೆ ಇದ್ದಂತೆ ಹೂಡಿಕೆಗಳು**

| SL NO | BANK DETAILS | | AMOUNT |
|---|---|---|---|
| 1 | MDCC BANK LTD., | Reserve Fund | 1,60,89,555.41 |
| 2 | MDCC BANK LTD., | FD | 38,00,000.00 |
| 3 | MDCC BANK LTD., | Share | 1,000.00 |
| 4 | MYSORE MERCHANTS CO OPERATIVE BANK LTD., | FD | 3,05,04,596.00 |
| 5 | GRADUATE'S CO OPERATIVE BANK LTD., | FD | 12,11,742.00 |
| 6 | TUMKUR GRAIN MERCHANTS CO-OPERATIVE BANK LTD., MYSORE MAIN AND KUVEMPUNAGAR BRANCH | FD | 3,16,70,631.94 |
| 7 | UCO BANK | FD | 3,42,55,773.00 |
| 8 | THE NATIONAL CO-OPERATIVE BANK LTD., | FD | 1,39,57,514.00 |
| | **TOTAL** | | **13,14,90,812** |

ಸದಸ್ಯರಾದ ಶ್ರೀ ಕೇಶವಪ್ರಸಾದ ಸದಸ್ಯತ್ವದ ಸಂಖ್ಯೆ 802 ರವರು ಮಾತನಾಡಿ ಪ್ರತಿ ವರ್ಷ ಸಹಕಾರಿ ಬ್ಯಾಂಕ್‌ಗಳಲ್ಲಿ ಹಾಗೂ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಹೂಡಿಕೆಯಲ್ಲಿ ತೊಡಗಿಸಲು ಅನುಮತಿ ಕೇಳುವುದು ಸಭೆಯ ಸಮಯ ವ್ಯರ್ಥ ಇದನ್ನು ಪ್ರತಿ ವರ್ಷ ಪದೇ ಪದೇ ಮಂಡಿಸುವ ಅವಶ್ಯಕತೆ ಇದೆಯಾ ಎಂಬುದಾಗಿ ಪ್ರಶ್ನಿಸಿದರು. ಅಧ್ಯಕ್ಷರು ಮಾತನಾಡಿ ಪ್ರತಿ ವರ್ಷ ಕೇಲವೊಂದು ಮಾರ್ಪಾಡುಗಳಾಗಿರುವ ಕಾರಣದಿಂದಾಗಿ ಸಭೆಯ ಮುಂದೆ ಮಂಡಿಸಿ ಅನುಮತಿ ಕೇಳಬೇಕಾದ ಅವಶ್ಯಕತೆ ಇರುವ ಬಗ್ಗೆ ತಿಳಿಸಿದರು. ನಂತರ ಅಧ್ಯಕ್ಷರು ಸಭೆಯ ಅನುಮೋದನೆಗೆ ಕೇಳಿದರು.

ಸೂಚಕರು:(ಸದಸ್ಯತ್ವದ ಸಂಖ್ಯೆ: 7953) ತನುಜಾ, (ಸದಸ್ಯತ್ವದ ಸಂಖ್ಯೆ:3247) ಆಂಡಾಳ್ ಗೋಪಾಲಸ್ವಾಮಿ
ಅನುಮೋದಕರು: (ಸದಸ್ಯತ್ವದ ಸಂಖ್ಯೆ: 3607) ಸಿ ರಾಕೇಶ್ ದತ್ತ, (ಸದಸ್ಯತ್ವದ ಸಂಖ್ಯೆ: 5629) ಶ್ರೀಕಾಂತ, (ಸದಸ್ಯತ್ವದ ಸಂಖ್ಯೆ: 4083),ಡಿ ಎನ್ ಕೃಷ್ಣಮೂರ್ತಿ, (ಸದಸ್ಯತ್ವದ ಸಂಖ್ಯೆ: 1929) ಜಗದೀಶ್

**14. <u>ಉಪನಿಯಮದ ತಿದ್ದುಪಡಿ:</u>**

ಈ ವಿಷಯವನ್ನು ಸಂಘದ ನಿರ್ದೇಶಕರಾದ ಶ್ರೀ ಕೆ ನಾಗರಾಜ್ ರವರು ಸಭೆಯಲ್ಲಿ ಮಂಡಿಸಿದರು.ಈ ವಿಷಯದ ಬಗ್ಗೆ ಶ್ರೀ ಕೆ ಎನ್ ಶ್ರೀನಿವಾಸ್ ಶರ್ಮರವರು ಮಾತನಾಡಿ ಉಪನಿಯಮದ ಸಂಖ್ಯೆ 208 ಪ್ರಕಾರ 20 ದಿನಗಳ ಮೊದಲು ಸದಸ್ಯರಿಗೆ ನೋಟೀಸನ್ನು ಕಳುಹಿಸಬೇಕು ಆದರೆ ತಾವು 15 ದಿನಗಳ ಮುಂಚೆ ಕಳುಹಿಸಲಾಗಿರುತ್ತದೆ. ಉಪನಿಯಮದ ಪ್ರಕಾರ ಈಗ ಇದನ್ನು ಮಂಡಿಸಲು ಆಗುವುದಿಲ್ಲವೆಂದು ತಿಳಿಸಿದರು. ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಈ ಬಗ್ಗೆ ಇಲಾಖೆಯಲ್ಲಿ ವಿಚಾರಣೆ ಮಾಡಲಾಗಿದೆ. ತಿದ್ದುಪಡಿ ಉಪನಿಯಮದ ಅನುಮೋದನೆಯನ್ನು ಮಹಾಸಭೆಯಲ್ಲಿ ಮಂಡಿಸಬಹುದು ಅನುಮೋದನೆ ಪಡೆಯಬಹುದು ಎಂದು ತಿಳಿಸಿರುತ್ತಾರೆ. ಶ್ರೀ ಕೆ ನಾಗರಾಜ್‌ರವರು ಮಾತನಾಡಿ ಕಾನೂನಿನ ಪ್ರಕಾರ 15 ದಿನಗಳ ಮುಂಚಿತವಾಗಿ ನೋಟೀಸ್ ಕಳುಹಿಸಬೇಕು ಎಂದು ಇರುವುದರಿಂದ ಹಾಗೂ ಅವಕಾಶವಿರುವುದರಿಂದ ಮಹಾಸಭೆಗೆ ಮಂಡಿಸಲಾಗುತ್ತಿದೆ. ಈ ಹಿಂದೆಯೂ 15 ದಿನಗಳ ಮುಂಚೆ ನೋಟೀಸ್ ಕಳುಹಿಸಿ ಅನುಮೋದನೆ ಪಡೆಯಲಾಗಿತ್ತು, ಕಾನೂನಿನಲ್ಲಿ ಬದಲಾವಣೆಯಾಗಿರುವುದನ್ನು ಬೈಲಾದಲ್ಲಿ ಅಳವಡಿಸಿಕೊಳ್ಳಲೇ ಬೇಕಾಗುತ್ತದೆ ಎಂದು ತಿಳಿಸಿದರು. ಶ್ರೀ ಎಂ ಡಿ ಗೋಪಿನಾಥ್ ರವರು ಮಾತನಾಡಿ ಈ ಬಗ್ಗೆ ಇಲಾಖೆಯಲ್ಲಿ ತಾವು ವಿಚಾರಿಸಿದ್ದು, ಪರಿಗಣಿಸಬಹುದಾಗಿರುತ್ತದೆ ಎಂದು ತಿಳಿಸಿದರು. ಶ್ರೀ ಶ್ರೀನಿವಾಸ ಶರ್ಮರವರು ಮಾತನಾಡಿ ನೀವು ಮಾಡುತ್ತಿರುವುದು ಕಾಯಿದೆಗೆ ವಿರುದ್ಧವಾಗಿದೆ, ಇದಕ್ಕೆ ನನ್ನ ಸಂಪೂರ್ಣವಾದ ಅಸಮ್ಮತಿ ಇರುತ್ತದೆ ಎಂದು ತಿಳಿಸಿದರು. ಶ್ರೀ ಕೇಶವ ಪ್ರಸಾದ್‌ರವರು ಮತ್ತು ಶ್ರೀ ವಿ ಎನ್ ಕೃಷ್ಣರವರು ಸಹ ತಾವು ವಿಷಯಸೂಚಿಯಲ್ಲಿಯೇ ತಮ್ಮ ಅಸಮ್ಮತಿ ಸೂಚಿಸಿರುವುದಾಗಿ ತಿಳಿಸಿದರು. ಶ್ರೀ ಕೆ ಎನ್ ಶ್ರೀನಿವಾಸಶರ್ಮರವರು ಮಾತನಾಡಿ ನಾನು ಅಸಮ್ಮತಿ ಸೂಚಿಸಿದ್ದರೂ ಸಹ ಬೈಲಾ ತಿದ್ದುಪಡಿಗೆ ನನ್ನ ಕೆಲವು ಸಲಹೆಗಳಿವೆ ಎಂದರು. ಶ್ರೀ ಕೆ ನಾಗರಾಜರವರು ಮಾತನಾಡಿ ನೀವು ಡಿಸೆಂಟ್ ಸೂಚಿಸಿದ ಮೇಲೆ ನಿಮ್ಮ ಅಭಿಪ್ರಾಯ ಸೂಚಿಸುವಂತಿಲ್ಲ ಎಂದರು. ಉಪಾಧ್ಯಕ್ಷರು ಮಾತನಾಡಿ ನಾವು ಈ ಬಗ್ಗೆ ಇಲಾಖೆಗೆ ಹೋಗಿ ವಿಚಾರಿಸಿ, ಕಾನೂನು ಸಲಹೆ ಪಡೆದು ಕೊಂಡ ನಂತರವೇ 15 ದಿನಗಳ ನೋಟೀಸ್ ಕೊಟ್ಟು ಬೈಲಾ ತಿದ್ದುಪಡಿ ವಿಷಯವನ್ನು ಸಭೆಗೆ ಮಂಡಿಸಬಹುದು ಎಂದು ತಿಳಿದುಕೊಂಡ ನಂತರವೇ ಮಂಡಿಸುತ್ತಿರುವುದು. ಶ್ರೀ ಕೆ ನಾಗರಾಜರವರು ಮಾತನಾಡಿ ಕಾನೂನಿನ ಪ್ರಕಾರ ಬೈಲಾ ತಿದ್ದುಪಡಿ ಮಾಡಲೇ ಬೇಕಾದ್ದರಿಂದ ತಿದ್ದುಪಡಿಗೆ ಇಡಲಾಗಿದೆ ಇದರಲ್ಲಿ ನಮ್ಮ ವೈಯಕ್ತಿಕ ವಿಷಯಕ್ಕೋಸ್ಕರ ಸಭೆಗೆ ಮಂಡಿಸಿಲ್ಲ ಎಂದರು.

ಶ್ರೀ ಚಂದ್ರಶೇಖರ್‌ರವರು ಮಾತನಾಡಿ ನಿಗದಿಪಡಿಸಿದ ಕನಿಷ್ಟ ಷೇರನ್ನು ತೆಗೆದು ಒಂದು ಷೇರು ಪಡೆಯಲು ನಿಗದಿಪಡಿಸಿರುವುದಕ್ಕೆ ಕಾರಣ ಏನು ಎಂದು ಕೇಳಿದರು. ಶ್ರೀ ನಾಗರಾಜ್‌ರವರು ಮಾತನಾಡಿ ನಿಯಮಾನುಸಾರ ಸದಸ್ಯನು ಒಂದು ಷೇರು ಹೊಂದಿರತಕ್ಕದ್ದು ಎಂದು ತಿಳಿಸಿರುವಂತೆ ಕ್ರಮವಿಡಲಾಗಿದೆ. ಚಂದ್ರಶೇಖರ್ ಮಾತನಾಡಿ ಕನಿಷ್ಟ ಷೇರು ತೆಗೆದ ಉದ್ದೇಶವೇನು ಎಂದು ಪ್ರಶ್ನಿಸಿದರು. ನಮ್ಮದು ನಿಯಮಿತ ಸಂಸ್ಥೆಯಾಗಿರುವುದರಿಂದ ಯಾವುದೇ ಸದಸ್ಯನಿಗೂ ಕನಿಷ್ಟ (ಅಧ್ಯಾಯ:3 ಸದಸ್ಯನು ಹೊಂದಿರುವಂತಹ ಷೇರು) ಹೊರೆಯನ್ನು ಹೊರೆಸಬಾರದಾದುದರಿಂದ ಒಂದು ಷೇರು ಪಡೆದು ಸದಸ್ಯತ್ವವನ್ನು ಪಡೆಯುವ ಹಕ್ಕು ಇರುವಂತೆ ಎಲ್ಲಾ ಸದಸ್ಯನಿಗೂ ಅನ್ವಯವಾಗುತ್ತದೆ. ಅಧ್ಯಕ್ಷರು ಮಾತನಾಡಿ ನಾನು ಈ ಮೊದಲೇ 3 ಷೇರು ಹೊಂದಲೇಬೇಕು ಎಂಬುದರ ಬಗ್ಗೆ ನನ್ನ ವಿರೋಧವಿತ್ತು ಕಾನೂನಿನಲ್ಲಿಯೂ ಇದಕ್ಕೆ ಒಬ್ಬ

ಸದಸ್ಯನೂ ಕಾನೂನು ಪ್ರಕಾರ ಒಂದು ಷೇರನ್ನು ಹೊಂದಿರತಕ್ಕದ್ದು ಎಂಬ ನಿಯಮಾನುಸಾರ ಕ್ರಮವಿಡಲಾಗಿದೆ ಎಂದು ತಿಳಿಸಿದರು. ಶ್ರೀ ಚಂದ್ರಶೇಖರ್‌ರವರು ಮಾತನಾಡಿ ಸಾಲ ಮತ್ತು ಮುಂಗಡದ ಮಿತಿ ವ್ಯಾಪಾರದ ಅಭಿವೃದ್ಧಿಗೆ ಎಂದು ಹೇಳಿರುತ್ತೀರಿ ಇದಕ್ಕೆ ನಿಯಮದಲ್ಲಿ ಯಾವುದೇ ಉಲ್ಲೇಖವಿರುವುದಿಲ್ಲವೇ ಎಂದು ಪ್ರಶ್ನಿಸಿದರು. ಶ್ರೀ ನಾಗರಾಜ್‌ರವರು ಉತ್ತರಿಸಿ ನಿಯಮದಲ್ಲಿ ಇದನ್ನು ಉಪನಿಯಮದಲ್ಲಿ ಅಳವಡಿಸುವಂತೆ ತಿಳಿಸಿರುವುದರಿಂದ ತಿದ್ದುಪಡಿಗೆ ಮಂಡಿಸಲಾಗಿದೆ. ಕಾರಣವನ್ನು ಸೂಚಿಸಲಾಗಿದೆ ಎಂದು ತಿಳಿಸಿದರು. ಕೆಲವೊಂದು ಸರ್ಕಾರದಲ್ಲಿ ತಿದ್ದುಪಡಿಗೆ ಸೂಚಿಸಿರುವಂತೆ ಕ್ರಮವಿಡಲಾಗಿದೆ ಎಂದು ತಿಳಿಸಿದರು. ಅಧ್ಯಕ್ಷರು ಮಾತನಾಡಿ ಸಂಘದ ಪ್ರಾರಂಭದಲ್ಲಿ ಒಂದು ಷೇರು ತೆಗೆದುಕೊಂಡರೂ ಸಹ ಅವರು ಸದಸ್ಯರು ಎಂದೇ ಪರಿಗಣಿಸಬೇಕು. ನೀವು ಇಷ್ಟು ಷೇರು ತೆಗೆದುಕೊಳ್ಳಬೇಕು ಎಂದು ಕಡ್ಡಾಯ ಮಾಡುವಂತಿಲ್ಲ ಎಂದರು.

ಶ್ರೀ ಚಂದ್ರಶೇಖರ್‌ರವರು ಮಾತನಾಡಿ ಖಚಾಂಜಿಗಳು ಅಥವಾ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಜಂಟಿಯಾಗಿ ಎಂದು ಸೇರಿಸಬೇಕು ಎಂಬುದರ ಬಗ್ಗೆ ಪ್ರಶ್ನಿಸಿದರು. ಶ್ರೀ ಕೆ ನಾಗರಾಜ್‌ರವರು ಮಾತನಾಡಿ ಖಚಾಂಜಿಗಳು ಎಂಬ ಸ್ಥಾನ ಅವಕಾಶವಿದ್ದು, ಅವರ ಕರ್ತವ್ಯದ ಬಗ್ಗೆ ಉಲ್ಲೇಖವನ್ನು ಈಗ ಹೊಸದಾಗಿ ಸೇರ್ಪಡೆ ಮಾಡಲಾಗಿದೆ. ಅವರು ಈಗಾಗಲೇ ನಿರ್ವಹಣೆ ಮಾಡುತ್ತಿರುತ್ತಾರೆ ಎಂದು ತಿಳಿಸಿದರು. ಶ್ರೀ ಚಂದ್ರಶೇಖರ್‌ರವರು ಮಾತನಾಡಿ ಚಿನ್ನಾಭರಣವನ್ನು ಪರಿಶೀಲನೆ ಹೇಗೆ ಮಾಡುತ್ತಾರೆ ಎಂದು ಪ್ರಶ್ನಿಸಿದರು. ಶ್ರೀ ಕೆ ನಾಗರಾಜ್‌ರವರು ಮಾತನಾಡಿ ಭೌತಿಕವಾಗಿ ಪರಿಶೀಲನೆ ಮಾಡುತ್ತಾರೆ ಎಂದರೆ, ಚಿನ್ನಾಭರಣ ಪ್ಯಾಕೆಟ್‌ಗಳ ಪರಿಶೀಲನೆ ಮಾಡುತ್ತಾರೆ ಹೊರತು ಪ್ಯಾಕೆಟ್‌ಗಳನ್ನು ತೆರೆದು ಪರಿಶೀಲನೆ ಮಾಡುವುದಿಲ್ಲ ಎಂದು ತಿಳಿಸಿದರು.

ಶ್ರೀ ಚಂದ್ರಶೇಖರ್‌ರವರು ಮಾತನಾಡಿ ಸ್ಥಿರಾಧಾರ ಸಾಲದಲ್ಲಿ ನಿವೇಶನದ ಸಾಲವನ್ನು ಹೇಗೆ ವಿತರಿಸಲಾಗುವುದು ಎಂದು ಪ್ರಶ್ನಿಸಿದರು. ನಿವೇಶನದಲ್ಲಿ ಮನೆ ಕಟ್ಟಲು ಹಂತ ಹಂತವಾಗಿ ಬಿಡುಗಡೆ ಮಾಡಲಾಗುವುದು, ಮನೆ ಆಧಾರ ಸಾಲವನ್ನು ಒಂದೇ ಗಂಟಿನಲ್ಲಿ ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿದರು. ಶ್ರೀ ಕೆ ನಾಗರಾಜರವರು ಮಾತನಾಡಿ ಅಡಮಾನ ಮಾಡಿಕೊಂಡು ಕಟ್ಟಡ ನಿರ್ಮಾಣದ ಉದ್ದೇಶಕ್ಕಾಗಿ ನೀಡಲಾಗುವುದು, ಅದನ್ನು ಒಳನಿಯಮಗಳಲ್ಲಿ ಮಾಡಲಾಗಿದೆ ಮತ್ತು ಮೌಲ್ಯಮಾಪಕರು ಸೂಚಿಸಿದ ಮೌಲ್ಯವನ್ನು ಮಾತ್ರವೇ ನೀಡಲಾಗುವುದು ಎಂದು ಉತ್ತರಿಸಿದರು.

ಶ್ರೀ ಚಂದ್ರಶೇಖರ್‌ರವರು ಮಾತನಾಡಿ ನಿಧಿಗಳ ಉಪಯೋಗವನ್ನು ಮಹಾಸಭೆಯ ಅನುಮೋದನೆಯಂತೆ ಹಂಚಬೇಕು ಎಂದು ತಿಳಿಸಿದರು. ಶ್ರೀ ನಾಗರಾಜ್‌ರವರು ಮಾತನಾಡಿ ಹೌದು ಮೊದಲೇ ತಿಳಿಸಲಾಗಿದೆ ಎಂದು ತಿಳಿಸಿದರು. ಶ್ರೀ ಕೃಷ್ಣಮೂರ್ತಿಯವರು ಮಾತನಾಡಿ ಸಿಬ್ಬಂದಿ ಕ್ಷೇಮ ನಿಧಿಯನ್ನು ವಾರ್ಷಿಕ ಸಭೆಯ ಅನುಮೋದನೆಯಂತೆ ಕಾಲಕಾಲಕ್ಕೆ ನಿಗದಿಪಡಿಸಿದಂತೆ ಆಡಳಿತ ಮಂಡಲಿಯ ನಿರ್ಧಾರಪಡಿಸುವಂತೆ ಇರತಕ್ಕದ್ದು ಎಂದು ಇದೆ. ನೀವು ಬೋನಸ್ ಕೊಡುವುದಕ್ಕೆ ಹಿಂದೆ ಮುಂದೆ ನೋಡುತ್ತೀರಿ ಅಂದ ಮೇಲೆ ಅವರ ಅವಶ್ಯಕತೆಗೆ ಸ್ಪಂದಿಸುತ್ತೀರ ಎಂದು ಕೇಳಿದರು. ಶ್ರೀ ಕೆ ನಾಗರಾಜರವರು ಮಾತನಾಡಿ ಮೊತ್ತವು ಸರ್ವಸದಸ್ಯರ ಅನುಮೋದನೆಯಂತೆ ಇರುತ್ತದೆ. ವಾರ್ಷಿಕ ಸಾಮಾನ್ಯ ಸಭೆ ನಡೆಯುವುದು ವರ್ಷಕ್ಕೆ ಒಂದು ಬಾರಿ, ಮಧ್ಯದಲ್ಲಿ ಸಿಬ್ಬಂದಿವರ್ಗದವರಿಗೆ ಅವಶ್ಯಕತೆ ಬಿದ್ದಲ್ಲಿ ನಿರ್ದೇಶಕ ಮಂಡಲಿ ನಿರ್ಧರಿಸಿದಂತೆ ಬಿಡುಗಡೆ ಮಾಡಲಾಗುವುದು ಎಂದು ಅರ್ಥ ಎಂದು ಬಿಡಿಸಿ ಹೇಳಿದರು. ಇದಕ್ಕೆ ಸಭೆಯಲ್ಲಿ ಒಪ್ಪಿಗೆ ಸೂಚಿಸಲಾಯಿತು.

ಶ್ರೀ ಡಿ ಎನ್ ಕೃಷ್ಣಮೂರ್ತಿಯವರು ಸುವರ್ಣಮಹೋತ್ಸವ ನಿಧಿಯ ಜೊತೆಗೆ ಶತಮಾನೋತ್ಸವ ನಿಧಿಯನ್ನೂ ಸೇರಿಸಲು ತಿಳಿಸಿದರು. ಇದಕ್ಕೆ ಒಪ್ಪಿಗೆ ಸೂಚಿಸಲಾಯಿತು.

**ಉಪನಿಯಮದ ತಿದ್ದುಪಡಿ**

| ಹಾಲಿ ಇರುವ ಉಪನಿಯಮಗಳು | ಸೂಚಿಸಿರುವ ತಿದ್ದುಪಡಿಗಳು | ತಿದ್ದುಪಡಿಯಾದ ನಂತರ ಬದಲಾದ ಉಪನಿಯಮಗಳು | ಕಾರಣ |
|---|---|---|---|
| **ಅಧ್ಯಾಯ–2 ಉಪನಿಯಮದ ಸಂಖ್ಯೆ:**<br>4.14 "ಸದಸ್ಯ" (ಮೆಂಬರ್): ಎಂದರೆ, ಸಂಘದ ನೋಂದಣಿಯ ಮೊದಲಿಗೆ ಷೇರು ನೀಡಿದ ವ್ಯಕ್ತಿ ಮತ್ತು ಸಂಘಕ್ಕೆ ನೋಂದಣಿಗಾಗಿ ಸಲ್ಲಿಸಿದ ಅರ್ಜಿಯಲ್ಲಿ ಸಹಿ ಮಾಡಿದ ವ್ಯಕ್ತಿ ಅಥವಾ ನೋಂದಣಿ ಆದ ನಂತರ ಕಾಯಿದೆಯ, ನಿಯಮಗಳ ಮತ್ತು ಉಪನಿಯಮಗಳ ಪ್ರಕಾರ ಸಂಘದ ಕನಿಷ್ಠ ಷೇರನ್ನಾದರೂ ಹೊಂದಿ ಸದಸ್ಯತ್ವ ಪಡೆದ ವ್ಯಕ್ತಿ ಮತ್ತು ಒಬ್ಬ ನಾಮಮಾತ್ರ ಅಥವಾ ಸಹಸದಸ್ಯನನ್ನು ಕೂಡಾ ಒಳಗೊಂಡಿರುತ್ತದೆ.<br>"ಎ" ವರ್ಗ–ಸಾಮಾನ್ಯ ಸದಸ್ಯರು<br>"ಬಿ" ವರ್ಗ-ರಾಜ್ಯ ಸರ್ಕಾರ<br>"ಸಿ"ವರ್ಗ–ಸಂಘದ ಕಾರ್ಯವ್ಯಾಪ್ತಿಯಲ್ಲಿ ನೊಂದಣಿಯಾದ ಸಂಘ ಸಂಸ್ಥೆಗಳು, ಸ್ವಸಹಾಯ ಸಂಘಗಳು, ಮಾರ್ಕೆಟಿಂಗ್ ಕಮಿಟಿ, ಫರ್ಮ್, ಕಂಪನಿ ಮತ್ತು ಸ್ಕೂಲ್, ದೇವಸ್ಥಾನ ಮುಂತಾದವುಗಳು.<br>"ಡಿ" ವರ್ಗ – ಸಹಸದಸ್ಯರು<br>"ಇ" ವರ್ಗ – ನಾಮಾಮಾತ್ರ ಸದಸ್ಯರು.<br>ಇದು (ಎ, ಬಿ, ಸಿ, ಡಿ, ಇ ವರ್ಗದವರು) ಒಳಗೊಂಡಿರುತ್ತದೆ. | **ಅಧ್ಯಾಯ–2 ಉಪನಿಯಮದ ಸಂಖ್ಯೆ:**<br>4.14 "ಸದಸ್ಯ" (ಮೆಂಬರ್): ಎಂದರೆ, ಸಂಘದ ನೋಂದಣಿಯ ಮೊದಲಿಗೆ ಷೇರು ನೀಡಿದ ವ್ಯಕ್ತಿ ಮತ್ತು ಸಂಘಕ್ಕೆ ನೋಂದಣಿಗಾಗಿ ಸಲ್ಲಿಸಿದ ಅರ್ಜಿಯಲ್ಲಿ ಸಹಿ ಮಾಡಿದ ವ್ಯಕ್ತಿ ಅಥವಾ ನೋಂದಣಿ ಆದ ನಂತರ ಕಾಯಿದೆಯ, ನಿಯಮಗಳ ಮತ್ತು ಉಪನಿಯಮಗಳ ಪ್ರಕಾರ ಸಂಘದ ಕನಿಷ್ಠ ಒಂದು ಷೇರನ್ನಾದರೂ ಹೊಂದಿ ಸಾಮಾನ್ಯ ಸದಸ್ಯತ್ವ ಪಡೆದ ವ್ಯಕ್ತಿ ಮತ್ತು ಒಬ್ಬ ನಾಮಮಾತ್ರ ಸದಸ್ಯ ಅಥವಾ ಸಹ ಸದಸ್ಯನನ್ನು ಕೂಡಾ ಒಳಗೊಂಡಿರುತ್ತದೆ.<br>ನಾಮಮಾತ್ರ ಸದಸ್ಯತ್ವವನ್ನು ಸೀಮಿತ ಅವಧಿಗೆ ಮಾತ್ರ ಪಡೆಯುವುದು. ನಿಯಮದಂತೆ ಅವಶ್ಯಕತೆ ಹಾಗೂ ಸೀಮಿತ ಅವಧಿಯ ಮುಕ್ತಾಯದ ನಂತರ ಮೊತ್ತವನ್ನು ಆಪದ್ಧನ ನಿಧಿಗೆ ವರ್ಗಾವಣೆ ಮಾಡಲಾಗುವುದು.<br>ಸಾಮಾನ್ಯ ಸದಸ್ಯರು<br>ಸಹ ಸದಸ್ಯರು<br>ನಾಮಮಾತ್ರ ಸದಸ್ಯರು.<br>ಇದು (ಸಾಮಾನ್ಯ ಸದಸ್ಯರು, ಸಹ ಸದಸ್ಯರು, ನಾಮಮಾತ್ರ ಸದಸ್ಯರು) ಒಳಗೊಂಡಿರುತ್ತದೆ. | **ಅಧ್ಯಾಯ–2 ಉಪನಿಯಮದ ಸಂಖ್ಯೆ:**<br>4.14 "ಸದಸ್ಯ" (ಮೆಂಬರ್): ಎಂದರೆ, ಸಂಘದ ನೋಂದಣಿಯ ಮೊದಲಿಗೆ ಷೇರು ನೀಡಿದ ವ್ಯಕ್ತಿ ಮತ್ತು ಸಂಘಕ್ಕೆ ನೋಂದಣಿಗಾಗಿ ಸಲ್ಲಿಸಿದ ಅರ್ಜಿಯಲ್ಲಿ ಸಹಿ ಮಾಡಿದ ವ್ಯಕ್ತಿ ಅಥವಾ ನೋಂದಣಿ ಆದ ನಂತರ ಕಾಯಿದೆಯ, ನಿಯಮಗಳ ಮತ್ತು ಉಪನಿಯಮಗಳ ಪ್ರಕಾರ ಸಂಘದ ಕನಿಷ್ಠ ಒಂದು ಷೇರನ್ನಾದರೂ ಹೊಂದಿ ಸಾಮಾನ್ಯ ಸದಸ್ಯತ್ವ ಪಡೆದ ವ್ಯಕ್ತಿ ಮತ್ತು ಒಬ್ಬ ನಾಮಮಾತ್ರ ಸದಸ್ಯ ಅಥವಾ ಸಹ ಸದಸ್ಯನನ್ನು ಕೂಡಾ ಒಳಗೊಂಡಿರುತ್ತದೆ.<br>ನಾಮಮಾತ್ರ ಸದಸ್ಯತ್ವವನ್ನು ಸೀಮಿತ ಅವಧಿಗೆ ಮಾತ್ರ ಪಡೆಯುವುದು. ನಿಯಮದಂತೆ ಅವಶ್ಯಕತೆ ಹಾಗೂ ಸೀಮಿತ ಅವಧಿಯ ಮುಕ್ತಾಯದ ನಂತರ ಮೊತ್ತವನ್ನು ಆಪದ್ಧನ ನಿಧಿಗೆ ವರ್ಗಾವಣೆ ಮಾಡಲಾಗುವುದು.<br>ಸಾಮಾನ್ಯ ಸದಸ್ಯರು<br>ಸಹ ಸದಸ್ಯರು<br>ನಾಮಮಾತ್ರ ಸದಸ್ಯರು.<br>ಇದು (ಸಾಮಾನ್ಯ ಸದಸ್ಯರು, ಸಹ ಸದಸ್ಯರು, ನಾಮಮಾತ್ರ ಸದಸ್ಯರು) ಒಳಗೊಂಡಿರುತ್ತದೆ. | ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳ ತಿದ್ದುಪಡಿ ರೀತ್ಯ ಸರ್ವಸದಸ್ಯರ ಸಭೆಯ ಅನುಮೋದನೆಗೆ. |

| | | | |
|---|---|---|---|
| **ಅಧ್ಯಾಯ:4 ನಿಧಿಗಳು: ಉಪನಿಯಮದ ಸಂಖ್ಯೆ:**<br>8. ಸಾಲಗಳು ಮತ್ತು ಠೇವುಗಳ ಮಿತಿ: ಆಡಳಿತ ಮಂಡಲಿಯವರು ಕಾಲಕಾಲಕ್ಕೆ ನಿರ್ಧರಿಸುವ ಬಡ್ಡಿದರ ಮತ್ತು ಸಾಲದ ಗರಿಷ್ಟ ಪರಿಮಿತಿ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ಸಾಲಗಳನ್ನು ಮತ್ತು ಠೇವಣಿಗಳನ್ನು ನಿಗದಿಯಾದ ಅವಧಿಗೆ ಸ್ವೀಕರಿಸಬಹುದು. ಆದರೆ ಹಾಗೆ ಸ್ವೀಕರಿಸಿದ ಸಾಲದ ಒಟ್ಟು ಮೊಬಲಗು ಸಂದಾಯವಾದ ಷೇರುಧನ ಮತ್ತು ಮೀಸಲು ನಿಧಿಯ ಮತ್ತು ಕಟ್ಟಡ ನಿಧಿಯ ಮೊಬಲಗಿನಲ್ಲಿ ಕೂಡಿಬಿದ್ದ ನಷ್ಟಗಳನ್ನು ವಜಾ ಮಾಡಿದ ಮೇಲೆ ಬರುವ ನಿವ್ವಳ ಮೊಬಲಗಿನ 25ರಷ್ಟಕ್ಕೆ ನಿಗದಿಪಡಿಸಿದ ಪರಿಮಿತಿಗೆ ಮೀರಿರಕೂಡದು. | **ಅಧ್ಯಾಯ:4 ನಿಧಿಗಳು: ಉಪನಿಯಮದ ಸಂಖ್ಯೆ:**<br>8. ಸಾಲಗಳು ಮತ್ತು ಠೇವಣಿಗಳ ಮಿತಿ: ಆಡಳಿತ ಮಂಡಲಿಯವರು ಕಾಲಕಾಲಕ್ಕೆ ನಿರ್ಧರಿಸುವ ಬಡ್ಡಿದರ ಮತ್ತು ಸಾಲದ ಗರಿಷ್ಟ ಪರಿಮಿತಿ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ಸಾಲಗಳನ್ನು ಮತ್ತು ಠೇವಣಿಗಳನ್ನು ನಿಗದಿಯಾದ ಅವಧಿಗೆ ಸ್ವೀಕರಿಸಬಹುದು. ಆದರೆ ಹಾಗೆ ಸ್ವೀಕರಿಸಿದ ಸಾಲದ ಮತ್ತು ಠೇವಣಿಗಳ ಒಟ್ಟು ಮೊಬಲಗು ಸಂದಾಯವಾದ ಷೇರುಧನ, ಮೀಸಲು ನಿಧಿ ಮತ್ತು ಕಟ್ಟಡ ನಿಧಿಯ ಮೊಬಲಗಿನಲ್ಲಿ ಕೂಡಿಬಿದ್ದ ನಷ್ಟಗಳನ್ನು ವಜಾ ಮಾಡಿದ ಮೇಲೆ ಬರುವ ನಿವ್ವಳ ಮೊಬಲಗಿನ 20ಪಟ್ಟು ಪರಿಮಿತಿಗೆ ಮೀರಿರಕೂಡದು. | **ಅಧ್ಯಾಯ:4 ನಿಧಿಗಳು: ಉಪನಿಯಮದ ಸಂಖ್ಯೆ:**<br>8. ಸಾಲಗಳು ಮತ್ತು ಠೇವಣಿಗಳ ಮಿತಿ: ಆಡಳಿತ ಮಂಡಲಿಯವರು ಕಾಲಕಾಲಕ್ಕೆ ನಿರ್ಧರಿಸುವ ಬಡ್ಡಿದರ ಮತ್ತು ಸಾಲದ ಗರಿಷ್ಟ ಪರಿಮಿತಿ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ಸಾಲಗಳನ್ನು ಮತ್ತು ಠೇವಣಿಗಳನ್ನು ನಿಗದಿಯಾದ ಅವಧಿಗೆ ಸ್ವೀಕರಿಸಬಹುದು. ಆದರೆ ಹಾಗೆ ಸ್ವೀಕರಿಸಿದ ಸಾಲದ ಮತ್ತು ಠೇವಣಿಗಳ ಒಟ್ಟು ಮೊಬಲಗು ಸಂದಾಯವಾದ ಷೇರುಧನ, ಮೀಸಲು ನಿಧಿ ಮತ್ತು ಕಟ್ಟಡ ನಿಧಿಯ ಮೊಬಲಗಿನಲ್ಲಿ ಕೂಡಿಬಿದ್ದ ನಷ್ಟಗಳನ್ನು ವಜಾ ಮಾಡಿದ ಮೇಲೆ ಬರುವ ನಿವ್ವಳ ಮೊಬಲಗಿನ 20 ಪಟ್ಟು ಪರಿಮಿತಿಗೆ ಮೀರಿರಕೂಡದು. | ಸಂಘದ ವ್ಯವಹಾರದ ಅಭಿವೃದ್ಧಿಗೆ ಆಡಳಿತ ಮಂಡಲಿಯವರ ತೀರ್ಮಾನದಂತೆ ಮತ್ತು ಲೆಕ್ಕಪರಿಶೋಧನಾ ವರದಿಯಲ್ಲಿ ಸೂಚಿಸಿದಂತೆ ಸರ್ವಸದಸ್ಯರ ಸಭೆಯ ಅನುಮೋದನೆಗೆ |
| **ಅಧ್ಯಾಯ:5 ಉಪನಿಯಮದ ಸಂಖ್ಯೆ:**<br>10.**<u>ಸಂಘದ ಷೇರು</u>**: ಸಂಘದ ಸಾಮಾನ್ಯ ಸದಸ್ಯರ ಮತ್ತುಸಹ ಸದಸ್ಯರ ಪ್ರತಿ ಷೇರಿನ ಮುಖ ಬೆಲೆಯು ಒಂದು ಸಾವಿರ ರೂಪಾಯಿ ಇರತಕ್ಕದ್ದು (ರೂ.1,000/-) ಹಾಗೂ ಪ್ರತಿ ಷೇರಿನ ಪೂರ್ತಿ ಮೊಬಲಗನ್ನು ಅರ್ಜಿಯೊಂದಿಗೆ ಒಂದೇ ಇಡಿ ಗಂಟಿನಲ್ಲಿ ಪಾವತಿ ಮಾಡತಕ್ಕದ್ದು.<br><br>11.**<u>ಷೇರುಗಳಿಗಾಗಿ ಅರ್ಜಿ :</u>** ಷೇರುಗಳಿಗೆ ಅರ್ಜಿಯನ್ನು ಲಿಖಿತ ಮೂಲಕ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ಸಲ್ಲಿಸತಕ್ಕದ್ದು. ಅಂತಹ ಅರ್ಜಿಯ ಸಹಿತ ಷೇರಿನ ಪೂರ್ಣ ಮೌಲ್ಯದೊಂದಿಗೆ ಷೇರು ಶುಲ್ಕ ಪ್ರತಿ ಷೇರಿಗೆ ರೂ.100-00ಗಳಂತೆ, ಪ್ರವೇಶ ಧನ ರೂ.100-00ರಂತೆ, ಮುದ್ರಣ ಮತ್ತು ಲೇಖನಿ ರೂ.50-00ರಂತೆ, ಹಾಗೂ ಸಾಂಧರ್ಬಿಕ ವೆಚ್ಚ(ಇನ್ಸಿಡೆಂಟಲ್ ಛಾರ್ಜ್‌ಸ್) ರೂ.50-00 ಗಳಂತೆ. | **ಅಧ್ಯಾಯ:5 ಉಪನಿಯಮದ ಸಂಖ್ಯೆ:**<br>10.**<u>ಸಂಘದ ಷೇರು</u>**: ಸಂಘದ ಸಾಮಾನ್ಯ ಸದಸ್ಯರ ಮತ್ತು ಸಹ ಸದಸ್ಯರ ಪ್ರತಿ ಷೇರಿನ ಮುಖ ಬೆಲೆಯು ಒಂದು ಸಾವಿರ ರೂಪಾಯಿ ಇರತಕ್ಕದ್ದು (ರೂ.1,000/-) ಹಾಗೂ ಮೊಬಲಗನ್ನು ಷೇರು ಅರ್ಜಿ ನಿರ್ದೇಶಕ ಮಂಡಲಿಯಲ್ಲಿ ಅನುಮೋದನೆಗೊಂಡ ನಂತರ ಒಂದೇ ಇಡಿ ಗಂಟಿನಲ್ಲಿ ಪಾವತಿ ಮಾಡತಕ್ಕದ್ದು.<br><br>11.**<u>ಷೇರುಗಳಿಗಾಗಿ ಅರ್ಜಿ :</u>** ಸಾಮಾನ್ಯ ಸದಸ್ಯತ್ವ, ಸಹ ಸದಸ್ಯತ್ವಕ್ಕೆ ನಿಗದಿಪಡಿಸಿದ ಷೇರು ಅರ್ಜಿಯನ್ನು ಲಿಖಿತ ಮೂಲಕ ಸಂಘದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗೆ ಸಲ್ಲಿಸತಕ್ಕದ್ದು. ನಿರ್ದೇಶಕ ಮಂಡಲಿ ಸಭೆಯಲ್ಲಿ ಅನುಮೋದನೆಗೊಂಡ ಅಂತಹ ಅರ್ಜಿಯ ಸಹಿತ ಒಂದು ಷೇರಿನ ಪೂರ್ಣ ಮೌಲ್ಯ ರೂ. 1,000/-ಗಳೊಂದಿಗೆ ಷೇರು ಶುಲ್ಕ ಪ್ರತಿ ಷೇರಿಗೆ ರೂ.100-00ಗಳಂತೆ, ಪ್ರವೇಶ | **ಅಧ್ಯಾಯ:5 ಉಪನಿಯಮದ ಸಂಖ್ಯೆ:**<br>10.**<u>ಸಂಘದ ಷೇರು</u>**: ಸಂಘದ ಸಾಮಾನ್ಯ ಸದಸ್ಯರ ಮತ್ತು ಸಹ ಸದಸ್ಯರ ಪ್ರತಿ ಷೇರಿನ ಮುಖ ಬೆಲೆಯು ಒಂದು ಸಾವಿರ ರೂಪಾಯಿ ಇರತಕ್ಕದ್ದು (ರೂ.1,000/-) ಹಾಗೂ ಮೊಬಲಗನ್ನು ಷೇರು ಅರ್ಜಿ ನಿರ್ದೇಶಕ ಮಂಡಲಿಯಲ್ಲಿ ಅನುಮೋದನೆಗೊಂಡ ನಂತರ ಒಂದೇ ಇಡಿ ಗಂಟಿನಲ್ಲಿ ಪಾವತಿ ಮಾಡತಕ್ಕದ್ದು.<br><br>11.**<u>ಷೇರುಗಳಿಗಾಗಿ ಅರ್ಜಿ :</u>** ಸಾಮಾನ್ಯ ಸದಸ್ಯತ್ವ, ಸಹಸದಸ್ಯತ್ವಕ್ಕೆ ನಿಗದಿಪಡಿಸಿದ ಷೇರು ಅರ್ಜಿಯನ್ನು ಲಿಖಿತ ಮೂಲಕ ಸಂಘದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗೆ ಸಲ್ಲಿಸತಕ್ಕದ್ದು. ನಿರ್ದೇಶಕ ಮಂಡಲಿ ಸಭೆಯಲ್ಲಿ ಅನುಮೋದನೆಗೊಂಡ ಅಂತಹ ಅರ್ಜಿಯ ಸಹಿತ ಒಂದು ಷೇರಿನ ಪೂರ್ಣ ಮೌಲ್ಯ ರೂ. 1,000/-ಗಳೊಂದಿಗೆ ಷೇರು ಶುಲ್ಕ ಪ್ರತಿ ಷೇರಿಗೆ ರೂ.100-00ಗಳಂತೆ, ಪ್ರವೇಶ ಧನ ರೂ.100-00, ಮುದ್ರಣ | ಲೆಕ್ಕಪರಿಶೋಧನಾ ವರದಿಯಲ್ಲಿ ಗಮನಿಸಿ ಸೂಚಿಸಿರುವ ರೀತ್ಯ ಪದಗಳ ಅರ್ಥಗಳನ್ನು ಸರಿಪಡಿಸಿ, ಸಂಘದ ವ್ಯವಹಾರದ ಅನುಕೂಲಕ್ಕಾಗಿ ಆಡಳಿತ ಮಂಡಲಿಯಲ್ಲಿ ತೀರ್ಮಾನಿಸಿದಂತೆ ಸರ್ವಸದಸ್ಯರ ಸಭೆಯ ಅನುಮೋದನೆಗೆ |

| | | | |
|---|---|---|---|
| “ಎ” ವರ್ಗದವರು (ಸಾಮಾನ್ಯ ಸದಸ್ಯರು) ಕನಿಷ್ಟ 3 ಷೇರುಗಳನ್ನು ಪಡೆಯತಕ್ಕದ್ದು<br>“ಸಿ”ವರ್ಗದವರು ( ಸಂಘ ಸಂಸ್ಥೆಗಳು) ಕೇವಲ ಐದು ಷೇರುಗಳನ್ನು ಮಾತ್ರ ಹೊಂದಿರತಕ್ಕದ್ದು. ಪಡೆಯತಕ್ಕದ್ದು<br>“ಡಿ” ವರ್ಗದವರು (ಸಹ ಸದಸ್ಯರು) ಕನಿಷ್ಟ 1 ಷೇರುಗಳನ್ನು ಪಡೆಯತಕ್ಕದ್ದು.<br>ಈ ಷೇರು ಅರ್ಜಿಗಳನ್ನು ಆಡಳಿತ ಮಂಡಲಿಯು ಎರಡು ತಿಂಗಳೊಳಗೆ ವಿಲೇವಾರಿ ಮಾಡತಕ್ಕದ್ದು.<br>ಮೇಲಿನ ವರ್ಗದ ಸದಸ್ಯರುಗಳು ಬೈಲಾತಿದ್ದುಪಡಿಯಾಗಿ 6 ತಿಂಗಳ ಒಳಗಾಗಿ ಕನಿಷ್ಟ ಷೇರು ಮೊತ್ತವನ್ನು ಪಡೆಯತಕ್ಕದ್ದು. ತಪ್ಪಿದ್ದಲ್ಲಿ ಸದರಿ ಖಾತೆಯಿಂದ ಷೇರು ಮೊತ್ತವನ್ನು ಅಮಾನತ್ತು ಖಾತೆಗೆ ವರ್ಗಾಯಿಸಲಾಗುವುದು ಅಂತಹ ಖಾತೆದಾರರು ಲಿಖಿತ ಮನವಿ ಸಲ್ಲಿಸಿದ ನಂತರ ಪುನ: ಸದಸ್ಯತ್ವವನ್ನು ನೀಡುವಲ್ಲಿ ನಿರ್ದೇಶಕ ಮಂಡಲಿ ಸಭೆಯ ತೀರ್ಮಾನವೇ ಅಂತಿಮವಾಗಿರುತ್ತದೆ.<br>“ಇ” ವರ್ಗದವರು (ನಾಮಾಮಾತ್ರ ಸದಸ್ಯರು) ಕೇವಲ ಒಂದು ಷೇರುಗಳನ್ನು ಮಾತ್ರ ಪಡೆಯತಕ್ಕದ್ದು. | ಧನ ರೂ.100–00, ಮುದ್ರಣ ಮತ್ತು ಲೇಖನಿ ರೂ.100–00, ಸಾಂಧರ್ಬಿಕ ವೆಚ್ಚ(ಇನ್ಸಿಡೆಂಟಲ್ ಛಾರ್ಜಸ್) ರೂ.100–00 ಗಳಂತೆ ಮತ್ತು ಇದಕ್ಕೆ ತಗಲುವ ಶಾಸನಬದ್ಧವಾದ ಜಿಎಸ್‌ಟಿ ಮೊತ್ತ ಹಾಗೂ ಸಂಘದ ಕಟ್ಟಡ ಅಭಿವೃದ್ಧಿಗಾಗಿ ರೂ.300/–ರಂತೆ ಅಗಸ್ತ್ಯ ಮೂಲ ಸೌಕರ್ಯ ಅಭಿವೃದ್ಧಿ ಖಾತೆಗೆ ಮೊತ್ತ ಸಂಗ್ರಹಿಸಲಾಗುವುದು.<br>ಮೇಲಿನ ವರ್ಗದ ಸದಸ್ಯರುಗಳು 6 ತಿಂಗಳ ಒಳಗಾಗಿ ಷೇರು ಮೊತ್ತವನ್ನು ಪಾವತಿಸಿ ಸದಸ್ಯತ್ವವನ್ನು ಪಡೆಯತಕ್ಕದ್ದು.<br>ಷೇರು ಅಮಾನತ್ತಿನಲ್ಲಿ ಇರುವ ಸದಸ್ಯರುಗಳಿಗೆ ಸಂಘವು ಒದಗಿಸುವ ಸಾಲ, ಠೇವಣಿ ಹಾಗೂ ಇನ್ನಿತರ ಸೌಲಭ್ಯಗಳನ್ನು ಪಡೆಯಲು, ಲಾಭಾಂಶ ಪಡೆಯಲು, ಮತ ಚಲಾಯಿಸಲು ಮತ್ತು ಸರ್ವ ಸದಸ್ಯರ ಸಭೆಗೆ ಹಾಜರಾಗಲು ಅವಕಾಶವಿರುವುದಿಲ್ಲ.<br>ಷೇರು ಅಮಾನತ್ತಿನಲ್ಲಿರುವ ಖಾತೆದಾರರು ಲಿಖಿತ ಮನವಿ ಸಲ್ಲಿಸಿದ ನಂತರ ಪುನ: ಸದಸ್ಯತ್ವವನ್ನು ನೀಡುವಲ್ಲಿ ನಿರ್ದೇಶಕ ಮಂಡಲಿ ಸಭೆಯ ತೀರ್ಮಾನವೇ ಅಂತಿಮವಾಗಿರುತ್ತದೆ.<br>ನಾಮಾಮಾತ್ರ ಸದಸ್ಯರು ಸದಸ್ಯತ್ವ ಪಡೆಯುವುದಕ್ಕಾಗಿ ರೂ.200/–ಗಳನ್ನು ಮಾತ್ರ ಪಾವತಿಸತಕ್ಕದ್ದು. | ಮತ್ತು ಲೇಖನಿ ರೂ.100–00, ಸಾಂಧರ್ಬಿಕ ವೆಚ್ಚ(ಇನ್ಸಿಡೆಂಟಲ್ ಛಾರ್ಜಸ್) ರೂ.100–00 ಗಳಂತೆ ಮತ್ತು ಇದಕ್ಕೆ ತಗಲುವ ಶಾಸನಬದ್ಧವಾದ ಜಿಎಸ್‌ಟಿ ಮೊತ್ತ ಹಾಗೂ ಸಂಘದ ಕಟ್ಟಡ ಅಭಿವೃದ್ಧಿಗಾಗಿ ರೂ.300/–ರಂತೆ ಅಗಸ್ತ್ಯ ಮೂಲ ಸೌಕರ್ಯ ಅಭಿವೃದ್ಧಿ ಖಾತೆಗೆ ಮೊತ್ತ ಸಂಗ್ರಹಿಸಲಾಗುವುದು.<br>ಮೇಲಿನ ವರ್ಗದ ಸದಸ್ಯರುಗಳು 6 ತಿಂಗಳ ಒಳಗಾಗಿ ಷೇರು ಮೊತ್ತವನ್ನು ಪಾವತಿಸಿ ಸದಸ್ಯತ್ವವನ್ನು ಪಡೆಯತಕ್ಕದ್ದು.<br>ಷೇರು ಅಮಾನತ್ತಿನಲ್ಲಿ ಇರುವ ಸದಸ್ಯರುಗಳಿಗೆ ಸಂಘವು ಒದಗಿಸುವ ಸಾಲ, ಠೇವಣಿ ಹಾಗೂ ಇನ್ನಿತರ ಸೌಲಭ್ಯಗಳನ್ನು ಪಡೆಯಲು, ಲಾಭಾಂಶ ಪಡೆಯಲು, ಮತ ಚಲಾಯಿಸಲು ಮತ್ತು ಸರ್ವ ಸದಸ್ಯರ ಸಭೆಗೆ ಹಾಜರಾಗಲು ಅವಕಾಶವಿರುವುದಿಲ್ಲ.<br>ಷೇರು ಅಮಾನತ್ತಿನಲ್ಲಿರುವ ಖಾತೆದಾರರು ಲಿಖಿತ ಮನವಿ ಸಲ್ಲಿಸಿದ ನಂತರ ಪುನ: ಸದಸ್ಯತ್ವವನ್ನು ನೀಡುವಲ್ಲಿ ನಿರ್ದೇಶಕ ಮಂಡಲಿ ಸಭೆಯ ತೀರ್ಮಾನವೇ ಅಂತಿಮವಾಗಿರುತ್ತದೆ.<br>ನಾಮಾಮಾತ್ರ ಸದಸ್ಯರು ಸದಸ್ಯತ್ವ ಪಡೆಯುವುದಕ್ಕಾಗಿ ರೂ.200/–ಗಳನ್ನು ಮಾತ್ರ ಪಾವತಿಸತಕ್ಕದ್ದು. | |

| | | | |
|---|---|---|---|
| **ಅಧ್ಯಾಯ:6 ಉಪನಿಯಮದ ಸಂಖ್ಯೆ:26**<br>ಮತದಾನದ ಹಕ್ಕು ಕಳೆದುಕೊಳ್ಳುವ ಬಗ್ಗೆ: ಸಹಕಾರ ಸಂಘಗಳ ನಿಯಮ 5(1) (ಎಸ್) ಮತ್ತು (ಟಿ) ರಂತೆ ಪ್ರತಿಯೊಬ್ಬ ಸದಸ್ಯ ಈ ಕೆಳಕಂಡ ಜವಾಬ್ದಾರಿಯನ್ನು ನಿರ್ವಹಿಸದಿದ್ದರೆ ಮೂರು (3) ವರ್ಷಗಳವರೆಗೆ ಮತದಾನದ ಹಕ್ಕನ್ನು ಕಳೆದುಕೊಳ್ಳತಕ್ಕದ್ದು.<br>ಎ) ಕಳೆದ ಐದು (5) ವಾರ್ಷಿಕ ಸಾಮಾನ್ಯ ಸಭೆಗಳಲ್ಲಿ ಮೂರು (3) ಸಭೆಗಳಲ್ಲಾದರೂ ಹಾಜರಿರದಿದ್ದರೆ.<br>ಬಿ) ಸಂಘ ದೊರಕಿಸುವ ಕನಿಷ್ಟ ಸೇವೆಯನ್ನು ಅಥವಾ ಸೌಲಭ್ಯವನ್ನು ಪ್ರತಿ ವರ್ಷ ಬಳಸಿಕೊಳ್ಳದಿದ್ದರೆ.<br>ಸೂಚನೆ:ಸಂಘದಲ್ಲಿ ಇರುವ ವಿವಿಧ ಸಾಲ ಸೌಲಭ್ಯವನ್ನು ಪಡೆಯುವುದರ ಮೂಲಕ ಠೇವಣಿ ರೂಪದಲ್ಲಿ ಇರಿಸದಿದ್ದರೆ ಅಥವಾ ಸಂಚಿತ ಠೇವಣಿ ಹಾಗೂ ಉಳಿತಾಯ ಖಾತೆ ತೆರೆದು ವ್ಯವಹರಿಸತಕ್ಕದ್ದು. | **ಅಧ್ಯಾಯ:6 ಉಪನಿಯಮದ ಸಂಖ್ಯೆ:26**<br>ಮತದಾನದ ಹಕ್ಕು ಕಳೆದುಕೊಳ್ಳುವ ಬಗ್ಗೆ:<br>ಸಹಕಾರ ಸಂಘಗಳ ನಿಯಮ 5(1) (ಎಸ್) ಮತ್ತು (ಟಿ) ರಂತೆ ಪ್ರತಿಯೊಬ್ಬ ಸದಸ್ಯ ಈ ಕೆಳಕಂಡ ಜವಾಬ್ದಾರಿಯನ್ನು ನಿರ್ವಹಿಸದಿದ್ದರೆ ಒಂದು (1) ವರ್ಷದ ಅವಧಿಗೆ ಮತದಾನದ ಹಕ್ಕನ್ನು ಕಳೆದುಕೊಳ್ಳತಕ್ಕದ್ದು.<br>ಎ)ಕಳೆದ ಐದು (5) ವಾರ್ಷಿಕ ಸಾಮಾನ್ಯ ಸಭೆಗಳಲ್ಲಿ ಯಾವುದೇ ಎರಡು (2) ಸಭೆಗಳಲ್ಲಾದರೂ ಹಾಜರಾಗಲು ವಿಫಲರಾದರೆ,<br>ಬಿ) ಸಂಘ ನೀಡುತ್ತಿರುವ ಕನಿಷ್ಟ ಸೇವೆಯನ್ನು ಅಥವಾ ಸೌಲಭ್ಯವನ್ನು ಯಾವುದಾದರೂ ಎರಡು(2) ವರ್ಷ ಬಳಸಿಕೊಳ್ಳದಿದ್ದರೆ,<br>ಸಿ) ಸಂಘದಲ್ಲಿ ಸಾಲ ಪಡೆದು ಸುಸ್ತಿದಾರರಾದ ಸದಸ್ಯರಿಗೆ<br>**<u>ಸೂಚನೆ:</u>** ಈ ಮೇಲ್ಕಂಡ ಉದ್ದೇಶಗಳಿಗೆ ಕನಿಷ್ಟ ಸೇವೆ/ಸೌಲಭ್ಯ ಎಂದರೆ ಸಂಘದಲ್ಲಿ ಇರುವ ವಿವಿಧ ಸಾಲ ಸೌಲಭ್ಯವನ್ನು ಪಡೆಯುವುದರ ಮೂಲಕ ಠೇವಣಿ ರೂಪದಲ್ಲಿ ಕನಿಷ್ಟ ಮೊತ್ತ ರೂ.1,000/- 12 ತಿಂಗಳ ಸೀಮಿತ ಅವಧಿಗೆ ಇರಿಸುವುದು ಅಥವಾ ಸಂಚಿತ ಠೇವಣಿ ಹಾಗೂ ಉಳಿತಾಯ ಖಾತೆ ತೆರೆದು ಮಾಹೆಯಾನ ವ್ಯವಹರಿಸುವುದು. | **ಅಧ್ಯಾಯ:6 ಉಪನಿಯಮದ ಸಂಖ್ಯೆ:26**<br>ಮತದಾನದ ಹಕ್ಕು ಕಳೆದುಕೊಳ್ಳುವ ಬಗ್ಗೆ:<br>ಸಹಕಾರ ಸಂಘಗಳ ನಿಯಮ 5(1) (ಎಸ್) ಮತ್ತು (ಟಿ) ರಂತೆ ಪ್ರತಿಯೊಬ್ಬ ಸದಸ್ಯ ಈ ಕೆಳಕಂಡ ಜವಾಬ್ದಾರಿಯನ್ನು ನಿರ್ವಹಿಸದಿದ್ದರೆ ಒಂದು (1) ವರ್ಷದ ಅವಧಿಗೆ ಮತದಾನದ ಹಕ್ಕನ್ನು ಕಳೆದುಕೊಳ್ಳತಕ್ಕದ್ದು.<br>ಎ)ಕಳೆದ ಐದು (5) ವಾರ್ಷಿಕ ಸಾಮಾನ್ಯ ಸಭೆಗಳಲ್ಲಿ ಯಾವುದೇ ಎರಡು (2) ಸಭೆಗಳಲ್ಲಾದರೂ ಹಾಜರಾಗಲು ವಿಫಲರಾದರೆ,<br>ಬಿ) ಸಂಘ ನೀಡುತ್ತಿರುವ ಕನಿಷ್ಟ ಸೇವೆಯನ್ನು ಅಥವಾ ಸೌಲಭ್ಯವನ್ನು ಯಾವುದಾದರೂ ಎರಡು(2) ವರ್ಷ ಬಳಸಿಕೊಳ್ಳದಿದ್ದರೆ,<br>ಸಿ) ಸಂಘದಲ್ಲಿ ಸಾಲ ಪಡೆದು ಸುಸ್ತಿದಾರರಾದ ಸದಸ್ಯರಿಗೆ<br>**<u>ಸೂಚನೆ:</u>** ಈ ಮೇಲ್ಕಂಡ ಉದ್ದೇಶಗಳಿಗೆ ಕನಿಷ್ಟ ಸೇವೆ/ಸೌಲಭ್ಯ ಎಂದರೆ ಸಂಘದಲ್ಲಿ ಇರುವ ವಿವಿಧ ಸಾಲ ಸೌಲಭ್ಯವನ್ನು ಪಡೆಯುವುದರ ಮೂಲಕ ಠೇವಣಿ ರೂಪದಲ್ಲಿ ಕನಿಷ್ಟ ಮೊತ್ತ ರೂ.1,000/- 12 ತಿಂಗಳ ಸೀಮಿತ ಅವಧಿಗೆ ಇರಿಸುವುದು ಅಥವಾ ಸಂಚಿತ ಠೇವಣಿ ಹಾಗೂ ಉಳಿತಾಯ ಖಾತೆ ತೆರೆದು ಮಾಹೆಯಾನ ವ್ಯವಹರಿಸುವುದು. | ಸಹಕಾರ ಸಂಘಗಳ ಕಾಯ್ದೆ ಹಾಗೂ ನಿಯಮ 27(ಎ)(1), (ಬಿ)(2), (ಬಿ)(3), 20(ಎ)(5)ರಂತೆ ಸರ್ವಸದಸ್ಯರ ಸಭೆಯ ಅನುಮೋದನೆಗೆ |

| | | | |
|---|---|---|---|
| **ಅಧ್ಯಾಯ 9: ಉಪನಿಯಮದ ಸಂಖ್ಯೆ:43.3**<br>ಉಪನಿಯಮದ ಸಂಖ್ಯೆ:43.4(ಉ) ಹಾಗೂ ಉಪನಿಯಮದ ಸಂಖ್ಯೆ:43.4(ಊ)<br>43.3 ಸುಸ್ತಿದಾರ ಸದಸ್ಯರಿಗೆ ಮತ ನೀಡುವ ಹಕ್ಕು ಇರುವುದಿಲ್ಲ. ಸರ್ವ ಸದಸ್ಯರ ಸಭೆಯ ಚುನಾವಣೆಯ ದಿನಾಂಕದಿಂದ ಕನಿಷ್ಟ 45 ದಿನಗಳ ಮುಂಚೆ ಸಂಘಕ್ಕೆ ಬರಬೇಕಿರುವ ಯಾವುದೇ ತರಹದ ಸುಸ್ತಿಬಾಕಿಯನ್ನು/ಇನ್ನಾವುದೇ ಬಾಕಿಯನ್ನು ತೀರುವಳಿ ಮಾಡಲು ನೋಟೀಸ್ ಕೊಟ್ಟು ಅಂತಹ ಸದಸ್ಯರು ಸಭಾ/ಚುನಾವಣಾ ದಿನಾಂಕದಿಂದ ಕನಿಷ್ಟ 15 ದಿನಗಳಿಗೆ ಮುಂಚಿತವಾಗಿ ಅಂತಹ ಬಾಕಿಯನ್ನು ಪಾವತಿ ಮಾಡಲು ತಪ್ಪಿದಲ್ಲಿ ಅಂತಹ ಬಾಕಿದಾರನು ಸುಸ್ತಿದಾರರೆಂದು ಪರಿಗಣಿಸತಕ್ಕದ್ದು ಮತ್ತು ಅವರಿಗೆ ಮತ ಚಲಾಯಿಸಲು ಹಕ್ಕು ಇರುವುದಿಲ್ಲ.<br>43.4(ಉ) ಕಳೆದ ಐದು ಸಾಮಾನ್ಯ ಸಭೆಗಳ ಪೈಕಿ ಮೂರು ಸಾಮಾನ್ಯ ಸಭೆಗಳಿಗೆ ಹಾಜರಾಗದೇ ತಪ್ಪುವ ಸದಸ್ಯನಿಗೆ.<br>(ಊ) ಮೂರು ನಿರಂತರ ಸಹಕಾರ ವರ್ಷಗಳಿಗೆ ಸಂಘದ ಉಪವಿಧಿಗಳಲ್ಲಿ ಪ್ರತಿವರ್ಷದಲ್ಲಿ ಒಬ್ಬ ಸದಸ್ಯನು ಬಳಸಿಕೊಳ್ಳಲು ನಿರ್ಧಿಷ್ಟಪಡಿಸಿದ ಕನಿಷ್ಟ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದ ಒಬ್ಬ ಸದಸ್ಯ. | **ಅಧ್ಯಾಯ 9: ಉಪನಿಯಮದ ಸಂಖ್ಯೆ:43.3**<br>ಉಪನಿಯಮದ ಸಂಖ್ಯೆ:43.4(ಉ) ಹಾಗೂ ಉಪನಿಯಮದ ಸಂಖ್ಯೆ:43.4(ಊ)<br>43.3 ಸುಸ್ತಿದಾರ ಸದಸ್ಯರಿಗೆ ಮತ ಚಲಾಯಿಸುವ ಹಕ್ಕು ಇರುವುದಿಲ್ಲ. ಸರ್ವ ಸದಸ್ಯರ ಸಭೆಯ/ಚುನಾವಣೆಯ ದಿನಾಂಕದಿಂದ ಕನಿಷ್ಟ 45 ದಿನಗಳ ಮುಂಚೆ ಸಂಘಕ್ಕೆ ಬರಬೇಕಿರುವ ಯಾವುದೇ ತರಹದ ಸುಸ್ತಿಬಾಕಿಯನ್ನು /ಇನ್ನಾವುದೇ ಬಾಕಿಯನ್ನು ತೀರುವಳಿ ಮಾಡಲು ನೋಟೀಸ್ ಕೊಟ್ಟು ಅಂತಹ ಸದಸ್ಯರು ಸಭೆ/ಚುನಾವಣೆ ದಿನಾಂಕದಿಂದ ಕನಿಷ್ಟ 21 ದಿನಗಳಿಗೆ ಮುಂಚಿತವಾಗಿ ಅಂತಹ ಬಾಕಿಯನ್ನು ಪಾವತಿ ಮಾಡಲು ತಪ್ಪಿದಲ್ಲಿ ಅಂತಹ ಬಾಕಿದಾರನು ಸುಸ್ತಿದಾರರೆಂದು ಪರಿಗಣಿಸತಕ್ಕದ್ದು ಮತ್ತು ಅವರಿಗೆ ಮತ ಚಲಾಯಿಸಲು ಹಕ್ಕು ಇರುವುದಿಲ್ಲ.<br>43.4(ಉ) ಕಳೆದ ಐದು ಸಾಮಾನ್ಯ ಸಭೆಗಳ ಪೈಕಿ ಯಾವುದೇ ಎರಡು ಸಾಮಾನ್ಯ ಸಭೆಗಳಿಗೆ ಹಾಜರಾಗದೇ ಇರುವ ಸದಸ್ಯನಿಗೆ.<br>(ಊ) ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು(2) ಸಹಕಾರ ವರ್ಷದಲ್ಲಿ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಸಂಘ ದೊರಕಿಸಿಕೊಡುವ ಕನಿಷ್ಟ ಸೇವೆಯನ್ನು ಅಥವಾ ಸೌಲಭ್ಯವನ್ನು ಬಳಸಿಕೊಳ್ಳಲು ತಪ್ಪಿದ್ದಲ್ಲಿ ಅಂಥ ಸದಸ್ಯನು ಒಂದು(1) ವರ್ಷಗಳವರೆಗೆ ಸಾಮಾನ್ಯ ಸಭೆಯಲ್ಲಿ ಮತ ನೀಡುವ ಹಕ್ಕನ್ನು ಹಾಗೂ ಆಡಳಿತ ಮಂಡಲಿ ಸದಸ್ಯರ ಚುನಾವಣೆಯಲ್ಲಿ ಮತ ನೀಡುವ ಮತ್ತು ಸ್ಪರ್ಧಿಸುವ ಹಕ್ಕನ್ನು ಹೊಂದಿರತಕ್ಕದಲ್ಲ. | **ಅಧ್ಯಾಯ 9: ಉಪನಿಯಮದ ಸಂಖ್ಯೆ:43.3**<br>ಉಪನಿಯಮದ ಸಂಖ್ಯೆ:43.4(ಉ) ಹಾಗೂ ಉಪನಿಯಮದ ಸಂಖ್ಯೆ:43.4(ಊ)<br>43.3 ಸುಸ್ತಿದಾರ ಸದಸ್ಯರಿಗೆ ಮತ ಚಲಾಯಿಸುವ ಹಕ್ಕು ಇರುವುದಿಲ್ಲ. ಸರ್ವ ಸದಸ್ಯರ ಸಭೆಯ/ಚುನಾವಣೆಯ ದಿನಾಂಕದಿಂದ ಕನಿಷ್ಟ 45 ದಿನಗಳ ಮುಂಚೆ ಸಂಘಕ್ಕೆ ಬರಬೇಕಿರುವ ಯಾವುದೇ ತರಹದ ಸುಸ್ತಿಬಾಕಿಯನ್ನು /ಇನ್ನಾವುದೇ ಬಾಕಿಯನ್ನು ತೀರುವಳಿ ಮಾಡಲು ನೋಟೀಸ್ ಕೊಟ್ಟು ಅಂತಹ ಸದಸ್ಯರು ಸಭೆ/ಚುನಾವಣೆ ದಿನಾಂಕದಿಂದ ಕನಿಷ್ಟ 21 ದಿನಗಳಿಗೆ ಮುಂಚಿತವಾಗಿ ಅಂತಹ ಬಾಕಿಯನ್ನು ಪಾವತಿ ಮಾಡಲು ತಪ್ಪಿದಲ್ಲಿ ಅಂತಹ ಬಾಕಿದಾರನು ಸುಸ್ತಿದಾರರೆಂದು ಪರಿಗಣಿಸತಕ್ಕದ್ದು ಮತ್ತು ಅವರಿಗೆ ಮತ ಚಲಾಯಿಸಲು ಹಕ್ಕು ಇರುವುದಿಲ್ಲ.<br>43.4(ಉ) ಕಳೆದ ಐದು ಸಾಮಾನ್ಯ ಸಭೆಗಳ ಪೈಕಿ ಯಾವುದೇ ಎರಡು ಸಾಮಾನ್ಯ ಸಭೆಗಳಿಗೆ ಹಾಜರಾಗದೇ ಇರುವ ಸದಸ್ಯನಿಗೆ.<br>(ಊ) ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು(2) ಸಹಕಾರ ವರ್ಷದಲ್ಲಿ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಸಂಘ ದೊರಕಿಸಿಕೊಡುವ ಕನಿಷ್ಟ ಸೇವೆಯನ್ನು ಅಥವಾ ಸೌಲಭ್ಯವನ್ನು ಬಳಸಿಕೊಳ್ಳಲು ತಪ್ಪಿದ್ದಲ್ಲಿ ಅಂಥ ಸದಸ್ಯನು ಒಂದು(1) ವರ್ಷಗಳವರೆಗೆ ಸಾಮಾನ್ಯ ಸಭೆಯಲ್ಲಿ ಮತ ನೀಡುವ ಹಕ್ಕನ್ನು ಹಾಗೂ ಆಡಳಿತ ಮಂಡಲಿ ಸದಸ್ಯರ ಚುನಾವಣೆಯಲ್ಲಿ ಮತ ನೀಡುವ ಮತ್ತು ಸ್ಪರ್ಧಿಸುವ ಹಕ್ಕನ್ನು ಹೊಂದಿರತಕ್ಕದಲ್ಲ. | ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮ 20 ಎ(4), ಎ(5), 4(ಎ)(5), 5(ಬಿ)ಗಳ ತಿದ್ದುಪಡಿ ರೀತ್ಯ ಸರ್ವ ಸದಸ್ಯರ ಅನುಮೋದನೆಗೆ |

| | | | |
|---|---|---|---|
| **ಅಧ್ಯಾಯ 10. ಉಪನಿಯಮದ ಸಂಖ್ಯೆ: ಆಡಳಿತ ಮಂಡಲಿಯಲ್ಲಿ ತೆರವಾದ ಸ್ಥಾನಗಳು:**<br>54.1ಮರಣ, ವಜಾ, ರಾಜೀನಾಮೆ ಅಥವಾ ಇತರೆ ಯಾವುದೇ ಕಾರಣದಿಂದ ಆಡಳಿತ ಮಂಡಳಿಯಲ್ಲಿ ಖಾಲಿ ಬೀಳುವ ಸ್ಥಾನಗಳನ್ನು ಉಳಿದ ನಿರ್ದೇಶಕರು ಕನಿಷ್ಠ ಎರಡು ನಿರಂತರ ವರ್ಷಗಳ ಅವಧಿಗೆ ಸಂಘದ ಸದಸ್ಯರಾಗಿರುವವರ ಪೈಕಿ ಸಹಮತದಿಂದ ಸೇರಿಸಿಕೊಳ್ಳುವ (co-option) ಮೂಲಕ ಭರ್ತಿ ಮಾಡತಕ್ಕದ್ದು. ಅಂತಹ ನಿರ್ದೇಶಕರು ಯಾರ ಸ್ಥಾನದಲ್ಲಿ ಸೇರಿಸಿಕೊಳ್ಳಲ್ಪಟ್ಟಿದ್ದಾರೋ ಅದೇ ವರ್ಗದ ಸದಸ್ಯರಿಂದ ಅವರ ಪೂರ್ಣಗೊಳ್ಳದ ಅವಧಿಯವರೆಗೆ ಮಾತ್ರ ನಿರ್ದೇಶಕರಾಗಿರಲು ಅಧಿಕಾರ ಹೊಂದಿರುತ್ತಾರೆ.<br><br>54.2ತೆರವಾದ ಸ್ಥಾನದ ಅವಧಿ 2½ (ಎರಡೂವರೆ) ವರ್ಷಕ್ಕಿಂತ ಕಡಿಮೆ ಇದ್ದರೆ ಮಾತ್ರ ಆಡಳಿತ ಮಂಡಳಿ, ಆ ಸ್ಥಾನಕ್ಕೆ ಕೋ ಆಪ್ಷನ್ ಮೂಲಕ ಭರ್ತಿ ಮಾಡುವ ಅಧಿಕಾರ ಇರತಕ್ಕದ್ದು. ಮತ್ತು ಭರ್ತಿ ಮಾಡುವಾಗ ಯಾವ ವರ್ಗದ ಸದಸ್ಯನ ಸ್ಥಾನ ಖಾಲಿ ಆಗಿದೆಯೋ, ಅದೇ ವರ್ಗದಿಂದ ಸೇರಿಸಿಕೊಳ್ಳತಕ್ಕದ್ದು. ಸಾಮಾನ್ಯವಾಗಿ ಹಿಂದಿನ ಚುನಾವಣೆಯಲ್ಲಿ ಅದೇ ವರ್ಗದಿಂದ ಸ್ಪರ್ಧಿಸಿ ಅತೀ ಹೆಚ್ಚು ಮತ ಗಳಿಸಿ, ಸೋತ ಅಭ್ಯರ್ಥಿಯನ್ನು ಕೋ ಆಪ್ಷನ್ ಮೂಲಕ ಸೇರಿಸಿಕೊಳ್ಳಬಹುದು. | **ಅಧ್ಯಾಯ 10. ಉಪನಿಯಮದ ಸಂಖ್ಯೆ: ಆಡಳಿತ ಮಂಡಲಿಯಲ್ಲಿ ತೆರವಾದ ಸ್ಥಾನಗಳು:**<br>54.1ಮರಣ, ವಜಾ, ರಾಜೀನಾಮೆ ಅಥವಾ ಇತರೆ ಯಾವುದೇ ಕಾರಣದಿಂದ ಆಡಳಿತ ಮಂಡಳಿಯಲ್ಲಿ ಖಾಲಿ ಬೀಳುವ ಸ್ಥಾನಗಳನ್ನು ಉಳಿದ ನಿರ್ದೇಶಕರು ಉಳಿಕೆ ಅವಧಿಗೆ ಸಂಘದ ಸದಸ್ಯರಾಗಿರುವವರ ಪೈಕಿ ಸಹಮತದಿಂದ ಸೇರಿಸಿಕೊಳ್ಳುವ (co-option) ಮೂಲಕ ಭರ್ತಿ ಮಾಡತಕ್ಕದ್ದು. ಅಂತಹ ನಿರ್ದೇಶಕರು ಯಾವ ವರ್ಗದಿಂದ ಸೇರಿಸಿಕೊಳ್ಳಲ್ಪಟ್ಟಿದ್ದಾರೋ ಅದೇ ವರ್ಗದ ಸದಸ್ಯರಿಂದ ಅವರ ಪೂರ್ಣಗೊಳ್ಳದ ಅವಧಿಯವರೆಗೆ ಮಾತ್ರ ನಿರ್ದೇಶಕರಾಗಿರಲು ಅಧಿಕಾರ ಹೊಂದಿರುತ್ತಾರೆ.<br><br>54.2 ಮಂಡಳಿಯ ಅಂತಹ ರಿಕ್ತ ಸ್ಥಾನಕ್ಕಾಗಿ ಚುನಾವಣೆ ನಡೆಯುವವರೆಗೆ ಉದ್ಭವವಾಗುವ ತಾತ್ಕಾಲಿಕ ಸ್ಥಾನಕ್ಕೆ ಸಂಬಂಧಿಸಿದಂತೆ ಅದೇ ವರ್ಗದ ಸದಸ್ಯರುಗಳ ಪೈಕಿ ನಾಮನಿರ್ದೇಶನದ(co-option) ಮೂಲಕ ಮಂಡಳಿಯ ತಾತ್ಕಾಲಿಕ ಸ್ಥಾನವನ್ನು ಭರ್ತಿ ಮಾಡಬಹುದು. | **ಅಧ್ಯಾಯ 10. ಉಪನಿಯಮದ ಸಂಖ್ಯೆ: ಆಡಳಿತ ಮಂಡಲಿಯಲ್ಲಿ ತೆರವಾದ ಸ್ಥಾನಗಳು:**<br>54.1ಮರಣ, ವಜಾ, ರಾಜೀನಾಮೆ ಅಥವಾ ಇತರೆ ಯಾವುದೇ ಕಾರಣದಿಂದ ಆಡಳಿತ ಮಂಡಳಿಯಲ್ಲಿ ಖಾಲಿ ಬೀಳುವ ಸ್ಥಾನಗಳನ್ನು ಉಳಿದ ನಿರ್ದೇಶಕರು ಉಳಿಕೆ ಅವಧಿಗೆ ಸಂಘದ ಸದಸ್ಯರಾಗಿರುವವರ ಪೈಕಿ ಸಹಮತದಿಂದ ಸೇರಿಸಿಕೊಳ್ಳುವ (co-option) ಮೂಲಕ ಭರ್ತಿ ಮಾಡತಕ್ಕದ್ದು. ಅಂತಹ ನಿರ್ದೇಶಕರು ಯಾವ ವರ್ಗದಿಂದ ಸೇರಿಸಿಕೊಳ್ಳಲ್ಪಟ್ಟಿದ್ದಾರೋ ಅದೇ ವರ್ಗದ ಸದಸ್ಯರಿಂದ ಅವರ ಪೂರ್ಣಗೊಳ್ಳದ ಅವಧಿಯವರೆಗೆ ಮಾತ್ರ ನಿರ್ದೇಶಕರಾಗಿರಲು ಅಧಿಕಾರ ಹೊಂದಿರುತ್ತಾರೆ.<br><br>54.2 ಮಂಡಳಿಯ ಅಂತಹ ರಿಕ್ತ ಸ್ಥಾನಕ್ಕಾಗಿ ಚುನಾವಣೆ ನಡೆಯುವವರೆಗೆ ಉದ್ಭವವಾಗುವ ತಾತ್ಕಾಲಿಕ ಸ್ಥಾನಕ್ಕೆ ಸಂಬಂಧಿಸಿದಂತೆ ಅದೇ ವರ್ಗದ ಸದಸ್ಯರುಗಳ ಪೈಕಿ ನಾಮನಿರ್ದೇಶನದ(co-option) ಮೂಲಕ ಮಂಡಳಿಯ ತಾತ್ಕಾಲಿಕ ಸ್ಥಾನವನ್ನು ಭರ್ತಿ ಮಾಡಬಹುದು. | ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮ 29(ಇ)ಗಳ ತಿದ್ದುಪಡಿ ರೀತ್ಯ ಸರ್ವ ಸದಸ್ಯರ ಅನುಮೋದನೆಗೆ. |

| | | | |
|---|---|---|---|
| ಅಧ್ಯಾಯ–10 ಉಪನಿಯಮದ ಸಂಖ್ಯೆ: 49 (ಅ) ಹೊಸದಾಗಿ ಸೇರ್ಪಡೆ | ಅಧ್ಯಾಯ–10 ಉಪನಿಯಮದ ಸಂಖ್ಯೆ: 49 (ಅ) ಖಜಾಂಚಿ: ಸಂಘದ ದಿನನಿತ್ಯದ ಹಣಕಾಸಿನ ವ್ಯವಹಾರಗಳನ್ನು ನಿಯಂತ್ರಿಸುವ ಅಧಿಕಾರ, ಪ್ರತಿ ಆರು ತಿಂಗಳಿಗೊಮ್ಮೆ ಭದ್ರತಾ ಸಾಲಗಳಾದ ಚಿನ್ನಾಭರಣ ಸಾಲ, ಬೆಳ್ಳಿ ಆಧಾರ ಸಾಲ ಹಾಗೂ ಸ್ಥಿರಾಧಾರ ಸಾಲಗಳ ದಾಖಲೆಗಳನ್ನು ಹಾಗೂ ಆಭರಣ/ಪದಾರ್ಥಗಳ ಭೌತಿಕ ಪರಿಶೀಲನೆಯನ್ನು ಮಾಡುವುದು, ಬ್ಯಾಂಕ್ ವ್ಯವಹಾರಗಳಿಗೆ ಸಹಿ ಮಾಡುವುದು, ಸಂಘದ ಆರ್ಥಿಕ ಲೆಕ್ಕ ಪತ್ರಗಳ ಪರಿಶೀಲನೆ, ವ್ಯವಹಾರಗಳಿಗೆ ಅವಶ್ಯಕವಾದ ಖರ್ಚು ವೆಚ್ಚಗಳನ್ನು ಅನುಮೋದಿಸುವ ಅಧಿಕಾರವನ್ನು ಹೊಂದಿರತಕ್ಕದ್ದು. | ಅಧ್ಯಾಯ–10 ಉಪನಿಯಮದ ಸಂಖ್ಯೆ: 49 (ಅ) ಖಜಾಂಚಿ: ಸಂಘದ ದಿನನಿತ್ಯದ ಹಣಕಾಸಿನ ವ್ಯವಹಾರಗಳನ್ನು ನಿಯಂತ್ರಿಸುವ ಅಧಿಕಾರ, ಪ್ರತಿ ಆರು ತಿಂಗಳಿಗೊಮ್ಮೆ ಭದ್ರತಾ ಸಾಲಗಳಾದ ಚಿನ್ನಾಭರಣ ಸಾಲ, ಬೆಳ್ಳಿ ಆಧಾರ ಸಾಲ ಹಾಗೂ ಸ್ಥಿರಾಧಾರ ಸಾಲಗಳ ದಾಖಲೆಗಳನ್ನು ಹಾಗೂ ಆಭರಣ/ಪದಾರ್ಥಗಳ ಭೌತಿಕ ಪರಿಶೀಲನೆಯನ್ನು ಮಾಡುವುದು, ಬ್ಯಾಂಕ್ ವ್ಯವಹಾರಗಳಿಗೆ ಸಹಿ ಮಾಡುವುದು, ಸಂಘದ ಆರ್ಥಿಕ ಲೆಕ್ಕ ಪತ್ರಗಳ ಪರಿಶೀಲನೆ, ವ್ಯವಹಾರಗಳಿಗೆ ಅವಶ್ಯಕವಾದ ಖರ್ಚು ವೆಚ್ಚಗಳನ್ನು ಅನುಮೋದಿಸುವ ಅಧಿಕಾರವನ್ನು ಹೊಂದಿರತಕ್ಕದ್ದು. | ಸಂಘದ ವ್ಯವಹಾರದ ಅಭಿವೃದ್ಧಿಗೆ ಆಡಳಿತ ಮಂಡಲಿಯವರ ತೀರ್ಮಾನದಂತೆ ಮತ್ತು ಲೆಕ್ಕಪರಿಶೋಧನಾ ವರದಿಯಲ್ಲಿ ಸೂಚಿಸಿದಂತೆ ಸರ್ವಸದಸ್ಯರ ಸಭೆಯ ಅನುಮೋದನೆಗೆ. |
| 66(ಬಿ). <u>ಸಾಲ ಮತ್ತು ಮುಂಗಡಗಳು</u><br>(3) **<u>ತುರ್ತು ಸಾಲ:</u>**<br>**<u>ಸಾಲದ ಅವಧಿ:</u>**10 ತಿಂಗಳು<br>**<u>ವೈಯಕ್ತಿಕ ಸಾಲದ ಪರಿಮಿತಿ ಮತ್ತು ಸಾಲದ ಮೊತ್ತ (ರೂ.ಗಳಲ್ಲಿ):</u>** ಕನಿಷ್ಟ ರೂ.5,000/– ದಿಂದ 50,000/–ಕ್ಕೆ ಮೀರದಂತೆ.<br>**<u>ಶೇಕಡವಾರು ಬಡ್ಡಿ ದರ</u>:** ಆಡಳಿತ ಮಂಡಲಿ ಕಾಲಕಾಲಕ್ಕೆ ನಿರ್ಧರಿಸಿದಂತೆ ಇರತಕ್ಕದ್ದು.<br>**<u>ಷರಾ:</u>**ಈ ಸಾಲಕ್ಕೆ ಸಂಬಂಧಿಸಿದಂತೆ ಒಳನಿಯಮಾವಳಿಗಳನ್ನು ರಚಿಸಿ ಜಾರಿಗೆ ತರಲು ಆಡಳಿತ ಮಂಡಲಿಗೆ ಅಧಿಕಾರ ಇರುತ್ತದೆ. ಅತಿ ಜರೂರು ಅವಶ್ಯ ವೈದ್ಯಕೀಯ ವೆಚ್ಚಕ್ಕೆ, ಮರಣಾಂತರ ವೆಚ್ಚಕ್ಕೆ ಈ ಸಾಲವನ್ನು ಪದಾಧಿಕಾರಿಗಳ ಪರಿಶೀಲನೆಯ ನಂತರ ಅಧ್ಯಕ್ಷರು ಮಂಜೂರು ಮಾಡಿ ನಂತರ ಆಡಳಿತ ಮಂಡಲಿಯ ಅನುಮೋದನೆ ಪಡೆಯಬಹುದು. | 66(ಬಿ). <u>ಸಾಲ ಮತ್ತು ಮುಂಗಡಗಳು</u><br>(3) **<u>ತುರ್ತು ಸಾಲ:</u>**<br>**<u>ಸಾಲದ ಅವಧಿ:</u>**12 ತಿಂಗಳು<br>**<u>ವೈಯಕ್ತಿಕ ಸಾಲದ ಪರಿಮಿತಿ ಮತ್ತು ಸಾಲದ ಮೊತ್ತ (ರೂ.ಗಳಲ್ಲಿ):</u>** ಕನಿಷ್ಟ ರೂ.5,000/– ದಿಂದ 50,000/–ಕ್ಕೆ ಮೀರದಂತೆ.<br>**<u>ಶೇಕಡವಾರು ಬಡ್ಡಿ ದರ</u>:** ಆಡಳಿತ ಮಂಡಲಿ ಕಾಲಕಾಲಕ್ಕೆ ನಿರ್ಧರಿಸಿದಂತೆ ಇರತಕ್ಕದ್ದು.<br>**<u>ಷರಾ:</u>**ಈ ಸಾಲಕ್ಕೆ ಸಂಬಂಧಿಸಿದಂತೆ ಒಳನಿಯಮಾವಳಿಗಳನ್ನು ರಚಿಸಿ ಜಾರಿಗೆ ತರಲು ಆಡಳಿತ ಮಂಡಲಿಗೆ ಅಧಿಕಾರ ಇರುತ್ತದೆ. ಅತಿ ಜರೂರು ಅವಶ್ಯ ವೈದ್ಯಕೀಯ ವೆಚ್ಚಕ್ಕೆ, ಮರಣಾನಂತರ ವೆಚ್ಚಕ್ಕೆ, ಪ್ರಕೃತಿ ವಿಕೋಪದ ಹಾನಿಯನ್ನು ಮತ್ತು ಸಾಂಕ್ರಮಿಕ ರೋಗದಿಂದ ಆಗುವ ಆರ್ಥಿಕ ತೊಂದರೆಗಳನ್ನು ಗಮನಿಸಿ ಆಡಳಿತ ಮಂಡಲಿಯವರ ನಿರ್ಧಾರದಂತೆ ಮಂಜೂರು ಮಾಡುವ ಸಾಲ | 66(ಬಿ). <u>ಸಾಲ ಮತ್ತು ಮುಂಗಡಗಳು</u><br>(3) **<u>ತುರ್ತು ಸಾಲ:</u>**<br>**<u>ಸಾಲದ ಅವಧಿ:</u>**10 ತಿಂಗಳು<br>**<u>ವೈಯಕ್ತಿಕ ಸಾಲದ ಪರಿಮಿತಿ ಮತ್ತು ಸಾಲದ ಮೊತ್ತ (ರೂ.ಗಳಲ್ಲಿ):</u>** ಕನಿಷ್ಟ ರೂ.5,000/– ದಿಂದ 50,000/–ಕ್ಕೆ ಮೀರದಂತೆ.<br>**<u>ಶೇಕಡವಾರು ಬಡ್ಡಿ ದರ</u>:** ಆಡಳಿತ ಮಂಡಲಿ ಕಾಲಕಾಲಕ್ಕೆ ನಿರ್ಧರಿಸಿದಂತೆ ಇರತಕ್ಕದ್ದು.<br>**<u>ಷರಾ:</u>**ಈ ಸಾಲಕ್ಕೆ ಸಂಬಂಧಿಸಿದಂತೆ ಒಳನಿಯಮಾವಳಿಗಳನ್ನು ರಚಿಸಿ ಜಾರಿಗೆ ತರಲು ಆಡಳಿತ ಮಂಡಲಿಗೆ ಅಧಿಕಾರ ಇರುತ್ತದೆ. ಅತಿ ಜರೂರು ಅವಶ್ಯ ವೈದ್ಯಕೀಯ ವೆಚ್ಚಕ್ಕೆ, ಮರಣಾನಂತರ ವೆಚ್ಚಕ್ಕೆ, ಪ್ರಕೃತಿ ವಿಕೋಪದ ಹಾನಿಯನ್ನು ಮತ್ತು ಸಾಂಕ್ರಮಿಕ ರೋಗದಿಂದ ಆಗುವ ಆರ್ಥಿಕ ತೊಂದರೆಗಳನ್ನು ಗಮನಿಸಿ ಆಡಳಿತ ಮಂಡಲಿಯವರ ನಿರ್ಧಾರದಂತೆ ಮಂಜೂರು ಮಾಡುವ ಸಾಲ | ಸದಸ್ಯರ ಆರ್ಥಿಕ ತೊಂದರೆಗೆ ಸಂಘದ ವತಿಯಿಂದ ಕೈ ಜೋಡಿಸುವ ಸಲುವಾಗಿ ಆಡಳಿತ ಮಂಡಲಿ ಯಲ್ಲಿ ತೀರ್ಮಾನಿಸಿ ಸರ್ವ ಸದಸ್ಯರ ಸಭೆಯ ಅನುಮೋದನೆಗೆ. |

| | | | |
|---|---|---|---|
| **<u>ಸ್ಥಿರಾಸ್ತಿ ಸಾಲ:</u>** ನಿವೇಶನ/ಮನೆ ಕಟ್ಟಲು, ಸದರಿ ಆಸ್ತಿಗಳನ್ನು ಅಡುವು ಮಾಡಿಕೊಂಡು ಅಥವಾ ಮನೆಯನ್ನು ಆಧಾರ ಮಾಡಿ ತನ್ನ ಸ್ವಂತಅವಶ್ಯಕತೆಗೆ ಪಡೆಯುವ ಸಾಲ.<br>**<u>ವೈಯಕ್ತಿಕ ಸಾಲದ ಪರಿಮಿತಿ ಮತ್ತು ಸಾಲದ ಮೊತ್ತ (ರೂ.ಗಳಲ್ಲಿ):</u>** ಗರಿಷ್ಟ ರೂ.50,00,000/- ಅಥವಾ ಆಸ್ತಿಗಳ ಮೌಲ್ಯಮಾಪಕರ ದರದ ಮೇಲೆ ಶೇಕಡ 75ಕ್ಕೆ ಮೀರದಷ್ಟು.<br>**<u>ಅವಧಿ</u>**: 100 ತಿಂಗಳುಗಳಿಂದ 180 ತಿಂಗಳವರೆಗೆ<br>ಬಡ್ಡಿದರ: ಆಡಳಿತ ಮಂಡಲಿ ಕಾಲಕಾಲಕ್ಕೆ ನಿರ್ಧರಿಸಿದಂತೆ ಇರತಕ್ಕದ್ದು.<br>**<u>ಷರಾ:</u>**ಈ ಸಾಲವನ್ನು ಹಂತ ಹಂತವಾಗಿ ಅಥವಾ ಏಕಗಂಟಿನಲ್ಲಿ ಬಿಡುಗಡೆ ಮಾಡುವುದು. ಆ ಅವಧಿಯಲ್ಲಿ ಸದರಿಯವರ ಮರು ಪಾವತಿಯಲ್ಲಿ ತೊಂದರೆ ಉಂಟಾದಲ್ಲಿ ಮುಂದಿನ ಕಂತನ್ನು ಬಿಡುಗಡೆ ಮಾಡದೇ ತಡೆ ಹಿಡಿಯುವ ಅಧಿಕಾರ ಆಡಳಿತ ಮಂಡಲಿಗೆ ಇರುತ್ತದೆ. ಈ ಸಾಲಕ್ಕೆ ಸಂಬಂಧಿಸಿದಂತೆ ಒಳನಿಯಮಾವಳಿಗಳನ್ನು ರಚಿಸಿ ಜಾರಿಗೆ ತರಲು ಆಡಳಿತ ಮಂಡಳಿಗೆ ಅಧಿಕಾರ ಇರುತ್ತದೆ. | **ಸ್ಥಿರಾಸ್ತಿ ಸಾಲ:** ನಿವೇಶನ/ಮನೆ ಆಧಾರ ಮಾಡಿ ಕೊಂಡು/ಸದರಿ ಆಸ್ತಿಗಳನ್ನು ಅಡುವು ಮಾಡಿಕೊಂಡು ಹೊಸ ಮನೆ ಕಟ್ಟಲು, ತನ್ನ ಸ್ವಂತ ವಿವಿಧ ಅವಶ್ಯಕತೆಗೆ ಪಡೆಯುವ ಸಾಲ. ಸಂಘದ ಸ್ಥಿರಾಸ್ತಿ ಮೌಲ್ಯಮಾಪಕರು ಸೂಚಿಸಿದ ಮಾರುಕಟ್ಟೆ ಬೆಲೆಯ ಶೇಕಡ 75ರಷ್ಟು ಅಥವಾ ರೂ. 50,00,000/- ಗಳಿಗೆ ಮೀರದಂತೆ ಆಡಳಿತ ಮಂಡಲಿ ತೀರ್ಮಾನದಂತೆ ಮಂಜೂರು ಮಾಡಬಹುದು.<br>ಅವಧಿ: 100 ತಿಂಗಳುಗಳಿಂದ 180 ತಿಂಗಳವರೆಗೆ<br>ಬಡ್ಡಿದರ: ಆಡಳಿತ ಮಂಡಲಿ ಕಾಲಕಾಲಕ್ಕೆ ನಿರ್ಧರಿಸಿದಂತೆ ಇರತಕ್ಕದ್ದು.<br>ಈ ಸಾಲವನ್ನು ಹಂತ ಹಂತವಾಗಿ ಅಥವಾ ಏಕಗಂಟಿನಲ್ಲಿ ಬಿಡುಗಡೆ ಮಾಡುವುದು. ಆ ಅವಧಿಯಲ್ಲಿ ಸದರಿಯವರ ಮರು ಪಾವತಿಯಲ್ಲಿ ತೊಂದರೆ ಉಂಟಾದಲ್ಲಿ ಮುಂದಿನ ಕಂತನ್ನು ಬಿಡುಗಡೆ ಮಾಡದೇ ತಡೆ ಹಿಡಿಯುವ ಅಧಿಕಾರ ಆಡಳಿತ ಮಂಡಲಿಗೆ ಇರುತ್ತದೆ. ಈ ಸಾಲಕ್ಕೆ ಸಂಬಂಧಿಸಿದಂತೆ<br>ಒಳನಿಯಮಾವಳಿಗಳನ್ನು ರಚಿಸಿ ಜಾರಿಗೆ ತರಲು ಆಡಳಿತ ಮಂಡಳಿಗೆ ಅಧಿಕಾರ ಇರುತ್ತದೆ. | **ಸ್ಥಿರಾಸ್ತಿ ಸಾಲ:** ನಿವೇಶನ/ಮನೆ ಆಧಾರ ಮಾಡಿ ಕೊಂಡು/ ಸದರಿ ಆಸ್ತಿಗಳನ್ನು ಅಡುವು ಮಾಡಿಕೊಂಡು ಹೊಸ ಮನೆ ಕಟ್ಟಲು, ತನ್ನ ಸ್ವಂತ ವಿವಿಧ ಅವಶ್ಯಕತೆಗೆ ಪಡೆಯುವ ಸಾಲ. ಸಂಘದ ಸ್ಥಿರಾಸ್ತಿ ಮೌಲ್ಯಮಾಪಕರು ಸೂಚಿಸಿದ ಮಾರುಕಟ್ಟೆ ಬೆಲೆಯ ಶೇಕಡ 75ರಷ್ಟು ಅಥವಾ ರೂ. 50,00,000/- ಗಳಿಗೆ ಮೀರದಂತೆ ಆಡಳಿತ ಮಂಡಲಿ ತೀರ್ಮಾನದಂತೆ ಮಂಜೂರು ಮಾಡಬಹುದು.<br>ಅವಧಿ: 100 ತಿಂಗಳುಗಳಿಂದ 180 ತಿಂಗಳವರೆಗೆ<br>ಬಡ್ಡಿದರ: ಆಡಳಿತ ಮಂಡಲಿ ಕಾಲಕಾಲಕ್ಕೆ ನಿರ್ಧರಿಸಿದಂತೆ ಇರತಕ್ಕದ್ದು.<br>ಈ ಸಾಲವನ್ನು ಹಂತ ಹಂತವಾಗಿ ಅಥವಾ ಏಕಗಂಟಿನಲ್ಲಿ ಬಿಡುಗಡೆ ಮಾಡುವುದು. ಆ ಅವಧಿಯಲ್ಲಿ ಸದರಿಯವರ ಮರು ಪಾವತಿಯಲ್ಲಿ ತೊಂದರೆ ಉಂಟಾದಲ್ಲಿ ಮುಂದಿನ ಕಂತನ್ನು ಬಿಡುಗಡೆ ಮಾಡದೇ ತಡೆ ಹಿಡಿಯುವ ಅಧಿಕಾರ ಆಡಳಿತ ಮಂಡಲಿಗೆ ಇರುತ್ತದೆ. ಈ ಸಾಲಕ್ಕೆ ಸಂಬಂಧಿಸಿದಂತೆ<br>ಒಳನಿಯಮಾವಳಿಗಳನ್ನು ರಚಿಸಿ ಜಾರಿಗೆ ತರಲು ಆಡಳಿತ ಮಂಡಳಿಗೆ ಅಧಿಕಾರ ಇರುತ್ತದೆ. | ಸಂಘದ ವ್ಯವಹಾರದ ಅಭಿವೃದ್ಧಿಗೆ ಆಡಳಿತ ಮಂಡಲಿಯ ತೀರ್ಮಾನದಂತೆ ಸರ್ವ ಸದಸ್ಯರ ಸಭೆಯ ಅನುಮೋದನೆಗೆ. |
| 67. **<u>ಪ್ರತಿ ಸದಸ್ಯರು ಪಡೆಯುವ ಒಟ್ಟು ಸಾಲದ ಪರಿಮಿತಿ:</u>**<br>ಪ್ರತಿ ಸದಸ್ಯನು ಆಡಳಿತ ಮಂಡಲಿಯ ಆದೇಶದಂತೆ ಮತ್ತು ಆಗಿಂದಾಗ್ಗೆ ಮಂಡಲಿಯು ನಿರ್ಧರಿಸಿದಂತೆ ಸಾಲ ಪಡೆಯಲು ಅರ್ಹರಾಗಿರುತ್ತಾರೆ. ಸಂಘದ ಒಬ್ಬ ಸದಸ್ಯರಿಗೆ ಉಪನಿಬಂಧನೆಗಳನ್ವಯ ಕೊಡಬಹುದಾದ ಎಲ್ಲಾ ಬಗೆಯ | 67. **<u>ಪ್ರತಿ ಸದಸ್ಯರು ಪಡೆಯುವ ಒಟ್ಟು ಸಾಲದ ಪರಿಮಿತಿ:</u>**<br>ಪ್ರತಿ ಸದಸ್ಯನು ಆಡಳಿತ ಮಂಡಲಿಯ ಆದೇಶದಂತೆ ಮತ್ತು ಆಗಿಂದಾಗ್ಗೆ ಮಂಡಲಿಯು ನಿರ್ಧರಿಸಿದಂತೆ ಸಾಲ ಪಡೆಯಲು ಅರ್ಹರಾಗಿರುತ್ತಾರೆ. ಸಂಘದ ಒಬ್ಬ ಸದಸ್ಯರಿಗೆ ಉಪನಿಬಂಧನೆಗಳನ್ವಯ ಕೊಡ | 67. **<u>ಪ್ರತಿ ಸದಸ್ಯರು ಪಡೆಯುವ ಒಟ್ಟು ಸಾಲದ ಪರಿಮಿತಿ:</u>**<br>ಪ್ರತಿ ಸದಸ್ಯನು ಆಡಳಿತ ಮಂಡಲಿಯ ಆದೇಶದಂತೆ ಮತ್ತು ಆಗಿಂದಾಗ್ಗೆ ಮಂಡಲಿಯು ನಿರ್ಧರಿಸಿದಂತೆ ಸಾಲ ಪಡೆಯಲು ಅರ್ಹರಾಗಿರುತ್ತಾರೆ. ಸಂಘದ ಒಬ್ಬ ಸದಸ್ಯರಿಗೆ ಉಪನಿಬಂಧನೆಗಳನ್ವಯ ಕೊಡ | ಆಡಳಿತ ಮಂಡಲಿಯ ತೀರ್ಮಾನದಂತೆ ಸರ್ವ ಸದಸ್ಯರ ಸಭೆಯ ಅನುಮೋದನೆಗೆ. |

| | | | |
|---|---|---|---|
| ಸಾಲಗಳ ಮೊತ್ತ ರೂ.60,00,000/- (ರೂ.ಆರವತ್ತು ಲಕ್ಷ)ಗಳಿಗೆ ಮೀರಕೂಡದು. ಹಾಗೂ ಸಾಲದ ಮಿತಿಯನ್ನು ಆಡಳಿತ ಮಂಡಲಿಯು ಆಗಿಂದಾಗ್ಗೆ ನಿರ್ಧರಿಸತಕ್ಕದ್ದು. | ಬಹುದಾದ ಎಲ್ಲಾ ಬಗೆಯ ಸಾಲಗಳ ಮೊತ್ತ ರೂ. 65 ಲಕ್ಷಗಳಿಗೆ ಮೀರಕೂಡದು ಹಾಗೂ ಸಾಲದ ಮಿತಿಯನ್ನು ಆಡಳಿತ ಮಂಡಲಿಯು ಆಗಿಂದಾಗ್ಗೆ ನಿರ್ಧರಿಸತಕ್ಕದ್ದು. | ಬಹುದಾದ ಎಲ್ಲಾ ಬಗೆಯ ಸಾಲಗಳ ಮೊತ್ತ ರೂ. 65 ಲಕ್ಷಗಳಿಗೆ ಮೀರಕೂಡದು ಹಾಗೂ ಸಾಲದ ಮಿತಿಯನ್ನು ಆಡಳಿತ ಮಂಡಲಿಯು ಆಗಿಂದಾಗ್ಗೆ ನಿರ್ಧರಿಸತಕ್ಕದ್ದು. | |
| ಅಧ್ಯಾಯ-15 ಉಪನಿಯಮದ ಸಂಖ್ಯೆ:89.3. ನಿಧಿಗಳ ಉಪಯೋಗಗಳು:<br>(ಅ) ಸಿಬ್ಬಂದಿಗಳಿಗೆ ಬೋನಸ್/ಎಕ್ಸ್-ಗ್ರೇಷಿಯಾ ಎರಡು ತಿಂಗಳ ವೇತನಕ್ಕೆ ಮೀರದಂತೆ<br>(ಆ) ಕರಡು ಸಾಲದ ನಿಧಿಗೆ (ಹೋಕುಬಾಕಿ ನಿಧಿಗೆ)<br>(ಇ) ಕಟ್ಟಡದ ನಿಧಿಗೆ<br>(ಈ) ಸಿಬ್ಬಂದಿ ಕ್ಷೇಮನಿಧಿಗೆ<br>(ಉ) ಧರ್ಮದ ನಿಧಿಗೆ<br>(ಊ) ಸದಸ್ಯರ ಮರಣೋತ್ತರ ನಿಧಿಗೆ<br>(ಋ) ಬೆಳ್ಳಿ ಮಹೋತ್ಸವ ನಿಧಿಗೆ (ಜ್ಯುಬಿಲಿ ಫಂಡ್‌ಗೆ)<br>(ೠ) ಲಾಭಾಂಶ ಸಮೀಕರಣ ನಿಧಿಗೆ<br>(ಎ) ಪ್ರಚಾರ ನಿಧಿಗೆ ತೆಗೆದಿರಿಸಿ, ಸದಸ್ಯರಲ್ಲಿ ಶ್ರೇಷ್ಟರನ್ನು ಗುರುತಿಸಿ ಸನ್ಮಾನಿಸಲು, ಸಹಕಾರ ಶಿಕ್ಷಣ ನೀಡಲು ಮತ್ತಿತರ ಉದ್ದೇಶಗಳಿಗೆ ಬಳಸಬಹ್ಮದು.<br>(ಏ) ಸಿಬ್ಬಂದಿ ವಿದ್ಯಾ ನಿಧಿಗೆ<br>(ಐ) ಶತಮಾನೋತ್ಸವ ಮಹೋತ್ಸವ ನಿಧಿಗೆ (ಗೋಲ್ಡನ್ ಜ್ಯುಬಿಲಿ ಫಂಡ್‌ಗೆ)<br>(ಒ) ಸಾಲಿನ ಅಖೈರಿಗೆ ಇರುವ ಷೇರು ಬಂಡವಾಳದ ಮೇಲೆ ನಿರ್ಧರಿಸುವ ದರದಲ್ಲಿ ಲಾಭಾಂಶ<br>ಕ್ರಮ ಸಂಖ್ಯೆ ಅ ಇಂದ ಒ ವರೆಗೆ ಮಹಾಸಭೆಯ ತೀರ್ಮಾನದಂತೆ ವಿಲೇವಾರಿ ಮಾಡುವುದು. | ಅಧ್ಯಾಯ-15 ಉಪನಿಯಮದ ಸಂಖ್ಯೆ: 89.4. ನಿಧಿಗಳ ಉಪಯೋಗಗಳು: ಹೊಸದಾಗಿ ಸೇರ್ಪಡೆ<br>ಉಪನಿಯಮದ ಸಂಖ್ಯೆ:89.3ರಲ್ಲಿ ತಿಳಿಸಿರುವ ಅ ಇಂದ ಒ ವರೆಗೆ ನಿರ್ದೇಶಕ ಮಂಡಲಿ ಸಭೆಯಲ್ಲಿ ಶಿಫಾರಸ್ಸು ಮಾಡಿದಂತೆ ಸರ್ವ ಸದಸ್ಯರ ಸಭೆಯ ಅನುಮೋದನೆಯ ಅನುಸಾರ ಲಾಭಾಂಶದ ವಿಂಗಡಣೆಯನ್ನು ಆಯಾಯ ನಿಧಿಗಳಿಗೆ ವಿಲೇವಾರಿ ಮಾಡುವುದು ಮತ್ತು ಈ ಕೆಳಕಂಡ ಉದ್ದೇಶಗಳಿಗೆ ಉಪಯೋಗಿಸುವುದು.<br>(ಅ)ಸಿಬ್ಬಂದಿ ಬೋನಸ್/ಎಕ್ಸ್‌ಗ್ರೇಷಿಯಾ ನಿರ್ದೇಶಕ ಮಂಡಲಿ ಶಿಫಾರಸ್ಸಿನ ರೀತ್ಯ ಸರ್ವ ಸದಸ್ಯರ ಸಭೆಯ ಅನುಮೋದನೆಯಂತೆ ಸಿಬ್ಬಂದಿಗೆ ಪಾವತಿ ಮಾಡುವುದು.<br>(ಆ) ಕರಡು ಸಾಲದ ನಿಧಿಗೆ (ಹೋಕುಬಾಕಿ ನಿಧಿಗೆ) _ ಸುಸ್ತಿ ಸಾಲದ ವಸೂಲಾತಿಯು ಸಂಶಯಾಸ್ಪದವಾಗಿದ್ದು, ಕಾಣೆಯಾಗಿರುವ/ಮರಣ ಹೊಂದಿರುವ/ ಸಾಲ ತೆಗೆದು ಕೊಂಡ ನಂತರ ಮಾನಸಿಕ ಅಸ್ವಸ್ಥ/ವಿಕಲಚೇತನ ರಾದಂತಹ ಸುಸ್ತಿ ಸಾಲಗಾರರ ಅಸಲು ಮೊಬಲಗನ್ನು ಸರ್ವ ಸದಸ್ಯರ ಸಭೆಯ ಅನುಮೋದನೆಯಂತೆ ಈ ನಿಧಿಯಿಂದ ಹೊಂದಾಣಿಕೆ ಮಾಡಿಕೊಳ್ಳಬಹುದು.<br>(ಇ) ಕಟ್ಟಡ ನಿಧಿ – ಕಟ್ಟಡದ ನವೀಕರಣ, ನಿವೇಶನ ಖರೀದಿ, ಕಟ್ಟಡ ನಿರ್ಮಾಣ, ಹಾಗೂ ಖರೀದಿಗೆ ನಿಯಮಾನುಸಾರ ಸರ್ವ ಸದಸ್ಯರ ಸಭೆಯ ಅನುಮೋದನೆ ಯಂತೆ ಈ ನಿಧಿಯಿಂದ ಉಪಯೋಗಿಸುವುದು. | ಅಧ್ಯಾಯ-15 ಉಪನಿಯಮದ ಸಂಖ್ಯೆ: 89.4. ನಿಧಿಗಳ ಉಪಯೋಗಗಳು: ಹೊಸದಾಗಿ ಸೇರ್ಪಡೆ<br>ಉಪನಿಯಮದ ಸಂಖ್ಯೆ:89.3ರಲ್ಲಿ ತಿಳಿಸಿರುವ ಅ ಇಂದ ಒ ವರೆಗೆ ನಿರ್ದೇಶಕ ಮಂಡಲಿ ಸಭೆಯಲ್ಲಿ ಶಿಫಾರಸ್ಸು ಮಾಡಿದಂತೆ ಸರ್ವ ಸದಸ್ಯರ ಸಭೆಯ ಅನುಮೋದನೆಯ ಅನುಸಾರ ಲಾಭಾಂಶದ ವಿಂಗಡಣೆಯನ್ನು ಆಯಾಯ ನಿಧಿಗಳಿಗೆ ವಿಲೇವಾರಿ ಮಾಡುವುದು ಮತ್ತು ಈ ಕೆಳಕಂಡ ಉದ್ದೇಶಗಳಿಗೆ ಉಪಯೋಗಿಸುವುದು.<br>(ಅ) ಸಿಬ್ಬಂದಿ ಬೋನಸ್/ಎಕ್ಸ್‌ಗ್ರೇಷಿಯಾ ನಿರ್ದೇಶಕ ಮಂಡಲಿ ಶಿಫಾರಸ್ಸಿನ ರೀತ್ಯ ಸರ್ವ ಸದಸ್ಯರ ಸಭೆಯ ಅನುಮೋದನೆಯಂತೆ ಸಿಬ್ಬಂದಿಗೆ ಪಾವತಿ ಮಾಡುವುದು.<br>(ಆ) ಕರಡು ಸಾಲದ ನಿಧಿಗೆ (ಹೋಕುಬಾಕಿ ನಿಧಿಗೆ) _ ಸುಸ್ತಿ ಸಾಲದ ವಸೂಲಾತಿಯು ಸಂಶಯಾಸ್ಪದವಾಗಿದ್ದು, ಕಾಣೆಯಾಗಿರುವ/ಮರಣ ಹೊಂದಿರುವ/ ಸಾಲ ತೆಗೆದು ಕೊಂಡ ನಂತರ ಮಾನಸಿಕ ಅಸ್ವಸ್ಥ/ವಿಕಲಚೇತನ ರಾದಂತಹ ಸುಸ್ತಿ ಸಾಲಗಾರರ ಅಸಲು ಮೊಬಲಗನ್ನು ಸರ್ವ ಸದಸ್ಯರ ಸಭೆಯ ಅನುಮೋದನೆಯಂತೆ ಈ ನಿಧಿಯಿಂದ ಹೊಂದಾಣಿಕೆ ಮಾಡಿಕೊಳ್ಳಬಹುದು.<br>(ಇ) ಕಟ್ಟಡ ನಿಧಿ – ಕಟ್ಟಡದ ನವೀಕರಣ, ನಿವೇಶನ ಖರೀದಿ, ಕಟ್ಟಡ ನಿರ್ಮಾಣ, ಹಾಗೂ ಖರೀದಿಗೆ ನಿಯಮಾನುಸಾರ ಸರ್ವ ಸದಸ್ಯರ ಸಭೆಯ ಅನುಮೋದನೆ ಯಂತೆ ಈ ನಿಧಿಯಿಂದ ಉಪಯೋಗಿಸುವುದು. | ಆಡಳಿತ ಮಂಡಲಿ ತೀರ್ಮಾನದಂತೆ ಸರ್ವ ಸದಸ್ಯರ ಸಭೆಯ ಅನುಮೋದನೆಗೆ |

| | | | |
|---|---|---|---|
| | (ಈ) ಸಿಬ್ಬಂದಿ ಕ್ಷೇಮ ನಿಧಿಗೆ – ಸಂಘದ ಸಿಬ್ಬಂದಿಗಳ ವೈದ್ಯಕೀಯ ವೆಚ್ಚಕ್ಕೆ ಹಾಗೂ ಸಿಬ್ಬಂದಿ ಅಥವಾ ಅವರ ಕುಟುಂಬವರ್ಗದವರು ಮರಣ ಹೊಂದಿದಾಗ, ಸಿಬ್ಬಂದಿಯವರು ನಿವೃತ್ತಿ ಹೊಂದಿದ ಸಮಯದಲ್ಲಿ ವಿಶೇಷ ಭತ್ಯೆ ನೀಡಲು, ಹಾಗೂ ಸಿಬ್ಬಂದಿ ವರ್ಗದವರ ಶುಭ/ಅಶುಭ ವೆಚ್ಚಗಳನ್ನು ಭರಿಸಲು ಈ ನಿಧಿಯಿಂದ ವಾರ್ಷಿಕ ಮಹಾ ಸಭೆಯಲ್ಲಿ ನಿಗದಿಪಡಿಸಿದ ಮೊಬಲಗಿನ ಅನುಗುಣವಾಗಿ ಆಡಳಿತ ಮಂಡಲಿ ಯವರು ನೀಡಲು ಉಪಯೋಗಿಸುವುದು.<br>(ಉ) ಧರ್ಮದ ನಿಧಿ – ಇತರೇ ಸಂಘ ಸಂಸ್ಥೆಗಳ ಯಾವುದಾದರು ಧಾರ್ಮಿಕ ಕಾರ್ಯಕ್ರಮಗಳಿಗೆ, ಕಟ್ಟಡ ನಿರ್ಮಾಣಕ್ಕೆ, ಸಾಂಸ್ಕೃತಿಕ ಕಾರ್ಯಕ್ರಮ ಗಳಿಗೆ ಮತ್ತು ದೇಣಿಗೆ/ಕಾಣಿಕೆ ಕೋರಿ ಬಂದಾಗ ಹಾಗೂ ಸ್ಮರಣ ಸಂಚಿಕೆಯ ಜಾಹಿರಾತು ಕೋರಿ ಬಂದಾಗ ನಿರ್ದೇಶಕ ಮಂಡಲಿಯ ತೀರ್ಮಾನದಂತೆ ಈ ನಿಧಿಯಿಂದ ಪಾವತಿಯನ್ನು ಮಾಡಲಾಗುವುದು.<br>(ಊ) ವಿದ್ಯಾ ನಿಧಿ: ಸಂಘದ ವತಿಯಿಂದ ಸದಸ್ಯರ ಮಕ್ಕಳಿಗೆ ಹೆಚ್ಚುವರಿ ಅಂಕಗಳಿಸಿದ ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ ಪುರಸ್ಕರಿಸಲು ಈ ನಿಧಿಯಿಂದ ಉಪಯೋಗಿಸಿ ಕೊಳ್ಳಲಾಗುವುದು.<br>(ಋ) ಸದಸ್ಯರ ಮರಣೋತ್ತರ ನಿಧಿ– ಸಂಘದ ಸದಸ್ಯರು ಮರಣ ಹೊಂದಿದಾಗ ಅವರ ನಾಮನಿರ್ದೇಶನ ದಾರರಿಗೆ ಸಂಘದ ವತಿಯಿಂದ ರೂ. 3,000/– ಮೊತ್ತವನ್ನು ನೀಡಲಾಗು ವುದು. ಈ ಮೊತ್ತವು ಕಾಲಕಾಲಕ್ಕೆ ಸರ್ವಸದಸ್ಯರ ಸಭೆಯಲ್ಲಿ ನಿಗದಿಪಡಿಸಿದ ಮೊತ್ತಕ್ಕೆ ಅನುಗುಣವಾಗಿರುತ್ತದೆ.<br>(ೠ) ಲಾಭಾಂಶ ಸಮೀಕರಣ ನಿಧಿ – | (ಈ) ಸಿಬ್ಬಂದಿ ಕ್ಷೇಮ ನಿಧಿಗೆ – ಸಂಘದ ಸಿಬ್ಬಂದಿಗಳ ವೈದ್ಯಕೀಯ ವೆಚ್ಚಕ್ಕೆ ಹಾಗೂ ಸಿಬ್ಬಂದಿ ಅಥವಾ ಅವರ ಕುಟುಂಬವರ್ಗದವರು ಮರಣ ಹೊಂದಿದಾಗ, ಸಿಬ್ಬಂದಿಯವರು ನಿವೃತ್ತಿ ಹೊಂದಿದ ಸಮಯದಲ್ಲಿ ವಿಶೇಷ ಭತ್ಯೆ ನೀಡಲು, ಹಾಗೂ ಸಿಬ್ಬಂದಿ ವರ್ಗದವರ ಶುಭ/ಅಶುಭ ವೆಚ್ಚಗಳನ್ನು ಭರಿಸಲು ಈ ನಿಧಿಯಿಂದ ವಾರ್ಷಿಕ ಮಹಾ ಸಭೆಯಲ್ಲಿ ನಿಗದಿಪಡಿಸಿದ ಮೊಬಲಗಿನ ಅನುಗುಣವಾಗಿ ಆಡಳಿತ ಮಂಡಲಿಯವರು ನಿಗದಿಪಡಿಸಿದಂತೆ ನೀಡಲು ಉಪಯೋಗಿಸುವುದು.<br>(ಉ) ಧರ್ಮದ ನಿಧಿ – ಇತರೇ ಸಂಘ ಸಂಸ್ಥೆಗಳ ಯಾವುದಾದರು ಧಾರ್ಮಿಕ ಕಾರ್ಯಕ್ರಮಗಳಿಗೆ, ಕಟ್ಟಡ ನಿರ್ಮಾಣಕ್ಕೆ, ಸಾಂಸ್ಕೃತಿಕ ಕಾರ್ಯಕ್ರಮ ಗಳಿಗೆ ಮತ್ತು ದೇಣಿಗೆ/ಕಾಣಿಕೆ ಕೋರಿ ಬಂದಾಗ ಹಾಗೂ ಸ್ಮರಣ ಸಂಚಿಕೆಯ ಜಾಹಿರಾತು ಕೋರಿ ಬಂದಾಗ ನಿರ್ದೇಶಕ ಮಂಡಲಿಯ ತೀರ್ಮಾನದಂತೆ ಈ ನಿಧಿಯಿಂದ ಪಾವತಿಯನ್ನು ಮಾಡಲಾಗುವುದು.<br>(ಊ) ವಿದ್ಯಾ ನಿಧಿ: ಸಂಘದ ವತಿಯಿಂದ ಸದಸ್ಯರ ಮಕ್ಕಳಿಗೆ ಹೆಚ್ಚುವರಿ ಅಂಕಗಳಿಸಿದ ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ ಪುರಸ್ಕರಿಸಲು ಈ ನಿಧಿಯಿಂದ ಉಪಯೋಗಿಸಿ ಕೊಳ್ಳಲಾಗುವುದು.<br>(ಋ) ಸದಸ್ಯರ ಮರಣೋತ್ತರ ನಿಧಿ– ಸಂಘದ ಸದಸ್ಯರು ಮರಣ ಹೊಂದಿದಾಗ ಅವರ ನಾಮನಿರ್ದೇಶನದಾರರಿಗೆ ಸಂಘದ ವತಿಯಿಂದ ರೂ. 3,000/– ಮೊತ್ತವನ್ನು ನೀಡಲಾಗುವುದು. ಈ ಮೊತ್ತವು ಕಾಲಕಾಲಕ್ಕೆ ಸರ್ವ ಸದಸ್ಯರ ಸಭೆಯಲ್ಲಿ ನಿಗದಿಪಡಿಸಿದ ಮೊತ್ತಕ್ಕೆ ಅನುಗುಣವಾಗಿರುತ್ತದೆ.<br>(ೠ) ಲಾಭಾಂಶ ಸಮೀಕರಣ ನಿಧಿ – | |

| | | | |
|---|---|---|---|
| | ಈ ನಿಧಿಯ ಮೊತ್ತವನ್ನು ಶೇಕಡವಾರು ಲಾಭಾಂಶ ಪಾವತಿಯಲ್ಲಿ ಹೆಚ್ಚುವರಿ ಮೊತ್ತದ ವ್ಯತ್ಯಾಸವನ್ನು ಸರ್ವ ಸದಸ್ಯರ ಸಭೆಯ ಅನುಮೋದನೆಯಂತೆ ಈ ನಿಧಿಯಿಂದ ಹೊಂದಾಣಿಕೆ ಮಾಡಿಕೊಳ್ಳಬಹುದು.<br>(ಎ) ಜಾಹಿರಾತು/ಪ್ರಚಾರ ನಿಧಿ: ವೃತ್ತಪತ್ರಿಕೆಗಳಲ್ಲಿ ಸಂಘಕ್ಕೆ ಸಂಬಂಧಪಟ್ಟ ಜಾಹಿರಾತು ನೀಡಲು, ಇತರೆ ಸಂಸ್ಥೆಗಳ ಸ್ಮರಣ ಸಂಚಿಕೆಗಳಿಗೆ, ಸಹಕಾರ ಇಲಾಖೆಯಿಂದ ಸಹಕಾರಕ್ಕೆ ಸಂಬಂಧಪಟ್ಟ ಕಾರ್ಯಕ್ರಮಗಳಿಗೆ ಜಾಹಿರಾತು/ದೇಣಿಗೆ ನೀಡಲು ಮನವಿ ಬಂದಾಗ, ಇನ್ನಿತರೇ ಸಂಘದ ಮಾಹಿತಿಗಳನ್ನು ಸದಸ್ಯರಿಗೆ ಕರಪತ್ರಗಳ ಮೂಲಕ ನೀಡಲು ಮತ್ತು ಸಂಘಕ್ಕೆ ಸಂಬಂಧಿಸಿದಂತೆ ಇನ್ನಾವುದೇ ಜಾಹಿರಾತು ನೀಡಲು ಆಡಳಿತ ಮಂಡಲಿಯ ತೀರ್ಮಾನದಂತೆ ಈ ನಿಧಿಯಲ್ಲಿನ ಮೊತ್ತವನ್ನು ಉಪಯೋಗಿಸುವುದು.<br>(ಏ) ಸಿಬ್ಬಂದಿ ವಿದ್ಯಾ ನಿಧಿ:-ಸಂಘದ ಸಿಬ್ಬಂದಿ ವರ್ಗದವರಿಗೆ ತರಬೇತಿ ನೀಡಲು ತಗಲುವ ವೆಚ್ಚಗಳನ್ನು ಆಡಳಿತ ಮಂಡಲಿಯ ತೀರ್ಮಾನದಂತೆ ಈ ನಿಧಿಯಿಂದ ಉಪಯೋಗಿಸುವುದು.<br>(ಐ) ಸುವರ್ಣ ಮಹೋತ್ಸವ ನಿಧಿ:- ಸಂಘದ ಸುವರ್ಣ ಮಹೋತ್ಸವದ ಆಚರಣೆಗಾಗಿ ಕಾಯ್ದಿರಿಸಿರುವ ನಿಧಿ ಆ ಸುಸಂಧರ್ಭದಲ್ಲಿ ಉಪಯೋಗಿಸುವುದು.<br>(ಒ) ಶತಮಾನೋತ್ಸವ ನಿಧಿ: ಸಂಘದ ಶತಮಾನೋತ್ಸವದ ಆಚರಣೆಗಾಗಿ ಕಾಯ್ದಿರಿಸಿರುವ ನಿಧಿ ಆ ಸುಸಂಧರ್ಭದಲ್ಲಿ ಉಪಯೋಗಿಸುವುದು.<br>(ಓ) ಸದಸ್ಯರ ಲಾಭಾಂಶ ಆಡಳಿತ ಮಂಡಲಿಯ ಶಿಫಾರಸ್ಸಿನಂತೆ ಸರ್ವಸದಸ್ಯರ ಸಭೆಯಲ್ಲಿ ನಿರ್ಧರಿಸುವ ದರದಲ್ಲಿ ಇರತಕ್ಕದ್ದು. | ಈ ನಿಧಿಯ ಮೊತ್ತವನ್ನು ಶೇಕಡವಾರು ಲಾಭಾಂಶ ಪಾವತಿಯಲ್ಲಿ ಹೆಚ್ಚುವರಿ ಮೊತ್ತದ ವ್ಯತ್ಯಾಸವನ್ನು ಸರ್ವ ಸದಸ್ಯರ ಸಭೆಯ ಅನುಮೋದನೆಯಂತೆ ಈ ನಿಧಿಯಿಂದ ಹೊಂದಾಣಿಕೆ ಮಾಡಿಕೊಳ್ಳಬಹುದು.<br>(ಎ) ಜಾಹಿರಾತು/ಪ್ರಚಾರ ನಿಧಿ: ವೃತ್ತಪತ್ರಿಕೆಗಳಲ್ಲಿ ಸಂಘಕ್ಕೆ ಸಂಬಂಧಪಟ್ಟ ಜಾಹಿರಾತು ನೀಡಲು, ಇತರೆ ಸಂಸ್ಥೆಗಳ ಸ್ಮರಣ ಸಂಚಿಕೆಗಳಿಗೆ, ಸಹಕಾರ ಇಲಾಖೆಯಿಂದ ಸಹಕಾರಕ್ಕೆ ಸಂಬಂಧಪಟ್ಟ ಕಾರ್ಯಕ್ರಮಗಳಿಗೆ ಜಾಹಿರಾತು/ದೇಣಿಗೆ ನೀಡಲು ಮನವಿ ಬಂದಾಗ, ಇನ್ನಿತರೇ ಸಂಘದ ಮಾಹಿತಿಗಳನ್ನು ಸದಸ್ಯರಿಗೆ ಕರಪತ್ರಗಳ ಮೂಲಕ ನೀಡಲು ಮತ್ತು ಸಂಘಕ್ಕೆ ಸಂಬಂಧಿಸಿದಂತೆ ಇನ್ನಾವುದೇ ಜಾಹಿರಾತು ನೀಡಲು ಆಡಳಿತ ಮಂಡಲಿಯ ತೀರ್ಮಾನದಂತೆ ಈ ನಿಧಿಯಲ್ಲಿನ ಮೊತ್ತವನ್ನು ಉಪಯೋಗಿಸುವುದು.<br>(ಏ) ಸಿಬ್ಬಂದಿ ವಿದ್ಯಾ ನಿಧಿ:-ಸಂಘದ ಸಿಬ್ಬಂದಿ ವರ್ಗದವರಿಗೆ ತರಬೇತಿ ನೀಡಲು ತಗಲುವ ವೆಚ್ಚಗಳನ್ನು ಆಡಳಿತ ಮಂಡಲಿಯ ತೀರ್ಮಾನದಂತೆ ಈ ನಿಧಿಯಿಂದ ಉಪಯೋಗಿಸುವುದು.<br>(ಐ) ಸುವರ್ಣ ಮಹೋತ್ಸವ ನಿಧಿ:- ಸಂಘದ ಸುವರ್ಣ ಮಹೋತ್ಸವದ ಆಚರಣೆಗಾಗಿ ಕಾಯ್ದಿರಿಸಿರುವ ನಿಧಿ ಆ ಸುಸಂಧರ್ಭದಲ್ಲಿ ಉಪಯೋಗಿಸುವುದು.<br>(ಒ) ಶತಮಾನೋತ್ಸವ ನಿಧಿ: ಸಂಘದ ಶತಮಾನೋತ್ಸವದ ಆಚರಣೆಗಾಗಿ ಕಾಯ್ದಿರಿಸಿರುವ ನಿಧಿ ಆ ಸುಸಂಧರ್ಭದಲ್ಲಿ ಉಪಯೋಗಿಸುವುದು.<br>(ಓ) ಸದಸ್ಯರ ಲಾಭಾಂಶ ಆಡಳಿತ ಮಂಡಲಿಯ ಶಿಫಾರಸ್ಸಿನಂತೆ ಸರ್ವಸದಸ್ಯರ ಸಭೆಯಲ್ಲಿ ನಿರ್ಧರಿಸುವ ದರದಲ್ಲಿ ಇರತಕ್ಕದ್ದು. | |

| | | | |
|---|---|---|---|
| | ಈ ಮೇಲಿನ ನಿಧಿಗಳಲ್ಲಿ ಧರ್ಮದ ನಿಧಿ, ವಿದ್ಯಾ ನಿಧಿ, ಸದಸ್ಯರ ಮರಣೋತ್ತರ ನಿಧಿ, ಜಾಹಿರಾತು ನಿಧಿಯನ್ನು ಹೊರತು ಪಡಿಸಿ ಮಿಕ್ಕ ಎಲ್ಲಾ ನಿಧಿಗಳನ್ನು ಈಯರ್ ಮಾರ್ಕ್ ಮಾಡಿ ಹೂಡಿಕೆಯಲ್ಲಿ ತೊಡಗಿಸಲಾಗುವುದು. | ಈ ಮೇಲಿನ ನಿಧಿಗಳಲ್ಲಿ ಧರ್ಮದ ನಿಧಿ, ವಿದ್ಯಾ ನಿಧಿ, ಸದಸ್ಯರ ಮರಣೋತ್ತರ ನಿಧಿ, ಜಾಹಿರಾತು ನಿಧಿಯನ್ನು ಹೊರತು ಪಡಿಸಿ ಮಿಕ್ಕ ಎಲ್ಲಾ ನಿಧಿಗಳನ್ನು ಈಯರ್ ಮಾರ್ಕ್ ಮಾಡಿ ಹೂಡಿಕೆಯಲ್ಲಿ ತೊಡಗಿಸಲಾಗುವುದು. | |

**ಮೇಲ್ಕಾಣಿಸಿದ ಉಪನಿಯಮ ತಿದ್ದುಪಡಿಯು ಬಹುಮತದಿಂದ ಅಂಗೀಕಾರವಾಯಿತು.**

ಸೂಚಕರು: :(ಸದಸ್ಯತ್ವದ ಸಂಖ್ಯೆ: 7953) ತನುಜಾ, (ಸದಸ್ಯತ್ವದ ಸಂಖ್ಯೆ:3247) ಆಂಡಾಳ್ ಗೋಪಾಲಸ್ವಾಮಿ

ಅನುಮೋದಕರು: (ಸದಸ್ಯತ್ವದ ಸಂಖ್ಯೆ: 3607) ಸಿ ರಾಕೇಶ್ ದತ್ತ, (ಸದಸ್ಯತ್ವದ ಸಂಖ್ಯೆ: 5629) ಶ್ರೀಕಾಂತ, (ಸದಸ್ಯತ್ವದ ಸಂಖ್ಯೆ: 4083),ಡಿ ಎನ್ ಕೃಷ್ಣಮೂರ್ತಿ, (ಸದಸ್ಯತ್ವದ ಸಂಖ್ಯೆ: 1929) ಜಗದೀಶ್

**15. ಸಂಘದ ಹಾಲಿ ನಿರ್ದೇಶಕರುಗಳಿಗೆ ಮತ್ತು ಅವರ ಸಂಬಂಧಿಕರಿಗೆ ಸಂಘದಿಂದ ನೀಡಲಾದ ಸಾಲಗಳ ಬಾಕಿ, ಸುಸ್ತಿಬಾಕಿ ಯಾವುದಾದರೂ ಇದ್ದರೆ ಅವುಗಳ ವಸೂಲಿಗಾಗಿ ಕೈಗೊಂಡ ಕ್ರಮದ ಪರಿಶೀಲನೆ:**

ಪ್ರಭಾರ ಕಾರ್ಯದರ್ಶಿಯವರು ಈ ವಿಷಯವನ್ನು ಸಭೆಗೆ ಮಂಡಿಸಿ ಹಾಲಿ ಆಡಳಿತ ಮಂಡಲಿ ಸದಸ್ಯರುಗಳ ಸಾಲ ಪಡೆದಿರುವ ಮತ್ತು ಅವರು ಜಂಟಿದಾರರಾಗಿರುವ ಹಾಗೂ ಅವರ ಸಂಬಂಧಿಕರಿಗೆ ನೀಡಲಾಗಿರುವ ಸಾಲಗಳ ಮಾಹೆಯಾನ ಕಂತನ್ನು ಕ್ರಮವಾಗಿ ಪಾವತಿ ಮಾಡುತ್ತಿರುವುದರಿಂದ ಸುಸ್ತಿ ಬಾಕಿ ಪ್ರಮೇಯ ಉದ್ಭವವಾಗಿರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು.

ಸೂಚಕರು:(ಸದಸ್ಯತ್ವದ ಸಂಖ್ಯೆ:1152) ಸುರೇಶ್ ಕುಮಾರ್ ಎನ್, ಸುದರ್ಶನ್

ಅನುಮೋದಕರು: (ಸದಸ್ಯತ್ವದ ಸಂಖ್ಯೆ:4083) ಡಿ ಎನ್ ಕೃಷ್ಣಮೂರ್ತಿ, ಮಂಜುನಾಥ್

**16.ಸದಸ್ಯರಿಂದ ಸ್ವೀಕೃತವಾದ ಸಲಹೆ/ಸೂಚನೆಗಳ ಪರಿಶೀಲನೆ.**

ಶ್ರೀ ಕೆ ಎನ್ ಶ್ರೀನಿವಾಸ ಶರ್ಮ ರವರು ಹಿರಿಯ ಸದಸ್ಯರ ಸನ್ಮಾನ ನಿಧಿಯಲ್ಲಿರುವ ಮೊತ್ತವನ್ನು ಏನು ಮಾಡುತ್ತೀರಾ ಎಂದು ಪ್ರಶ್ನಿಸಿದರು. ಅಧ್ಯಕ್ಷರು ಆ ನಿಧಿಯಲ್ಲಿ ಇರುವ ಮೊತ್ತ ವೆಚ್ಚವಾಗುವ ತನಕ ಹಾಗೆಯೇ ಮುಂದುವರೆಯುತ್ತದೆ ಎಂದರು. ಸಂಘದ ಅಧ್ಯಕ್ಷರು ಸರ್ವ ಸದಸ್ಯರ ಸಭೆಗೆ ಸದಸ್ಯರಾದ ಶ್ರೀ ಎಂ ಆರ್ ಕೇಶವಪ್ರಸಾದ್ ಹಾಗೂ ಶ್ರೀ ಕೆ ಎನ್ ಶ್ರೀನಿವಾಸ ಶರ್ಮರವರಿಂದ ಬಂದಿರುವ ಪತ್ರ ಉಪನಿಯಮದ ತಿದ್ದುಪಡಿಗೆ ಸಂಬಂಧಿಸಿದ್ದು, ಈ ವಿಷಯಕ್ಕೆ ಅಸಮ್ಮತಿ ಸೂಚಿಸಿರುವ ಕಾರಣ ಉತ್ತರಿಸಲು ಬರುವುದಿಲ್ಲ ಎಂಬುದಾಗಿ ತಿಳಿಸಿದರು. ನಂತರ ಶ್ರೀ ಚಂದ್ರಶೇಖರ್‌ರವರಿಂದ ಬಂದ ಪತ್ರಕ್ಕೆ ಈಗಾಗಲೇ ಉತ್ತರ ಪಡೆದಿರುವುದಾಗಿ ಕೇಳಿದರು. ಚಂದ್ರಶೇಖರ್‌ರವರು ಮಾತನಾಡಿ ಸ್ಥಿರಾಧಾರ ಸಾಲದ ಬಗ್ಗೆ ಯಾವುದೇ ಸ್ಪಷ್ಟತೆ ನೀಡಿಲ್ಲ, ಸ್ಥಿರಾಧಾರ ಸಾಲ ಮಂಜೂರಾಗಿರುವ ಎಂ ಡಿ ಶ್ರೇಷಾದ್ರಿಯವರದ್ದು ಆಶಾಮಂದಿರದಲ್ಲಿ ಮಂಜೂರಾದ ಆಸ್ತಿ ಇದಕ್ಕೆ ಯಾವ ಆಧಾರಮೇಲೆ ಸಾಲ ಮಂಜೂರು ಮಾಡಿದಿರಾ, ಹಾಗೇ ಲಕ್ಷ್ಮೀನರಸಿಂಹ ಮತ್ತು ಪರಮೇಶ್ವರ್ ಎಂಬುವರಿಗೆ take-overಸಾಲಗಳ ಮಂಜೂರು ಮಾಡಿದ್ದು ಹಾಗೂ ಇನ್ನು ಮೂರು ಹಳೇ ಪ್ರಕರಣಗಳಿಗೆ ಯಾವ ಕ್ರಮ ಕೈಗೊಂಡಿರುವ ಬಗ್ಗೆ ಪ್ರಶ್ನಿಸಿದರು ಮತ್ತು 107 ವಿವಿಧ ಡಿಕ್ರಿ ಪ್ರಕರಣಗಳಿದ್ದು ಇವುಗಳಿಗೆ ಕಾನೂನು ಕ್ರಮ ಕೈಗೊಂಡಿದಿರುವ ಬಗ್ಗೆ ಪ್ರಶ್ನಿಸಿದರು. ಜೊತೆಗೆ ಸಾಲ ಮಂಜೂರು ಮಾಡುವಾಗ ಪರಿಶೀಲಿಸಿ ಮುಂದುವರಿಯಬೇಕಾಗಿ ಮತ್ತು ದಾವೆಗೆ ಹೋಗಿರುವ ಸ್ಥಿರಾಧಾರ ಸಾಲದ ಆಸ್ತಿಗಳಿಗೆ ನಮ್ಮ ಸಂಘದ ಆಸ್ತಿ ಎಂಬ ಫಲಕಗಳನ್ನು ಹಾಕುವ ವ್ಯವಸ್ಥೆ ಮಾಡಿದಲ್ಲಿ ತಮ್ಮ ಸಂಪೂರ್ಣ ಸಹಕಾರವಿರುವುದಾಗಿ ನೀಡಿದರು. ಅಧ್ಯಕ್ಷರು

ತಾವು ಈಗಾಗಲೇ ಎಲ್ಲಾ ಅಗತ್ಯ ಕಾನೂನು ಕ್ರಮಗಳನ್ನು ಜರುಗಿಸುತ್ತಿದ್ದು ಹಾಗೂ ಮುಂದಿನ ದಿನಗಳಲ್ಲಿ ಯಾವ ಪ್ರಕರಣಗಳಿಲ್ಲದ ಹಾಗೆ ಸಾಲ ವಸೂಲಾತಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಎಂ ಆರ್ ಕೇಶವಪ್ರಸಾದ್‌ರವರು ಮಾತನಾಡಿ ತಾವು ನಡಾವಳಿ ಪ್ರತಿಗಳನ್ನು ಕೇಳಿದ್ದು, ತಮಗೆ ನೀಡಿರುವುದಿಲ್ಲ ಎಂದು ಹಾಗೂ ಈ ಪ್ರತಿಗಳನ್ನು ಪಡೆದುಕೊಳ್ಳಲು ಕಾನೂನು ರೀತ್ಯ High Court judgement ಹಾಗೂ Society Registration Act ಪ್ರಕಾರ ತಾವು ನೀಡಬೇಕಾಗುತ್ತದೆ. ಇದರ ಪ್ರತಿಗಳನ್ನು ಸಂಘಕ್ಕೆ ಒದಗಿಸುವುದಾಗಿ ಹಾಗೂ ನಡಾವಳಿ ಪ್ರತಿಗಳನ್ನು ತಮಗೆ ನೀಡದಿದ್ದಲ್ಲಿ ತಾವು ಮುಂದಿನ ಕ್ರಮವನ್ನು ಕೈಗೊಳ್ಳಬೇಕಾಗುವ ಬಗ್ಗೆ ತಿಳಿಸಿದರು. ಅಧ್ಯಕ್ಷರು ಮಾತನಾಡಿ ನಾವು ಸಹ ಕಾನೂನು ಸಲಹೆಗಾರರಿಂದ ಸಲಹೆ ಪಡೆದು ತಮಗೆ ನಿರ್ದೇಶಕ ಮಂಡಲಿ ಸಭೆಯ ನಡಾವಳಿಗಳನ್ನು ನೀಡಿರುವುದಿಲ್ಲ, ಆದಾಗ್ಯೂ ತಾವು High Court judgement ಹಾಗೂ Society Registration Act ಪ್ರಕಾರ ವಿವರಣೆ ನೀಡಿದರೆ ಪರಿಶೀಲಿಸುವುದಾಗಿ ತಿಳಿಸಿದರು. ಸದಸ್ಯರಾದ ಶ್ರೀ ಸುರೇಶ್ ಕುಮಾರ್ ಮಾತನಾಡಿ ಸುಸ್ತಿದಾರ ಸಾಲ ಕಾನೂನು ರೀತ್ಯ ಕೋರ್ಟ್‌ನಲ್ಲಿ ದಾವಾ ಹೂಡಿದ್ದು ಆ ವ್ಯಕ್ತಿ ಸಾಲ ಒಂದೇ ಬಾರಿ ಮರುಪಾವತಿಗೆ ಬಂದಲ್ಲಿ ಅವರಿಗೆ ಸಂಸ್ಥೆಯಿಂದ ಬಡ್ಡಿಯಲ್ಲಿ ರಿಯಾಯತಿ ನೀಡಲು ಸಾಧ್ಯತೆ ಇದೆಯಾ ಎಂದರು, ಅಧ್ಯಕ್ಷರು ಉತ್ತರಿಸಿ ಮರುಪಾವತಿಗೆ ಸಾಲದ ಕರಾರು ಪತ್ರಕ್ಕೆ ಸಹಿ ಹಾಕಿ ಒಪ್ಪಂದ ಮಾಡಿಕೊಂಡ ಮೇಲೆ ರಿಯಾಯತಿ ಪ್ರಶ್ನೆಗೆ ಅವಕಾಶವಿರುವುದಿಲ್ಲ ಹಾಗೂ ಸುಸ್ತಿದಾರರು ತಮ್ಮ ಆರ್ಥಿಕ ಮುಗ್ಗಟ್ಟಿನಿಂದಾಗಿ ಪರಿಸ್ಥಿತಿ ಸರಿಯಿಲ್ಲದವರು ಆಡಳಿತ ಮಂಡಳಿಗೆ ಪತ್ರ ನೀಡಿದಲ್ಲಿ, ಆಡಳಿತ ಮಂಡಳಿ ತೀರ್ಮಾನ ಕೈಗೊಂಡ ನಂತರ ಅಂಚೆ ವೆಚ್ಚ ರಿಯಾಯತಿ ನೀಡುವ ಸಾಧ್ಯತೆ ಇರುತ್ತದೆ ಎಂದರು. ಸದಸ್ಯರಾದ ಶ್ರೀ ಶ್ರೀನಿವಾಸ ಶರ್ಮಾರವರು ತಾವು ನೀಡಿರುವ ಪ್ರಶ್ನೆಗಳಿಗೆ ಉತ್ತರ ಸಂಸ್ಥೆಯಿಂದ ಲಿಖಿತ ರೂಪದಲ್ಲಿ ನೀಡಿಲ್ಲ ಹಾಗಾಗಿ ಯಾವಾಗ ಸಂಪರ್ಕಿಸಬೇಕು ಎಂದು ಕೇಳಿದರು. ಅಧ್ಯಕ್ಷರು ತಾವು ಆದಷ್ಟು ಬೇಗ ಸಂಪರ್ಕಿಸುವುದಾಗಿ ತಿಳಿಸಿದರು.

**17.ಅಧ್ಯಕ್ಷರ ಅನುಮತಿಯೊಂದಿಗೆ ಬರಬಹುದಾದ ಇತರೆ ವಿಷಯಗಳು:**

ಯಾವುದೇ ಸಲಹೆ ಸೂಚನೆಗಳು ಬಂದಿರುವುದಿಲ್ಲ.

**18.ಅಧ್ಯಕ್ಷರ ಭಾಷಣ:** ಅಧ್ಯಕ್ಷರು ಮಾತನಾಡಿ, ಆತ್ಮೀಯ ಸದಸ್ಯ ಬಾಂಧವರಿಗೆ ಸ್ವಾಗತವನ್ನು ಕೋರುವುದರ ಮೂಲಕ ಪ್ರಾರಂಭಿಸಿದರು. ಮೊದಲಿಗೆ ಸದಸ್ಯರಾದ ಶ್ರೀ ಡಿ ಎನ್ ಕೃಷ್ಣಮೂರ್ತಿ, ಶ್ರೀ ಶ್ರೀನಿವಾಸ ಶರ್ಮ ಕೆ ಎನ್, ಶ್ರೀ ಚಂದ್ರಶೇಖರ್, ಶ್ರೀ ರಮೇಶ್ ಕುಮಾರ್, ಶ್ರೀ ಎಂ ಆರ್ ಕೇಶವಪ್ರಸಾದ್, ಶ್ರೀ ರಾಮಕೃಷ್ಣ, ಹಿರಿಯ ಸದಸ್ಯರಾದ ವೆಂಕಟಸುಬ್ಬು, ಶ್ರೀ ಜಯಶೀಲ ರಾವ್ ಮೊದಲಾದರು ಕೋರಂ ಬಗ್ಗೆ ಮಾಹಿತಿ ನೀಡಿದರ ಬಗ್ಗೆ ಹಾಗೂ ಈ ಎಲ್ಲಾ ವಿಷಯಗಳು ಇತರೆ ಸದಸ್ಯರಿಗೆ ತಿಳುವಳಿಕೆ ನೀಡಿದಕ್ಕೆ ಮತ್ತು ಸಭೆಯ ಪ್ರಾರಂಭದಿಂದ ಕಡೆಯತನಕ ನಡೆದ ಚರ್ಚೆಗಳಲ್ಲಿ ಭಾಗವಹಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸಿದರು. ಹಾಗೇ ಸಂಘದ ಪ್ರವರ್ತಕರು ಹಾಗೂ ಮಾಜಿ ಅಧ್ಯಕ್ಷರಾದ ಶ್ರೀ ಹೆಚ್ ಆರ್ ರಾಮಚಂದ್ರರಾವ್ ಅವರ ಮಗನಾದ ಶ್ರೀ ಹೆಚ್ ಆರ್ ರಾಘವೇಂದ್ರರಾವ್‌ರವರು ಸಂಘದ ಬಗ್ಗೆ ತಮ್ಮ ಅನುಭವನ್ನು ಹಂಚಿಕೊಂಡರು ಜೊತೆಗೆ ಸಂಘವನ್ನು ಪ್ರಶಂಸೆ ಮಾಡಿದ್ದನ್ನು ಸ್ಮರಿಸಿದರು. ಸದಸ್ಯರಾದ ಶ್ರೀ ರಾಮಕೃಷ್ಣರವರು ಸಂಘದ ಬಗ್ಗೆ ಹೊಂದಿರುವ ವಿಶ್ವಾಸವನ್ನು ಶ್ಲಾಘಿಸಿದರು. ಚರ್ಚೆಯಲ್ಲಿ ಭಾಗವಹಿಸಿದ ತಮ್ಮೆಲರನ್ನು ನಾವು ಯಾರು ವಿರೋಧಿಗಳೆಂದು ಭಾವಿಸಿಲ್ಲ, ಇಷ್ಟು ಸುದೀರ್ಘವಾಗಿ ವಿರೋಧವಾಗಿ ಚರ್ಚೆ ಮಾಡುವ ಅವಶ್ಯಕತೆ ಇತ್ತಾ ಎಂಬುದಾಗಿ ಪ್ರಶ್ನಿಸಿದರು. ಇದರ ಬದಲು ಸಂಘಕ್ಕೆ ಬಂದು ತಿಳಿ ಹೇಳಿದರೆ ಕಾನೂನು ಚೌಕಟ್ಟಿನಲ್ಲಿ ಸರಿ ಪಡಿಸಿಕೊಳ್ಳಬಹುದಾದ ವಿಷಯಗಳನ್ನು ಅಲ್ಲೇ ಸರಿಪಡಿಸಿಕೊಳ್ಳಬಹುದಿತ್ತು ಇಷ್ಟು ಸಮಯ ವ್ಯರ್ಥವಾಗುತ್ತಿರಲಿಲ್ಲ ಎಂದರು. ಪ್ರತಿ ವರ್ಷ ಚರ್ಚೆಗೆ ಬರುವ ವಿಷಯಗಳಾದ ಬೋನಸ್/ಎಕ್ಸ್ ಗ್ರೇಷಿಯಾ, ಸಾದಿಲ್ವಾರು ಹಾಗೂ ನಿಧಿಗಳ ಹಂಚಿಕೆಗಳನ್ನು, ಕೆಲವೊಂದು ತಪ್ಪುಗಳನ್ನು ಸರಿಪಡಿಸಿಕೊಳ್ಳುವುದಾಗಿ ತಿಳಿಸಿದರು. ಲಾಭಾಂಶವನ್ನು ಸದಸ್ಯರ ಬೇಡಿಕೆಯಂತೆ ಶೇ.1 ಹೆಚ್ಚಿಸಿ ಶೇ.11ರಂತೆ ವಿತರಿಸಲಾಗುವುದು. ಶ್ರೀ ಕೆ ಎನ್ ಶ್ರೀನಿವಾಸ ಶರ್ಮಾ ಮತ್ತು ಡಿ ಎನ್ ಕೃಷ್ಣಮೂರ್ತಿರವರು ವಿಜಯನಗರ ಶಾಖೆಯ ಬಗ್ಗೆ ಹಾಗೂ ಅದರ ಲಾಭದ

ಬಗ್ಗೆ ಪ್ರಶ್ನಿಸಿದಕ್ಕೆ ಅಧ್ಯಕ್ಷರು ಉತ್ತರಿಸಿ ಮುಂದಿನ ದಿನಗಳಲ್ಲಿ ಶಾಖೆ ಲಾಭಗಳಿಸುವ ಬಗ್ಗೆ ನಿರ್ದೇಶಕ ಮಂಡಳಿಯವರೊಂದಿಗೆ ನಿರಂತರ ಚರ್ಚೆ ಹಾಗೂ ಯೋಜನೆಗಳನ್ನು ಹಮ್ಮಿಕೊಂಡಿದ್ದು ಒಂದು ಆಸ್ತಿ ಕೈಬಿಟ್ಟು ಹೊಂದರೆ ಪುನ: ಸಂಪಾದಿಸುವುದು ಬಹಳ ಕಷ್ಟ. ಹಾಗಾಗಿ ವಿಜಯನಗರ ಶಾಖೆಯನ್ನು Extention Counterರಾಗಿ ಮಾಡುವುದರ ಬಗ್ಗೆ ನಿರ್ದೇಶಕ ಮಂಡಳಿಯಲ್ಲಿ ಚರ್ಚೆ ನಡೆಸುತ್ತಿರುವುದಾಗಿ ತಿಳಿಸಿದರು. ಹಾಗೇ ನಾವು ಉಪಯೋಗಿಸುತ್ತಿರುವ Computer Software ಬದಲಾವಣೆ ಮಾಡುವ ಬಗ್ಗೆ ಮಾಹಿತಿ ನೀಡಿದರು, ಮುಂದೆ ಬದಲಾವಣೆ ಮಾಡಿಕೊಂಡ ತಂತ್ರಾಂಶದಲ್ಲಿ ವಿಜಯನಗರವನ್ನು ಸೇರಿಸಿಕೊಂಡು ಒಂದೇ ಲೆಕ್ಕಪತ್ರಗಳನ್ನು ಹೊಂದುವ ಹಲವಾರು Updatesಗಳಾಗುವ ಬಗ್ಗೆ ತಮಗೆ ನಿರೀಕ್ಷೆ ಇರುವುದಾಗಿ ತಿಳಿಸಿದರು.

ಮಹಿಳೆಯರಿಗಾಗಿ ವಿಶೇಷ ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸುವಂತೆ ಈ ಹಿಂದೆ ತಿಳಿಸಲಾಗಿತ್ತು, ಆದರೆ ಜಾಗತಿಕ ವೈರಸ್ ಕೋವಿಡ್ ಹರಡುವಿಕೆಯಿಂದ ಯಾವುದೇ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಸಾಧ್ಯವಾಗಿರುವುದಿಲ್ಲ, ಮುಂದಿನ ದಿನದಲ್ಲಿ ಅನುಷ್ಠಾನ ಮಾಡಲಾಗುವುದು, ಎಲ್ಲರು ಇದರ ಅನುಕೂಲ ಪಡೆದುಕೊಳ್ಳಲು ತಿಳಿಸಿದರು.  ಸಂಘದ ಅಭಿವೃದ್ಧಿಗೆ ಸದಸ್ಯರಿಗೆ ಹೆಚ್ಚಿನ ವ್ಯವಹಾರಕ್ಕೆ ಅನುಕೂಲ ಮತ್ತು ಸಾಲ ವಿತರಣೆಯ ಯೋಜನೆಗಳನ್ನು ಮಾಡುವ ದೃಷ್ಟಿಯಿಂದ ಇತರೆ ಸಂಘ ಸಂಸ್ಥೆಗಳಿಗೆ ಭೇಟಿ ನೀಡಿ ಅಧ್ಯಯನ ಕಾರ್ಯಕ್ರಮ/ಶೈಕ್ಷಣಿಕ ಪ್ರವಾಸವನ್ನು ಹಮ್ಮಿಕೊಳ್ಳುವ ಯೋಜನೆಯನ್ನು ಮಾಡಲಾಗಿದ್ದು, ಅಲ್ಲಿ ಅಭಿವೃಧ್ಧಿಪಡಿಸಿರುವ ಸದಸ್ಯರಿಗೆ ಅನುಕೂಲವಾಗುವಂತೆ ಯೋಜನೆಗಳನ್ನು ಕಾರ್ಯಗತ ಮಾಡಲಾಗುವುದು ಎಂದು ತಿಳಿಸಿದರು.

ಸಂಘದ ಕಛೇರಿಯಲ್ಲಿ ಸದಸ್ಯರ ಸಲಹೆ–ಸೂಚನೆಗಾಗಿ ‘‘ಸಲಹೆ ಪುಸ್ತಕ’’ವೊಂದನ್ನು ಇರಿಸಲಾಗಿದ್ದು, ಮಾನ್ಯ ಸದಸ್ಯರು ತಮ್ಮ ಸಲಹೆ ಸೂಚನೆಗಳನ್ನು ಅದರಲ್ಲಿ ಬರೆಯುವ ಮೂಲಕ ಸಂಘದ ಅಭಿವೃದ್ಧಿಗಾಗಿ ಸಹಕರಿಸಬೇಕಾಗಿ, ಹಾಗೂ ಕಾನೂನಿನ ಕೌಟ್ಟಿನಲ್ಲಿದ್ದರೆ ಅದರ ಅನುಷ್ಠಾನಕ್ಕೆ ತರಲು ಪ್ರಯತ್ನಿಸುವುದಾಗಿ ತಿಳಿಸಿದರು.


ಕರೋನ ಸಮಯದಲ್ಲಿ ಸಂಘವು ಅತೀ ಹೆಚ್ಚು ಲಾಭಗಳಿಸಲು ಸಹಕರಿಸಿ ಎಲ್ಲಾ ಸದಸ್ಯರಿಗೂ ವಿಶೇಷ ಧನ್ಯವಾದಗಳನ್ನು ಅರ್ಪಿಸಿದರು. ಕಳೆದ ಎರಡು ವರ್ಷದಿಂದ ವರ್ಚ್ಯುಯಲ್ ಮೀಟಿಂಗ್ ಇದ್ದ ಕಾರಣ ವೈಯಕ್ತಿಕವಾಗಿ ಧನ್ಯವಾದವನ್ನು ತಿಳಿಸಲು ಸಾಧ್ಯವಾಗಿರಲಿಲ್ಲ ಹಾಗಾಗಿ ಈಗ ತುಂಬು ಹೃದಯದ ಧನ್ಯವಾದಗಳು ಎಂದರು, ಇನ್ನು ಮುಂದೆ ಕೂಡ ಇದೇ ರೀತಿ ಸಹಸರಿಸಬೇಕಾಗಿ ಕೇಳಿಕೊಂಡರು. ಸಂಘದ ಅಭಿವೃದ್ಧಿಗೆ ಸಹಕರಿಸಿದ ಎಲ್ಲಾ ನಿರ್ದೇಶಕ ಮಂಡಲಿ ಸದಸ್ಯರಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ಅಭಿನಂದನೆಗಳನ್ನು ತಿಳಿಸಿದರು. ವಿಶೇಷವಾಗಿ ಶ್ರೀ ಶ್ರೀನಿವಾಸಶರ್ಮಾ ಕೆ ಎನ್ ರವರ ಸಂಘದ ಅಭಿವೃದ್ಧಿಗಾಗಿ  ಪರೋಕ್ಷವಾಗಿ ಸಲಹೆ ಸಹಕಾರಗಳೊಂದಿಗೆ ಮುಂದಿನ ದಿನಗಳಲ್ಲಿ ತವ್ಮೊಂದಿಗೆ ಸದಾ ಇರುತ್ತಾರೆ ಎಂಬುದಾಗಿ ಹೇಳಿದರು.  ಮತ್ತೊಮ್ಮೆ ಎಲ್ಲರಿಗೂ ಅನಂತ ಧನ್ಯವಾದವನ್ನು ತಿಳಿಸಿದರು.

**<u>19. ವಂದನಾರ್ಪಣೆ:</u>**

ನಿರ್ದೇಶಕರಾದ ಶ್ರೀ ಜಿ ಎನ್ ಸತೀಷರವರು ಮಾತನಾಡಿ, ವೇದಿಕೆ ಮೇಲೆ ಉಪಸ್ಥಿತರಾಗಿರುವ ಸಂಘದ ಅಧ್ಯಕ್ಷರಾದ ಶ್ರೀ ಸಿ ವಿ ಪಾರ್ಥಸಾರಥಿರವರಿಗೆ, ಉಪಾಧ್ಯಕ್ಷರಾದ ಶ್ರೀ ಹೆಚ್ ಎಸ್ ಪ್ರಶಾಂತ್ ತಾತಾಚಾರ್‌ರವರಿಗೆ, ಖಜಾಂಚಿಗಳಾದ ಶ್ರೀ ಎಂ ಡಿ ಗೋಪಿನಾಥ್‌ರವರಿಗೆ ವಂದನೆಗಳು. ಸಂಘದ ನಿರ್ದೇಶಕ ಮಂಡಲಿ ಸದಸ್ಯರಾದ ಶ್ರೀಯುತರಾದ  ಕೆ ನಾಗರಾಜ್,  ಎಂ ಆರ್ ಪ್ರೀತನ್, ಎನ್ ಪಣಿರಾಜ್, ಎಸ್ ಎನ್ ನಾಗಶಂಕರ, ಎಂ ಆರ್ ಬಾಲಕೃಷ್ಣ, ಎನ್ ಎಸ್ ರಂಗನಾಥ್, ಕೆ ಎನ್ ಅರುಣ್, ನಾಗೇಂದ್ರ, ಶ್ರೀಮತಿ ರೇಖಾ, ಶ್ರೀಮತಿ ಎಂ ಎನ್ ಸೌಮ್ಯ ಹಾಗೂ ಶ್ರೀಮತಿ ಎಸ್ ರಾಜಮ್ಮರವರಿಗೆ ವಂದನೆಗಳು, ಸಂಘದ ಕಾನೂನು ಸಲಹೆಗಾರರಾದ ಶ್ರೀ ಕೆ ಟಿ ಸ್ವಾಮಿ,  ಶ್ರೀ ಡಿ ಬಿ ಜೋಷಿ ಹಾಗೂ ಶ್ರೀ ಎಂ ಎನ್ ಶ್ರೀನಿವಾಸರವರಿಗೆ ವಂದನೆಗಳು, ಆಂತರಿಕ ಲೆಕ್ಕಪರಿಶೋಧಕರಾದ ಶ್ರೀ ವೆಂಕಟನರಸಿಂಹನ್‌ರವರಿಗೆ ಮತ್ತು 2021–22ನೇ ಸಾಲಿನ ಲೆಕ್ಕ ಪರಿಶೋಧನೆ ಮಾಡಿದ ಸನ್ನದು ಲೆಕ್ಕಿಗರಾದ ಶ್ರೀ ಕೆ ಎಸ್ ಸದಾಶಿವ ಮತ್ತು ಅವರ ಸಿಬ್ಬಂದಿಯವರಿಗೆ, ಸಂಘದ ಕಟ್ಟಡ ಮೌಲ್ಯಮಾಪಕರಾದ ಶ್ರೀ ಕೆ ಶ್ರೀನಿವಾಸ, ಸಂಘದ

ಟಿಡಿಎಸ್ ಸಲಹೆಗಾರರಾದ ಶ್ರೀ ಎನ್ ಡಿ ಶ್ರೀನಿವಾಸ್ ಮತ್ತು ಸಂಘದ ತೆರಿಗೆ ಸಲಹೆಗಾರರಾದ ಶ್ರೀ ಜಿ ಎನ್ ಅನಂತವರ್ಧನರವರಿಗೆ ವಂದನೆಗಳು ಮತ್ತು ನಮ್ಮ ಸಂಘದ ಸಿಬ್ಬಂದಿ ವರ್ಗದವರಿಗೂ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಈ ಕಾರ್ಯಕ್ರಮಕ್ಕೆ ನಿಗದಿತ ಸಮಯಕ್ಕೆ ಆಹಾರ ಸರಬರಾಜು ಮಾಡಿದವರಿಗೆ, ಅಚ್ಚುಕಟ್ಟಾಗಿ ವರದಿಪುಸ್ತಕವನ್ನು ಮುದ್ರಿಸಿಕೊಟ್ಟ ಮುದ್ರಕರಿಗೆ, ಮೈಕ್ ವ್ಯವಸ್ಥೆಮಾಡಿದವರಿಗೆ, ಫೋಟೋ, ಆಡಿಯೋ ಮತ್ತು ವಿಡಿಯೋ ವ್ಯವಸ್ಥೆಮಾಡಿದವರಿಗೆ, ಪೀಠೋಪಕರಣ ಸರಬರಾಜುದಾರರು, ರಕ್ಷಣಾ ಸಿಬ್ಬಂದಿಯವರಿಗೆ ಸಂಘದ ಪರವಾಗಿ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಈ ದಿನದ ಸಭೆಯ ಕಾರ್ಯಕ್ರಮದ ಯಶಸ್ವಿಗಾಗಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಶ್ರಮಿಸಿದ ಸಂಘದ ಎಲ್ಲಾ ಸದಸ್ಯ ಬಾಂಧವರಿಗೂ ಅನಂತಾನಂತ ಧನ್ಯವಾದಗಳನ್ನು ಸಲ್ಲಿಸಿದರು.

ರಾಷ್ಟ್ರಗೀತೆಯೊಂದಿಗೆ ಸಭೆಯ ಕಾರ್ಯಕಲಾಪಗಳನ್ನು ಮುಕ್ತಾಯಗೊಳಿಸಲಾಯಿತು.



ಪ್ರಭಾರ ಕಾರ್ಯದರ್ಶಿ



ಅಧ್ಯಕ್ಷರು